
ಸಂಪುಟ 24 ಸಂಚಿಕೆ 48
ಡಿಸೆಂಬರ್ 1, 2002 ಬೆಲೆ ರೂ. 3.00

ಐಕ್ಯರಂಗ

ದುಡಿಯುವ ಜನರ ಪ್ರಾಣ ಮಿತ್ರ



ವರದಕ್ಷಿಣೆಯ ಪೈಶಾಚಿಕ ಅವತಾರಗಳು



ಬಿಲ್‌ಗೇಟ್ ದಾನ ಮಾಡುತ್ತಿದ್ದಾನೆ ಹುಶಾರ್!


ವಿದ್ಯುತ್ ಕ್ಷೇತ್ರ ದಿವಾಳಿಯತ್ತ



ಗೋವು ಮತ್ತು ಗೋಮುಖ ವ್ಯಾಘ್ರರು

ಪಿಸುಮಾತಿನಲ್ಲೇ ಹೂಡಿದ ಪಿತೂರಿ....

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 5



ಕಳೆದ ಸಂಚಿಕೆಯಲ್ಲಿ...

ಸೂರ್ಯಮುಳಗದ ಸಾಮ್ರಾಜ್ಯದ ಸಾಮ್ರಾಟರು ಹಾಗೂ ಭಾರತದಲ್ಲಿನ ಅವರ ಪ್ರತಿನಿಧಿಗಳು ಮಾಡಿದ ದೊಡ್ಡ ತಪ್ಪು, ಜಯಪಾಲ್ ಸಿಂಗ್‌ರಿಂದ ಕೊಡಗಿನ ಕಲಿಯ ಭೇಟಿ, ಎಡವಿದ ಭಾವಿ ಕಮಾಂಡರ್ ಇನ್ ಛೀಫ್, ಜಯಪಾಲರ ಭಾವ ಭಂಗಿಗೆ ಬ್ರಿಟಿಷ್ ಮಹಿಳೆಯನ್ನು ಆಕರ್ಷಿಸಿದ ಬಗ್ಗೆ, ಸೈನಿಕನ ಮೇಲೆ ಎರಗಿದ ಬಗ್ಗೆ ಮತ್ತು ಶಾಂತಿ ಕಾಲದಲ್ಲಿ ಕೇವಲ ಲಕ್ಷ ಇದ್ದ ಭಾರತೀಯ ಸೈನಿಕರು ಯುದ್ಧ ಕಾಲದಲ್ಲಿ 25 ಲಕ್ಷಕ್ಕೇರಿದ್ದು... ಈ ಬಗ್ಗೆ ಓದಿರುವಿರಿ. ಮುಂದೆ ಓದಿ....

ಕನ್ನಡಕ್ಕೆ: **ವಿಶ್ವ ಕುಂದಾಪುರ**

ಹಿಂದೆಲ್ಲ ಭಾರತೀಯ ಪಾಳೇಗಾರಿ ಮುಖ್ಯಸ್ಥರು, ಉನ್ನತ ಭೂಮಾಲಿಕರು ಮತ್ತು ಉನ್ನತ ಅಧಿಕಾರಿಗಳ ಮಕ್ಕಳನ್ನು ಮಾತ್ರ ಭಾರತೀಯ ಸಶಸ್ತ್ರ ಪಡೆಗಳ ಅಧಿಕಾರಿಗಳಾಗಲು ಬ್ರಿಟಿಷ್ ಸಾಮ್ರಾಟರು ಅವಕಾಶ ನೀಡುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿತ್ತು. ಸಾವಿರಾರು ಸುಶಿಕ್ಷಿತ ಯುವಕ[illegible] ಸೇನೆಯ ಕಮಿಷನ್ಡ್ ಅಧಿಕಾ[illegible].

ಅ[illegible]ಲ್ಲ ಮುಖ್ಯವಾಗಿ ಬಂದದ್ದು ಕೆಲಸ ಹುಡುಕಿಕೊಂಡು. ಆದರೆ ಅವರು ಸುಶಿಕ್ಷಿತ ಹಾಗೂ ಸೂಕ್ಷ್ಮ ಮನಸ್ಸುಗಳನ್ನು ಹೊತ್ತುತಂದಿದ್ದರು.

ಸಾಮ್ರಾಜ್ಯಶಾಹಿ, ಅಧಿಕಾರಿಗಳ ನಿಕಟ ಸಂಪರ್ಕ, 'ಕೊಹೆಯರ್'ಗಳು (kohair)ಎಸಗಿದ ಸೊಕ್ಕಿನ ವೈಯಕ್ತಿಕ ಹಾಗೂ ರಾಷ್ಟ್ರೀಯ ಅಪಮಾನಗಳಿಂದಾಗಿ ಅವರು ಕಟ್ಟಾ ಬ್ರಿಟಿಷ್ ವಿರೋಧಿಗಳಾಗಿ ಪರಿವರ್ತಿತರಾದರು. ಯುದ್ಧ ಕೊನೆಗೊಂಡಿದ್ದ ಹಿನ್ನಲೆಯಲ್ಲಿ ಬ್ರಿಟಿಷರ ವಿರುದ್ಧ ಶಸ್ತ್ರ ಕೈಗೆತ್ತಿಕೊಳ್ಳಲು ಅವರು ಸಿದ್ಧರಾದರು.

ಮೊದಲನೇ ಜಾಗತೀಕ ಯುದ್ಧದಲ್ಲಿ ಜನಸಾಮಾನ್ಯರ (ಪ್ಲೆಬಿಯನ್) ಸುಶೀಕ್ಷಿತ ಮಕ್ಕಳನ್ನು ಕಮಿಷನ್ಡ್ ಅಧಿಕಾರಿಗಳಾಗಿ ಸೇರಲು ರಷ್ಯಾದ ಝಾರ್ ಅವಕಾಶ ನೀಡಿದಾಗಲೂ ಇದೇ ತಪ್ಪನ್ನು ಎಸಗಿದ್ದ.

ಈ 'ಜನಸಾಮಾನ್ಯರು' ಸೇನೆಯಲ್ಲಿ ಸರ್ವವ್ಯಾಪಿಯಾಗಿದ್ದು ಝಾರ್ ಆಡಳಿತದ ವಿರುದ್ಧ ರಾಜಕೀಯ ಜಾಗೃತಿ ಹಾಗೂ ಕ್ರಾಂತಿಕಾರಿ ಸತ್ವದೊಂದಿಗೆ ರಷ್ಯಾದ ಫೆಬ್ರವರಿ ಕ್ರಾಂತಿಯಲ್ಲಿ ಕ್ರಾಂತಿಕಾರಿ ಸೈನಿಕರಿಗೆ ನಾಯಕತ್ವ ನೀಡಿದ್ದರು. ಇದೇ ರೀತಿಯ ಫಲಿತಾಂಶ ಹೊರಹೊಮ್ಮುವಂಥ ಇದೇ ರೀತಿಯ ಪ್ರಕ್ರಿಯೇ ಇಲ್ಲಿಯೂ ಸಾಗಿತ್ತು.

ಮರೆಯಲಾಗದ ತರುಣ ಸೇನಾನಿಗಳು.....

ತುರ್ತು ಕಮಿಷನ್ಡ್ ಅಧಿಕಾರಿಗಳು ಎಂದು ಕರೆಯಲಾದ ಈ ತರುಣರನ್ನು ಭಾರತೀಯ ಜನರು ಎಂದೂ ಮರೆಯಲಾರರು.

> **ಒಮ್ಮೆ ಬ್ರಿಟೀಷ್ ಸೈನಿಕ ಛೇಡಿಸಿದ್ದರಿಂದ ಜೈಪಾಲ್‌ಸಿಂಗ್ ಸಿಟ್ಟು ನೆತ್ತಿಗೇರಿತು. ಆ ಸಾಮ್ರಾಜ್ಯಶಾಹಿ ಬಂಟನ ಮೇಲೆ ಎರಗಿ ಮುಷ್ಠಿಯಿಂದ ಗುದ್ದಿದರು. ಆತ ರಕ್ತ ಸುರಿಸುತ್ತಾ ಪ್ರಜ್ಞಾಹೀನನಾಗಿ ಬಿದ್ದ. ಶತ್ರುಪಾಳಯದಲ್ಲೇ ಸಂಘರ್ಷ ಆರಂಭಿಸಿದ ಸಂತೃಪ್ತಿಯಲ್ಲಿ ಓಲಾಡಿದ ತರುಣ ಜೈಪಾಲ್‌ಸಿಂಗ್.**

ಬ್ರಿಟೀಷರು ಹೇರಿದ್ದ ರಾಷ್ಟ್ರೀಯ ಅಪಮಾನಕ್ಕೆ ಅವರು ದೃಢ ನಿರ್ಧಾರ ಹಾಗೂ ತೀಕ್ಷ್ಣತೆಯಿಂದ ಪ್ರತೀಕಾರ ಕೈಗೊಂಡರು. ಅವಮಾನ-ಅಪಮಾನಗಳನ್ನು ವಿನಮ್ರವಾಗಿ ಸಹಿಸಿಕೊಂಡಿದ್ದ 'ಅತೀ ಹಿರಿಯ' ಭಾರತೀಯ ಅಧಿಕಾರಿಗಳಿಗೆ ತದ್ವಿರುದ್ಧ ಚೇತನದ ಪ್ರತೀಕವಾಗಿದ್ದರು ಈ ತರುಣ ಹಾಗೂ ದೇಶಪ್ರೇಮಿ ಅಧಿಕಾರಿಗಳು.

ಸ್ವಾತಂತ್ರ್ಯಾನಂತರ ಅವರಿಗೆ ಕ್ಷಿಪ್ರವಾಗಿ ಹಾಗೂ ಅನಿರೀಕ್ಷಿತವಾಗಿ ಉನ್ನತ ಸ್ಥಾನಗಳಿಗೆ ಬಡ್ತಿ ದೊರಕಿದ್ದರೆ ನಮಗೆ ಮತ್ಸರವೇನೂ ಇಲ್ಲ. ಆದರೆ ಭಾರತೀಯ ಸೇನೆಯ ಜನರಲ್‌ಗಳಾಗಿ ತಾವು ಧರಿಸುವ ಕೆಂಪು ಪಟ್ಟಿಗಳು ಸಾಮ್ರಾಜ್ಯಶಾಹಿಗಳ ವಿರುದ್ಧ ದೂರದ ತೀರದಲ್ಲಿ ಬಂಡಾಯವೆದ್ದು ಮೌನವಾಗಿ ಪ್ರಾಣತ್ಯಾಗ ಮಾಡಿದ ಆ ಭಾರತೀಯ ಸೈನಿಕರ ಹಾಗೂ ಅಧಿಕಾರಿಗಳ ರಕ್ತದ ಬಣ್ಣವನ್ನು ಪ್ರತಿನಿಧಿಸುತ್ತವೆ ಎಂಬುದನ್ನು ಅವರು ಮರೆಯಬಾರದು ಎಂಬುದಷ್ಟೆ ನಮ್ಮ ಆಶಯ. ಆ ಬಗ್ಗೆ ನಾನು ಮುಂದೆ ವಿವರಿಸುತ್ತೇನೆ.

ಕಾರ್ಕಳ್‌ನಲ್ಲಿರುವ ಆರ್.ಐ.ಎ.ಎಸ್.ಸಿ ಅಧಿಕಾರಿಗಳ ತರಬೇತಿ ಶಾಲೆಯಲ್ಲಿ ನಾನು ಸಾಮ್ರಾಜ್ಯಶಾಹಿಯ ಅತ್ಯಂತ ಕೆಟ್ಟ ಗುಣವನ್ನು ಕಂಡೆ.

ಕೆಲವು ನೂರು ಬ್ರಿಟೀಷ್ ಅಧಿಕಾರಿಗಳ ಜತೆ ಸುಮಾರು 50 ಭಾರತೀಯ ಅಧಿಕಾರಿಗಳು ಅಲ್ಲಿದ್ದೆವು. ಪ್ರತಿಭೆ, ದೈಹಿಕ ಸಾಮರ್ಥ್ಯ ಮತ್ತು ತಾತ್ವಿಕ ಹಾಗೂ ತಂತ್ರಗಳ ಚಾಕಚಕ್ಯತೆಯಲ್ಲಿ ನಾವು ಬ್ರಿಟೀಷರಿಗಿಂತ ಕೀಳು ಎಂಬುದನ್ನು ಬ್ರಿಟೀಷರಿಗೆ ತೋರಿಸಲಿಕ್ಕಾಗಿ ಬ್ರಿಟೀಷ್ ಅಧಿಕಾರಿ ಶಿಕ್ಷಕರು ನಮ್ಮನ್ನು ಆಯ್ದುಕೊಂಡರು! ಅವರು ಕೆಲವು ಬುದ್ಧಿವಂತಿಕೆಯ ಜಾಲಗಳನ್ನು ಹೆಣೆಯುತ್ತಿದ್ದರು, ಅದನ್ನು ಸರಿಯಾಗಿ ಬಿಡಿಸಲು ನಮಗೆ ಸಾಧ್ಯವಾಗುತ್ತಿರಲಿಲ್ಲ. ನಾವು ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆವು. ನಾವು ಅವರನ್ನು ಹೆಚ್ಚೆಚ್ಚು ದ್ವೇಷಿಸಲು ತೊಡಗಿದೆವು.

ಆಹಾರದ ಸಮಸ್ಯೆ ಎದುರಾಯಿತು. ನಾವು ಬ್ರಿಟೀಷ್ ಆಹಾರವನ್ನು ತಿನ್ನಬೇಕಿತ್ತು. ಕಕ್ಕಸುಗಳನ್ನು ಕೂಡ ಇಂಗ್ಲಿಷ್ ಶೈಲಿಯಲ್ಲೇ ಬಳಸಬೇಕಿತ್ತು. ಈ ಅನಾಗರೀಕರಿಂದಾಗಿ ನಮಗೆ ಸರಿಯಾಗಿ ಕುಂಡಿ ಇಡಲೂ ಆಗುತ್ತಿಲ್ಲ, ಘೋರವಾದುದು. ಓಹ್, ನಾನು ಈ ದೇಶವನ್ನು ದ್ವೇಷಿಸುತ್ತೇನೆ' ಅವರಲ್ಲಿ ಕೆಲವರು ಒದರಿದರು.

'ನಿಮ್ಮನ್ನೇನೂ ನಾವು ಯಾವತ್ತು ಇಲ್ಲಿಗೆ ಆಹ್ವಾನಿಸಿರಲಿಲ್ಲ' ಎಂದು ನಾನು ಮೆತ್ತಗೆ, ಆದರೆ ಅಷ್ಟೇ ದೃಢವಾಗಿ ಹೇಳಿದೆ.

ಪಿಸುಮಾತಿನಲ್ಲೇ ಹೂಡಿದ ಪಿತೂರಿ

ನಾವು ಇಂಗ್ಲಿಷ್‌ನಲ್ಲೇ ಮಾತನಾಡಬೇಕಿತ್ತು. ಆ ಅನಾಗರಿಕ ಹಿಂದೂಸ್ತಾನಿ ಭಾಷೆಯಲ್ಲಿ ಅಲ್ಲ. ನಾವು ಅನೇಕ ವೇಳೆ ಹಿಂದಿಯಲ್ಲಿ ಮಾತನಾಡಿಕೊಳ್ಳುತ್ತಿದ್ದಾಗ ತಿರಸ್ಕಾರ ಭಾವದಿಂದ ಬಿಳಿಯ ಅಧಿಕಾರಿಗಳು ನಮಗೆ ಹೀಗೆಂದು ನೆನಪಿಸುತ್ತಿದ್ದರು. "ನೀವು ಅಧಿಕಾರಿಗಳು ಇದು ಅಧಿಕಾರಿಗಳ ಮೆಸ್".

ನಾನು ಮತ್ತು ಚಾಂಡಿ ಒಂದು ದಿನ ಸಂಜೆ ಮೆಸ್‌ನಲ್ಲಿ ಕೂತು ಕುಡಿಯುತ್ತ ಹರಟುತ್ತಿದ್ದೆವು. ಚಾಂಡಿ ಈಗ ದಕ್ಷಿಣ ಭಾರತದಲ್ಲೆಲ್ಲೋ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ (ಡಿಐಜಿ) ಆಗಿದ್ದಾರೆ. ಆಗ ಭಾರಿ ಹಿಮಪಾತ ಆಗುತ್ತಿತ್ತು. ಮೊಣಕಾಲಿನಷ್ಟು ಮಂಜು ನಿಂತಿದ್ದು ಇಡೀ ಪ್ರದೇಶ ಶ್ವೇತವಸ್ತ್ರ ಧರಿಸಿದಂತಿತ್ತು. ಮಿಲಿಟರಿ ಕಾಲೇಜ್ ದಿನಗಳಿಂದಲೂ ನನ್ನ ಆಪ್ತ ಮಿತ್ರನಾಗಿದ್ದ ಚಾಂಡಿ. ಆಗ್ರ ರೈಲ್ವೆ ನಿಲ್ದಾಣದ ಘಟನೆಯನ್ನು ಪ್ರಸ್ತಾಪಿಸಿ ನನ್ನನ್ನು ಕಿಚಾಯಿಸುತ್ತಿದ್ದ. ನಾವು ಹಿಂದಿಯಲ್ಲೇ ಮಾತನಾಡುತ್ತಿದ್ದೆವು.

ಆಗ ಪಾನಮತ್ತ ಬ್ರಿಟಿಷ್ ಅಧಿಕಾರಿಯೊಬ್ಬ ನಮ್ಮನ್ನು ಸಿಕ್ಕಾಪಟ್ಟೆ ಬಯ್ದ. ನಿಮ್ಮ ಸ್ಥಳೀಯ ಕೊಳಕು ಭಾಷೆ ಕರ್ಕಶವಾಗಿದೆ. ಇಂಗ್ಲೀಷ್‌ನಲ್ಲೇ ಮಾತಾಡಿ ನೀವು.. ಎಂದು ಬಯ್ದ. ಆತನತ್ತ ನಾನು ನನ್ನ ಗ್ಲಾಸ್ ಎಸೆದೆ. ಆದರೆ ಆತ ತಕ್ಷಣವೇ ಬಗ್ಗಿ ಏಟು ತಪ್ಪಿಸಿಕೊಂಡ. ಬ್ರಿಟಿಷ್ ಅಧಿಕಾರಿಗಳ ಗುಂಪೊಂದು ಜಮಾಯಿಸಿ ನಮ್ಮನ್ನು ಸಮಾಧಾನಪಡಿಸಲು ಪ್ರಯತ್ನಿಸಿತು. "ಸಾಲಾ ಅಂಗೇಜ್ ತಡೆಯಿರಿ. ನಾವು ಒಂದು ದಿನ ನಿಮಗೆ ಪಾಠ ಕಲಿಸುತ್ತೇವೆ" ಎಂದು ನಡುಗುವ ಧ್ವನಿಯಲ್ಲಿ ಚಾಂಡಿ ಬಡಬಡಿಸುತ್ತಿದ್ದ.

ಚಾಂಡಿ ಪಾನಮತ್ತನಾಗಿರಲಿಲ್ಲ. ಆತ ಸರಿಯಾಗಿಯೇ ಚಿಂತಿಸುತ್ತಿದ್ದ. ಈಗ ನಮ್ಮ ಸಶಸ್ತ್ರ ಪಡೆಯಲ್ಲಿ ಜವಾಬ್ದಾರಿಯುತ ಸ್ಥಾನಗಳಲ್ಲಿ ಸೇವೆ ಸಲ್ಲಿಸುತ್ತಿರುವ ನನ್ನ ಆಗಿನ ಸಹೋದ್ಯೋಗಿಗಳು ನನ್ನನ್ನು ಸಮರ್ಥಿಸುತ್ತಿದ್ದರು ಎಂಬ ವಿಶ್ವಾಸ ನನಗಿದೆ.

ಬಿಳಿ ಮೂತಿಯವನ ಪಾಠ

"ನಾವು ನಿಮಗೆ ಶಿಕ್ಷಣ ನೀಡಿದೆವು ಹಾಗೂ ನಮ್ಮ ಸೇನೆಯಲ್ಲಿ ಕಮಿಷನ್ ಹುದ್ದೆಗಳನ್ನು ಕೊಟ್ಟೆವು. ನಾವು ರೈಲುಗಳನ್ನು ತಂದೆವು, ರಸ್ತೆಗಳನ್ನು ನಿರ್ಮಿಸಿದೆವು. ಶಿಕ್ಷಣ ಮತ್ತು ನಾಗರೀಕತೆಯ ಇತರ ಸಾಧನಗಳನ್ನು ಕಲ್ಪಿಸಿದೆವು. ಆದರೆ ಬೇಸರದ ಸಂಗತಿಯೆಂದರೆ ಇದನ್ನೆಲ್ಲ ನೀವು ಮನವರಿಕೆ ಮಾಡಿಕೊಂಡಿಲ್ಲ. ನಿಮ್ಮ ಪಥಾಕರ್ಥಿ ರಾಷ್ಟ್ರೀಯ ಪತ್ರಿಕೆಗಳು ನಮಗೆ ದಿನದಿನವೂ ಹಿಡಿ ಶಾಪ ಹಾಕುತ್ತಿವೆ. 'ಭಾರತ ಬಿಟ್ಟು ತೊಲಗಿ' ಎಂಬ ಘೋಷಣೆ ಕೇಳಿಸುತ್ತಾರೆ. ಅದೆಷ್ಟು ಕೃತಘ್ನರು ನೀವು! ಮೊದಲು ಅರ್ಹತೆ ಪಡೆಯಿರಿ, ಆಮೇಲೆ ಹಕ್ಕು ಮಂಡಿಸಿ"

ಆಕ್ಸ್‌ಫರ್ಡ್‌ನಲ್ಲಿ ಶಿಕ್ಷಣ ಪಡೆದ, ಬಲವಂತದಿಂದ ಸೇನೆಗೆ ಸೇರಿದ ಹಾಗೂ ಉದಾರ ಬ್ರಿಟೀಷ್ ಪರಂಪರೆಗಳ ಪ್ರತಿಪಾದಕನಾದ ಒಬ್ಬ ಬ್ರಿಟೀಷ ಒಂದು ದಿನ ಸಂಜೆ ಪಾಠ ಮಾಡುತ್ತಿದ್ದ! "ನಾವು ದೇವರು ಬಿಟ್ಟ ಈ ದೇಶವನ್ನು ತೊರೆದ ದಿನವೇ ನೀವು ಪರಸ್ಪರರ ಕತ್ತು ಕುಯ್ದುಕೊಳ್ಳುತ್ತೀರಿ" ಎಂದೂ ಆತ ನುಡಿದ.

ಕಾನ್ಪುರದ ಬ್ಯಾರಿಸ್ಟರ್ ಒಬ್ಬರ ಮಗನಾದ ಲೆಫ್ಟಿನೆಂಟ್ ಖರೆ ಆ ಮನುಷ್ಯನ 'ಬೋಧನೆ'ಯನ್ನು ತಣ್ಣಗೆ ಕೇಳುತ್ತಿದ್ದ. ಹೊರ ನೋಟ ಸೌಮ್ಯವಾಗಿದ್ದರೂ ಆತ ಒಳಗೊಳಗೇ ಕುದಿಯುತ್ತಿದ್ದ. ಈ ತರುಣ, ಭಾವಜೀವಿ ಭಾರತೀಯ ಅಧಿಕಾರಿ ತಕ್ಷಣವೇ ಎದ್ದು ನಿಂತು ಮುನ್ನುಗ್ಗಿ ತನ್ನ ಗ್ಲಾಸಿನಲ್ಲಿದ್ದ ಮದಿರೆಯನ್ನು ಆ ಬ್ರಿಟಿಷ್ ಬೋಧಕನ ತಲೆ ಮೇಲೆ ಸುರಿದೆ ಬಿಟ್ಟ. "ನೀವು ನಮಗೆ ಏನನ್ನು ಕೊಟ್ಟಿಲ್ಲ. ಶಿಕ್ಷಣಕ್ಕೆ ನಾವು ದುಡ್ಡು ಕೊಟ್ಟಿದ್ದೇವೆ. ನಮಗೆ ಕಮಿಷನ್ನುಗಳನ್ನು ಕೊಟ್ಟಿದ್ದಕ್ಕೆ ನಿಮಗೆ ಕೃತಜ್ಞತೆಗಳು. ಅದು ನಿಮ್ಮ ಕೆಡುಕಿನ ಕೃತ್ಯ. ನಮ್ಮ ರೈಲು, ರಸ್ತೆಗಳು ಮತ್ತು ನಾಗರೀಕತೆಯ ಇತರ ಎಲ್ಲಾ ಸಾಧನ ಸಲಕರಣೆಗಳಿಗೆ ನಾವು ರಕ್ತ ಹಾಗೂ ಬೆವರು ಸುರಿಸಿ ಗಳಿಸಿದ ಹಣವನ್ನು ತೆತ್ತಿದ್ದೇವೆ. ನೀವು ನಮಗೆ ಕೊಟ್ಟದ್ದು ಹಸಿವು, ಬಡತನ ಮತ್ತು ಸಿಫಿಲಿಸ್ ಹಾಗೂ ಗನೋರಿಯಾ ರೋಗಗಳಷ್ಟೇ" ಎಂದು ಖರೆ ಕೋಪಾವೇಶದಿಂದ ನುಡಿದ.

ತಲೆ ಮೇಲಿಂದ ಕೆನ್ನೆಗೆ ಇಳಿಯುತ್ತಿದ್ದ ವಿಸ್ಕಿಯನ್ನು ಒರೆಸಿಕೊಳ್ಳುತ್ತಾ ಉದಾರವಾದಿ ಬ್ರಿಟಿಷ್‌ನವ "ಜಂಟ್ಲ್‌ಮ್ಯಾನ್ ಒಬ್ಬ ವರ್ತಿಸುವ ರೀತಿ ಇದಲ್ಲ" ಎಂದು ಖರೆಯನ್ನು ಖಂಡಿಸಿದ.

ಖರೆ ನಮ್ಮ ನಡುವೆ ಇದ್ದ ನೇರ ನುಡಿಯ ವ್ಯಕ್ತಿಯಾಗಿದ್ದ ಹಾಗೂ ಯಾವಾಗಲೂ ಬ್ರಿಟೀಷರ ಜತೆ ಸಂಘರ್ಷಕ್ಕೆ ಸಿದ್ಧನಾಗಿರುತ್ತಿದ್ದ.

ಶಿಬಿರದ ಹಾದಿಯಲ್ಲಿದ್ದ ರಸ್ತೆಗಳಲ್ಲಿ ಕುದುರೆಗಳು ಹಾಗೂ ಸವಾರರು ಹೋಗಬಾರದೆಂಬ ನಿಯಮವಿತ್ತು. ಆದರೆ ಬ್ರಿಟೀಷ್ ಅಧಿಕಾರಿಗಳು ಈ ನಿಷೇಧವನ್ನು ಉಲ್ಲಂಘಿಸಿದರು. ಕುದುರೆ ಸವಾರಿಯೇನೂ ಅವರಿಗೆ ಅಷ್ಟೊಂದು ಇಷ್ಟವಿರಲಿಲ್ಲ. ಆದರೆ ನಿಯಮ ಉಲ್ಲಂಘಿಸಿದ ಬ್ರಿಟೀಷ್ ಅಧಿಕಾರಿಯನ್ನು ಶಿಕ್ಷಿಸದೆ ಬಿಟ್ಟುಬಿಡುವುದನ್ನು ಭಾರತೀಯ ಅಧಿಕಾರಿಗೂ ವಿಸ್ತರಿಸಲಾಗುವುದೋ ಇಲ್ಲವೋ ಎಂಬುದನ್ನು ಪರೀಕ್ಷಿಸುವುದು ಅವರ ಗುರಿಯಾಗಿತ್ತು.

ತಮ್ಮ ನಿರ್ಧಾರದಂತೆ ನಿಷೇಧಿತ ಪ್ರದೇಶದಲ್ಲಿ ಕುದುರೆ ಸವಾರಿ ಮಾಡಿದ ಖರೆಯನ್ನು ಬ್ರಿಟೀಷ್ ಕಮಾಂಡೆಂಟ್ ಮೇಜರ್ ಲಾ ಮುಂದೆ ಹಾಜರುಪಡಿಸಲಾಯಿತು.

ಮೇಜರ್ ಲಾ ಕೂಡ ಭಾರತೀಯನೇ. ಸ್ವಾತಂತ್ರ್ಯಾನಂತರ ಭಾರತೀಯ ಸೇನೆಯಲ್ಲಿ ಜನರಲ್ ಆದ ಲಾ. ಖರೆ ವಾಗ್ದಾನ ನಡೆಸಿದರು. ಬ್ರಿಟೀಷ್ ಸಾಮ್ರಾಜ್ಯಶಾಹಿಗೆ ನಿಷ್ಠೆ ತೋರುವಲ್ಲಿ ಭಾರತೀಯನಾದ ಲಾ ಬ್ರಿಟೀಷರನ್ನೂ ಮೀರಿಸಿದ್ದ.

ಖರೆಯ ಬಂಧನಕ್ಕೆ ಮೇಜರ್ ಲಾ ಆಜ್ಞೆ ಮಾಡಿದ. ಇದರಿಂದ ಭಾರತೀಯ ಅಧಿಕಾರಿಗಳು ತಲ್ಲಣಗೊಂಡರು.

ಆ ಸಂಜೆ ನಾನು ನನ್ನ ಪಠಣ ಬೇರರ್ ಅಬ್ದುಲ್ಲಾನನ್ನು ಕಳಿಸಿ ನಾಲ್ವರು ಭಾರತೀಯ ಅಧಿಕಾರಿಗಳನ್ನು ನನ್ನ ರೂಮಿಗೆ ಕರೆಸಿಕೊಂಡೆ. ಈ ದಿಟ್ಟ ಸಸ್ತ್ರ ಪಡೆಗಳ ಜವಾಬ್ದಾರಿಯುತ ಸ್ಥಾನಗಳಲ್ಲಿ ಇರುವುದರಿಂದ ಅವರ ಹೆಸರನ್ನು ಬಹಿರಂಗಪಡಿಸುವುದು ಸೂಕ್ತವಲ್ಲ.

(ಮುಂದುವರಿಯುವುದು)

ಐಕ್ಯರಂಗ ಚಂದಾದಾರರಾಗಿ

ವಾರ್ಷಿಕ	ರೂ. 150
6 ತಿಂಗಳು	ರೂ. 80
ಆಜೀವ	ರೂ. 1000

ಪಂಪ್‌ಸೆಟ್‌ಗಳಿಗೆ ಮೀಟರ್ : ಕೃಷ್ಣ ಸರ್ಕಾರದ ದಶಾವತಾರಗಳು

ವಿದ್ಯುತ್‌ಕ್ಷೇತ್ರವನ್ನು ಖಾಸಗೀಕರಿಸಲು ಕೃಷ್ಣರ ಸರ್ಕಾರ ಥರೇವಾರಿ ಕುತಂತ್ರಗಳ ಕಸರತ್ತು ನಡೆಸಿದೆ. ದುಬಾರಿ ದರಗಳು, ಮೀಟರ್ ಅಳವಡಿಕೆ, ಡಿಸ್‌ಕನೆಕ್ಷನ್‌ನಂತಹ ಕ್ರಮಗಳಿಗೆ ರೈತರ ಪ್ರತಿರೋಧ ಬಂದಾಗ ಪುಲಿಕೇಶಿ ಪಡೆಯಂತಹ ದಮನಕಾರಿ ಪಡೆಗಳನ್ನು ಇಳಿಸಲಾಯಿತು. ಅದಕ್ಕೂ ಮಣಿಯದಿರುವಾಗ ಹೊಸ ತಂತ್ರ ಹುಡಿಕಿದೆ ಈಗ. ಪಂಚಾಯ್ತಿಗಳ ಮೂಲಕವೇ ಜಾರಿಗೊಳಿಸಿದರೆ ಹೇಗೆ?... ಅದೂ ಹಣದ ಆಮೀಷ ಒಡ್ಡಿ...

ಜಿ.ಸಿ. ಬಯ್ಯಾರೆಡ್ಡಿ

'ಎಲ್ಲಿ ಹೋಗಿದ್ದಾನೆ ಅವನು, ಪಂಚಾಯ್ತಿ ಅಧ್ಯಕ್ಷ, ಬರಲಿ, ಅವ್ನ ಬಿಡುವುದಿಲ್ಲ' 'ಯಾರನ್ನು ಕೇಳಿ ಹಾಕಿದ ಅವನು ಒಪ್ಪಂದಕ್ಕೆ ಸಹಿ' ರೈತರು ಸಾಯ್ತಿದ್ದಾರೆ, ಮೀಟರ್ ಕೊಡಿಸ್ತಾರಂತೆ ಮಕ್ಕಳು' ಹೀಗೆ ಆಕ್ರೋಶದ ಹತ್ತಾರು ಮಾತುಗಳು ಹೊರಟಿದ್ದವು ರೈತ ಸಮೂಹದಿಂದ.

ವಿದ್ಯುತ್ ಬಾಕಿ ವಸೂಲಿಗೆ ಸಂಬಂಧಿಸಿ, ರಾಜ್ಯ ಸರ್ಕಾರ ಕೊಡುವ ಶೇ5 ರಷ್ಟು ಕಮಿಷನ್‌ಗೆ ಆಸೆಗೆ ಬಲಿಬಿದ್ದು ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ಕೊನೆಘಟ್ಟ ಗ್ರಾಮಪಂಚಾಯತಿ ಮಾಡಿಕೊಂಡಿರುವ ಒಪ್ಪಂದದಲ್ಲಿ ವಸೂಲಿ ಮತ್ತು ಪಂಚಾಯಿತಿಗೆ ಸಿಗುವ ಕಮಿಷನ್ ಅಂಶಗಳು ಮುಖ್ಯವಲ್ಲ, ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಕೊಡಿಸುವ ಹುನ್ನಾರದಿಂದ ರಾಜ್ಯ ಸರ್ಕಾರದ ಬೆಸ್ಕಾಂ ಈ ಒಪ್ಪಂದವನ್ನು ಮಾಡಿದೆಯೆಂದು, ಸರ್ಕಾರದ ಕುತಂತ್ರವನ್ನು ಬಯಲು ಮಾಡಿದ ಪ್ರಾಂತ ರೈತ ಸಂಘ (KPRS) ಕಾರ್ಯಕರ್ತರು, ರೈತ ವಿರೋಧಿ ಈ ಒಪ್ಪಂದವನ್ನು ರದ್ದುಮಾಡಬೇಕೆಂದು ಒತ್ತಾಯಿಸಿ, ಪಕ್ಷಾತೀತವಾಗಿ ನೀರಾವರಿ ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿಯು ಕೊನೆಘಟ್ಟ ಗ್ರಾಮ ಪಂಚಾಯತಿ ಎದುರು ಸಮಾವೇಶಗೊಂಡಿದ್ದ ನೂರಾರು ರೈತರ ನಡುವೆಯಿಂದ ಎದ್ದುಬಂದ ಆಕ್ರೋಶದ ಮಾತುಗಳಿವು.

ಗ್ರಾಮ ಪಂಚಾಯತಿ ವ್ಯಾಪ್ತಿಯ ವಿದ್ಯುತ್ ಬಾಕಿಗಳನ್ನು ವಸೂಲಿ ಮಾಡಿಕೊಟ್ಟರೆ, ವಸೂಲಿಯಲ್ಲಿ ಶೇ5 ರಷ್ಟು ಕಮಿಷನ್, ಉತ್ತಮ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವುದಾಗಿ ಹೇಳಿದ ಬೆಸ್ಕಾಂ, ದೊಡ್ಡಬಳ್ಳಾಪುರದ ಕೊನೆಘಟ್ಟ, ದೇವನಹಳ್ಳಿಯ ಕಾರಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರೊಂದಿಗೆ ಒಪ್ಪಂದವನ್ನು ಮಾಡಿಕೊಂಡಿತ್ತು. ಮೇಲ್‌ನೋಟಕ್ಕೆ ಈ ಒಪ್ಪಂದ ಬಾಕಿ ವಸೂಲಿ, ಕಮಿಷನ್, ಉತ್ತಮ ಗುಣಮಟ್ಟದ ವಿದ್ಯುತ್ ಸರಬರಾಜುಗಾಗಿ ಎನ್ನುವ ರೀತಿಯಲ್ಲಿ ಪ್ರಚಾರ ಪಡೆಯಿತು. ಆದರೆ ಈ ಒಪ್ಪಂದದ ನಕಲನ್ನು ಪ್ರಾಂತ ರೈತ ಸಂಘದ ಕಾರ್ಯಕರ್ತರ ಕೈಗೆ ಸಿಕ್ಕಿದಾಗ, ಗೊತ್ತಾಗಿದ್ದು, ವಸೂಲಿ, ಕಮಿಷನ್ ನೆಪ ಮಾತ್ರ, ಒಪ್ಪಂದದ ಮೂಲ ಉದ್ದೇಶ, ಮೀಟರೀಕರಣವೆಂದು ಬಯಲಾಯಿತು. ಇಲ್ಲಿಂದ ಆರಂಭವಾದ ಪಿಸು ಪಿಸು ಮಾತು, ಕೊನೆಗೆ ರೈತ ಸಂಘದ ನಾಯಕತ್ವದಲ್ಲಿ ಮೂಡಿಬಂತು, **ಪಕ್ಷಾತೀತ ನೀರಾವರಿ ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿ ಮತ್ತು ವ್ಯಾಪಕ ಹೋರಾಟ.**

ಗ್ರಾಮ ಪಂಚಾಯತಿ ಅಧ್ಯಕ್ಷರು ಸಹಿ ಮಾಡಿದ್ದ ಒಪ್ಪಂದಕ್ಕೆ ಒಪ್ಪಿಗೆ ಸೂಚಿಸಲು ಅಕ್ಟೋಬರ್ 28ಕ್ಕೆ ಗ್ರಾಮ ಪಂಚಾಯತಿ ಸಭೆ ಕರೆಯಲಾಗಿದೆಯೆಂದು ತಿಳಿದು, ಹತ್ತಾರು ಗ್ರಾಮಗಳ ನೂರಾರು ರೈತರು, ಅಂದು ಬೆಳಿಗ್ಗಿನಿಂದಲೇ ಪಂಚಾಯತಿ ಕಛೇರಿಯ ಎದುರು ಸಮಾವೇಶಗೊಂಡರು. ರೈತರ ಆಕ್ರೋಶವನ್ನು ಗಮನಿಸಿದ ಬೆಸ್ಕಾಂ ಅಧಿಕಾರಿಗಳು ಮತ್ತು ಪಂಚಾಯತಿ ಅಧ್ಯಕ್ಷರು, ಸಭೆಯನ್ನು ಮುಂದೂಡಿ, ನಾಪತ್ತೆಯಾದರು.

ಆನಂತರದಲ್ಲಿ ನಡೆದ ಸಭೆಯು, ರೈತ ವಿರೋಧಿಯಾದ ಈ ಒಪ್ಪಂದಕ್ಕೆ ರೈತರ ಮತ್ತು ಬಹುಸಂಖ್ಯಾತ ಗ್ರಾಮಪಂಚಾಯತಿ ಸದಸ್ಯರು ಅನುಮತಿಯಿಲ್ಲವೆಂದು, ಅಧ್ಯಕ್ಷರು ಗೈರುಹಾಜರಿಯನ್ನು ಖಂಡಿಸಿ, ನವೆಂಬರ್ 10ರೊಳಗೆ ಈ ಒಪ್ಪಂದವನ್ನು ರದ್ದು ಮಾಡಲಾಗಿದೆ ಎಂಬ ಘೋಷಣೆ ಮಾಡಬೇಕೆಂದು ನಿರ್ಣಯಿಸಿದರು.

ನ-10 ರೊಳಗೆ ಒಪ್ಪಂದ ರದ್ದಾಗದಿದ್ದರೆ ಅಧ್ಯಕ್ಷರು ಕಾರ್ಯದರ್ಶಿಗಳಿಗೆ ಬಹಿಷ್ಕಾರ ಹಾಕುವ ತೀರ್ಮಾನವನ್ನು ಸಹ ಮಾಡಿದರು ಮತ್ತು ಪಕ್ಷಾತೀತವಾಗಿ ಹೋರಾಟನವನ್ನು ಮುಂದುವರೆಸಿ, ದೇವನಹಳ್ಳಿ ತಾಲೂಕಿನ ಕಾರಹಳ್ಳಿ ಪಂಚಾಯತಿಗೂ ಹೋರಾಟವನ್ನು ವಿಸ್ತರಿಸಲು ನಿರ್ಧರಿಸಿದರು.

ಬೆಸ್ಕಾಂನ ಈ ಒಪ್ಪಂದ ದಿಡೀರನೆ ಉದ್ಭವವಾದ ಒಪ್ಪಂದವಲ್ಲ. ಮೀಟರೀಕರಣಕ್ಕೆ ಸಂಬಂಧಿಸಿ, ರಾಜ್ಯ ಸರ್ಕಾರ ಎತ್ತಿರುವ ದಶಾವತಾರಗಳಲ್ಲಿ ಇದೂ ಒಂದು ಅವತಾರ.

ಮೀಟರೀಕರಣಕ್ಕಾಗಿ ಸರ್ಕಾರದ ಪ್ರಯತ್ನಗಳು:

ವಿದ್ಯುತ್ ಕ್ಷೇತ್ರವನ್ನು ಸಂಪೂರ್ಣವಾಗಿ ಖಾಸಗಿ ಮಾಲಿಕರಿಗೆ ಮಾರಾಟ ಮಾಡುವುದಾಗಿ ವಿಶ್ವ ಬ್ಯಾಂಕಿಗೆ ವಚನ ಕೊಟ್ಟಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ರಾಜ್ಯದ ವಿದ್ಯುತ್ ಇಲಾಖೆಯನ್ನು 'ನಿಗಮ'ವಾಗಿ ಮಾರ್ಪಡಿಸಿ ಆನಂತರ ಪ್ರಸರಣೆ ಮತ್ತು ಸರಬರಾಜನ್ನು ಪ್ರತ್ಯೇಕಿಸಿ, ಸದ್ಯ ಸರಬರಾಜನ್ನು ಖಾಸಗೀಕರಣಗೊಳಿಸುವ ಉದ್ದೇಶದಿಂದ ಮೊದಲನೇಯ ಹಂತವಾಗಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ), ಮಂಗಳೂರು ವಿದ್ಯುತ್ ಸರಬರಾಜು ಕಂಪನಿ (ಮೆಸ್ಕಾಂ) ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ (ಹೆಸ್ಕಾಂ) ಮತ್ತು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ (ಗೆಸ್ಕಾಂ)ಗಳನ್ನು ರಚಿಸಲಾಗಿದೆ. ಹೀಗೆ ನಾಲ್ಕು ತುಂಡಾಗಿರುವ ಈ ಕಂಪನಿಗಳನ್ನು ಮಾರಾಟ ಮಾಡಲು ಟೆಂಡರ್‌ಗಳನ್ನು ಸಹ ಕರೆಯಲಾಗಿದೆ.

ಈಗಾಗಲೇ ಹಲವಾರು ಖಾಸಗೀ ಕಂಪನಿಗಳು ಈ 'ಕಂ'ಗಳನ್ನು ನುಂಗಿ ನೀರು ಕುಡಿಯಲು ಕಾತುರದಿಂದ ರಣಹದ್ದುಗಳಂತೆ ಕಾದಿವೆ. ಆದರೆ ಇವರಿಗೆಲ್ಲ ತೀರ ಅಡ್ಡಿಯಾಗಿರುವುದು ರಾಜ್ಯದ 14 ಲಕ್ಷ ಪಂಪ್‌ಸೆಟ್‌ಗಳಿಗೆ ಮೀಟರ್‌ಗಳು ಇಲ್ಲದಿರುವುದು. ಮೀಟರ್‌ಗಳಿದ್ದರೆ, ತಮ್ಮ ಲಾಭದ ಲೆಕ್ಕಾಚಾರಗಳನ್ನು ಹಾಕಿ, ಕಂಪನಿಗಳಿಗೆ ದರಗಳನ್ನು ನಿಗದಿ ಮಾಡಿ, ವಿಪರೀತ ಲಾಭ ಮಾಡಬಹುದಾಗಿತ್ತು. ಆದರೆ ಮೀಟರ್‌ಗಳಿಲ್ಲದೆ ಲೆಕ್ಕಾಚಾರವಿಲ್ಲದೆ ವ್ಯಾಪಾರ ಹೇಗೆ ಸಾಧ್ಯ? ಆದರಿಂದ ವಿಶ್ವಬ್ಯಾಂಕ್‌ನ ಜೊತೆಯ ಒಪ್ಪಂದದಂತೆ ತಕ್ಷಣ ಸಾರ್ವತ್ರಿಕ ಮೀಟರೀಕರಣ ಮಾಡಿದರೆ ವಿದ್ಯುತ್ ಕಂಪನಿಗಳನ್ನು ಕೊಂಡುಕೊಳ್ಳಲು ಸಿದ್ಧವೆಂದು ಖಾಸಗಿ ಮಾಲೀಕರು ಸರ್ಕಾರಕ್ಕೆ ಅಪ್ಪಣೆ ನೀಡಿದ್ದಾರೆ.

2004 ರೊಳಗೆ ಪಂಪ್‌ಸೆಟ್ ಮಾತ್ರವಲ್ಲ ಸಂಪರ್ಕಗಳನ್ನು ಮೀಟರೀಕರಣ ಮಾಡುವುದಾಗಿ ಮಾತುಕೊಟ್ಟಿರುವ ರಾಜ್ಯ ಸರ್ಕಾರ, ಹೆಚ್.ಪಿ ದರಗಳಿಗಿಂತ ಯೂನಿಟ್ ದರ ಕಡಿಮೆಯಾಗುತ್ತೆ, ಆದ್ದರಿಂದ ಮೀಟರ್‌ಗಳನ್ನು ಹಾಕಿಸಿಕೊಳ್ಳಿ ಎಂದು ಪ್ರಚಾರ ನಡೆಸುತ್ತಾ, ವರ್ಷದಲ್ಲಿ ಮಳೆಯ ಹಿನ್ನೆಲೆಯಲ್ಲಿ ಕೇವಲ 3-4 ತಿಂಗಳು ಮಾತ್ರ ವಿದ್ಯುತ್ ಉಪಯೋಗಿಸುವ ಮಂಗಳೂರು, ಉಡುಪಿ, ಉತ್ತರಕನ್ನಡ ಇತ್ಯಾದಿ ಕರಾವಳಿ ಪ್ರದೇಶದ ಜಿಲ್ಲೆಗಳಿಂದ ಮೀಟರೀಕರಣ ಮಾಡಲು ಶುರು ಮಾಡಿತು. ಆದರೆ ಸರ್ಕಾರದ ಈ ತೀರ್ಮಾನಕ್ಕೆ ಕರಾವಳಿ ಸೇರಿದಂತೆ ರಾಜ್ಯಾದ್ಯಂತ ತೀವ್ರ ಪ್ರತಿರೋಧ ವ್ಯಕ್ತವಾಯಿತು. ಮೀಟರೀಕರಣದಿಂದ ರೈತರಿಗೆ ತುಂಬಾ ಸಹಾಯವಾಗುತ್ತದೆಂದು ನಂಬಿಸಲು, ರಾಜ್ಯದ ಬೆಂಗಳೂರಿನ ಬೂದಿಗೆರೆ, ಕೋಲಾರದ ಕೈವಾರ ಮತ್ತು ತುಮಕೂರಿನ ನೊಣವಿಣಕೆರೆ ವಿದ್ಯುತ್ ಉಪವಿಭಾಗೀಯ ಕಛೇರಿಯ ವ್ಯಾಪ್ತಿ ಗ್ರಾಮಗಳಲ್ಲಿ 'ಅಧ್ಯಯನ'ದ ಹೆಸರಿನಲ್ಲಿ ರೈತರಿಗೆ ತಿಳುವಳಿಕೆ ನೀಡಿ ಮೀಟರೀಕರಣ ಮಾಡಲು ಓರಿಸ್ಸಾದ 'ಜೆವಿಯಾರ್' ಎಂಬ ಖಾಸಗಿ ಕಂಪನಿಯ ಜೊತೆ ಒಪ್ಪಂದವನ್ನು ರಾಜ್ಯ ಸರ್ಕಾರ ಮಾಡಿತು. ಇದಕ್ಕೆ ಈ ಮೂರು ಉಪವಿಭಾಗೀಯ ಕಛೇರಿ ವ್ಯಾಪ್ತಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ (ಕೆ.ಪಿ.ಆರ್.ಎಸ್) ನೀರಾವರಿ ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಬೃಹತ್ ಸಮಾವೇಶಗಳನ್ನು ಸಂಘಟಿಸಿ, ವ್ಯಾಪಕ ಪ್ರತಿಭಟನೆಗಳನ್ನು ನಡೆಸಲಾಯಿತು. ಇದರಿಂದ ಭಯ ಭೀತಿಗೊಂಡ ಓರಿಸ್ಸಾದ ಕಂಪನಿ ಕಾಲಿಗೆ ಬುದ್ಧಿ ಹೇಳಿ ಜಾಗ ಖಾಲಿ ಮಾಡಿತು.

ಸರ್ಕಾರದ ಈ ತಂತ್ರವೂ ಫಲಿಸದಿದ್ದಾಗ ಮೀಟರೀಕರಣ ಮಾಡಿಯೇ ತೀರುವುದಾಗಿ ಪಣ ತೊಟ್ಟ ಕಂಪನಿ ಅಧಿಕಾರಗಳ ಜೊತೆ ಹೊಯ್ಸಳ, ಪುಲಿಕೇಶಿ, ಪೋಲಿಸ್ ಪಡೆಗಳನ್ನು ಕಳುಹಿಸಿ, ದರ್ಪದಿಂದ ಮೀಟರೀಕರಣ ಮಾಡುತ್ತೇವೆಂದು ಹೊರಟರು. ಇದರಿಂದ ಹಲವಾರು ಕಡೆ ಕಾನೂನಿನ ಸಮಸ್ಯೆ ಉದ್ಭವವಾಯಿತು. ಇದು ಯಾವ ಗಂಭೀರ ಮಟ್ಟಕ್ಕೆ ಹೋಯಿತೆಂದರೆ, ಕಾನೂನು ಪಾಲನೆಗೆ ಸಂಬಂಧಿಸಿ ವೀರಪ್ಪನಿಂದ ನಾಗಪ್ಪನ ಅಪಹರಣದ ಹಿನ್ನೆಲೆಯಲ್ಲಿ ರಾಜ್ಯದ ಗೃಹಮಂತ್ರಿಗಳು ಕರೆದಿದ್ದ ಉನ್ನತ ಮಟ್ಟದ ಪೋಲೀಸ್ ಅಧಿಕಾರಗಳ ಸಭೆಯಲ್ಲಿ ಆವತ್ತಿನ ಪೋಲಿಸ್ ಮಹಾ ನಿರ್ದೇಶಕರಾದ ಭಾಸ್ಕರ್ ರಾವ್, ವಿದ್ಯುತ್‌ಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ ಸರ್ಕಾರ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕೆಂದು, ಇಲ್ಲವಾದರೆ ಪೋಲಿಸ್ ಪಡೆ ಕಾನೂನು ರಕ್ಷಣೆ ಮಾಡುವುದು ಕಷ್ಟವಾಗುತ್ತೆಂದು ಬಹಿರಂಗವಾಗಿ ಸಭೆಯಲ್ಲಿ ಹೇಳುವಂತ ಸ್ಥಿತಿ ಉಂಟಾಯಿತು.

ಇದರಿಂದ ದಿಕ್ಕು ತೋಚದೆ, ಕಂಗಾಲಾಗಿದ್ದ ಸರ್ಕಾರ, ಮೀಟರೀಕರಣದ ವಿರುದ್ಧ ಗ್ರಾಮೀಣ ಜನತೆಯಲ್ಲಿ ಮುಖ್ಯವಾಗಿ ರೈತರಲ್ಲಿ ಮೂಡಿಬರುತ್ತಿರುವ ಪಕ್ಷಾತೀತವಾದ ಐಕ್ಯತೆಯನ್ನು ನಾಶ ಮಾಡದೇ ಮೀಟರೀಕರಣ ಸಾಧ್ಯವಿಲ್ಲವೆಂದು ಮನಗಂಡ ರಾಜ್ಯ ಸರ್ಕಾರ , ಗ್ರಾಮೀಣ ರೈತರನ್ನು

ಪುಟ 11 ಕ್ಕೆ



ವಿದ್ಯುತ್ ಖಾಸಗೀಕರಣದ ವಿರುದ್ಧ ಮಂಗಳೂರಿನಲ್ಲಿ ನಡೆದ ಪ್ರತಿಭಟನಾ ಮೆರವಣಿಗೆ.

ದಿವಾಳಿಯತ್ತ ಕೊಂಡೊಯ್ದ ವಿದ್ಯುತ್ ನೀತಿಗಳು

ವಿದ್ಯುತ್ ಕ್ಷೇತ್ರದಲ್ಲಿ ಭಾರೀ ಬದಲಾವಣೆಯನ್ನು ತರಲಾಗುತ್ತಿದೆ. ಇವುಗಳನ್ನು ಸಮಗ್ರ ಸುಧಾರಣೆಗಳಿಂದೇ ಕರೆಯಲಾಗುತ್ತಿದೆ. ವಿಶ್ವಬ್ಯಾಂಕ್ ನಿರ್ದೇಶಿತ ಈ ನೀತಿಗಳು ದಿವಾಳಿತನವನ್ನು ಕಂಡಿವೆ. ಇದರ ಅನುಷ್ಠಾನದಿಂದ ಪರಿಣಾಮ ಅತ್ಯಂತ ಗಂಭೀರ ಹಾಗೂ ಸ್ವಾವಲಂಬಿ ಬೆಳವಣಿಗೆಗೆ ಅಪಾಯಕಾರಿಯಾಗಿವೆ. ಈ ಕುರಿತು ನಡೆದ ವಿಚಾರಸಂಕಿರಣದಲ್ಲಿ ರಾಷ್ಟ್ರದ-ಅಂತರ್ರಾಷ್ಟ್ರದ ಖ್ಯಾತಿಯ ವಿಜ್ಞಾನಿ, ನೀತಿ ನಿರೂಪಕರಾಗಿದ್ದ ಡಾ.ಎ.ಕೆ.ಎನ್.ರೆಡ್ಡಿ ಮತ್ತು ಕುಖ್ಯಾತ ಎನ್ರಾನ್ ವಂಚನೆಗಳ ವಿರುದ್ಧದ ಹೋರಾಟದ ಹೀರೋ ಡಾ. ವಿವೇಕ್ ಮಾಂಟೆರೋ ರಂತಹ ತಜ್ಞರು ಭಾಗವಹಿಸಿ ಹಂಚಿಕೊಂಡ ವಿಚಾರಗಳು ಇಲ್ಲಿವೆ.



ಡಾ. ಎ.ಕೆ.ಎನ್.ರೆಡ್ಡಿ, ಡಾ. ಮಾಂಟೇರೋ, ಮಾನ್ವಡೆ ಮತ್ತು ನಾಯಕವಾಡಿ ವೇದಿಕೆಯಲ್ಲಿ

'ಭಾರತ ಉಳಿಸಿ' ವಿಚಾರ ಸಂಕಿರಣದಲ್ಲೇ ಅತ್ಯುತ್ತಮ ಅಧಿವೇಶನವಾಗಿ ಹೊಮ್ಮಿದ 'ವಿದ್ಯುತ್ ಸುಧಾರಣೆಗಳ' ಬಗೆಗಿನ ಅಧಿವೇಶನದ ಆಶಯ ಭಾಷಣವನ್ನು ಅಂತರ್ರಾಷ್ಟ್ರೀಯ ವಿಖ್ಯಾತ ವಿಜ್ಞಾನಿ ಮತ್ತು ವಿದ್ಯುತ್ ನೀತಿ ತಜ್ಞ ಪ್ರೊ। ಎ.ಕೆ.ಎನ್. ರೆಡ್ಡಿಯವರು ಮಾಡಿದರು.

20ನೇ ಶತಮಾನದ ಆದಿಯಿಂದ ವಿದ್ಯುತ್ ಕ್ಷೇತ್ರದ ಬೆಳವಣಿಗೆಯ ಹಂತಗಳನ್ನು ಗುರುತಿಸಿದ ರೆಡ್ಡಿ 1948 ರಲ್ಲಿ ವಿದ್ಯುತ್ ಕಾನೂನು, ಖಾಸಗಿ ಮತ್ತು ಸ್ಥಳೀಯ ಕಂಪನಿಗಳು ದೇಶದ ಬೆಳೆಯುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸುವ ಪ್ರಯತ್ನದ ಅಂಗವಾಗಿತ್ತು. 80ರ ದಶಕದಲ್ಲಿ ದೇಶದ ಬೆಳವಣಿಗೆಯ ಅಗತ್ಯಗಳಿಗೆ ಪೂರಕವಾಗಿ ಕೆಲಸ ಮಾಡಿತು. 80ರ ದಶಕದ ಕೊನೆಗೆ ಪೂರೈಕೆ ಕೊರತೆ, ಗುಣಮಟ್ಟ, ದಕ್ಷತೆ, ತಂತ್ರಜ್ಞಾನದ ಅಳವಡಿಕೆಯಲ್ಲಿ ವಿಳಂಬ - ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿತ್ತು.

ಆದರೆ 50ರ ದಶಕದ ಆರಂಭದಲ್ಲಿ 'ವಿದ್ಯುತ್ ಸುಧಾರಣೆ'ಗಳ ಹೆಸರಲ್ಲಿ ಮಾಡಲಾದ ಪ್ರಮುಖ ಬದಲಾವಣೆಗಳು, ಆಗ ಒಟ್ಟಾರೆ ಆರ್ಥಿಕ ನೀತಿಯಲ್ಲಿ ಆದ ಪ್ರಮುಖ ಬದಲಾವಣೆಗಳ ಪರಿಣಾಮವಾಗಿತ್ತು. ವಿದ್ಯುತ್ ಕ್ಷೇತ್ರದ ಸಮಸ್ಯೆಗಳಿಗೆ ಪರಿಹಾರವಾಗಿ ಬಂದದ್ದಲ್ಲ.

'ವಿದ್ಯುತ್ ಸುಧಾರಣೆಗಳು ಸಮಗ್ರವಾಗಿ ವಿಫಲವಾಗಿವೆ'

ವಿದ್ಯುತ್ ಕ್ಷೇತ್ರದ ಸಮಸ್ಯೆಗಳಿಗೆ ವಿದೇಶಿ ಖಾಸಗಿ ಬಂಡವಾಳವನ್ನು ಆಕರ್ಷಿಸುವುದು ಮತ್ತು ರಾಜ್ಯ ವಿದ್ಯುತ್ ಬೋರ್ಡು ಪುನರ್ರಚನೆ ಎಂಬ ಎರಡು ಮಂತ್ರಗಳು ಎಲ್ಲಾ ಪರಿಹಾರ ನೀಡುತ್ತವೆ ಎಂಬುದು ವಿದ್ಯುತ್ ಸುಧಾರಣೆಗಳ ಹಿಂದಿನ ತೀರ್ಮಾನವಾಗಿತ್ತು. ಆದರೆ ಕಳೆದ ಹತ್ತು ವರ್ಷಗಳ ಅನುಭವ ಈ ಎರಡೂ 'ಮಂತ್ರಗಳ' ಪೂರ್ಣ ದೀವಾಳಿತನ ತೋರಿಸಿವೆ ಎಂದರು ರೆಡ್ಡಿ. ಎನ್ರೋನ್ ಕೊಜೆಂಟ್ರಿಕ್ಸ್ ಎಲ್ಲರಿಗೂ ಕಣ್ಣಿಗೆ ಹೊಡೆಯುವಂತೆ ಈ ಖಾಸಗಿ ವಲಯ ವಿದ್ಯುತ್ ಉತ್ಪಾದನೆಯ ಗುರಿಯ ಶೇಕಡಾ 10ನ್ನು ಮುಟ್ಟುವುದು ಮಾತ್ರ ಸಾಧ್ಯವಾಯಿತು. ಅವು ಉತ್ಪಾದಿಸಿದ ವಿದ್ಯುತ್ ಅತ್ಯಂತ ದುಬಾರಿಯಾಗಿದ್ದು, ಅದನ್ನು ಅವು ಸತತವಾಗಿ, ಉತ್ತಮ ಗುಣಮಟ್ಟ ದಕ್ಷತೆಗಳಿಂದ ನಿರ್ವಹಿಸಿಲ್ಲ. ಹೆಚ್ಚಿನ ಘಟಕಗಳು ಮುಚ್ಚಿವೆ. ರಾಜ್ಯ ವಿದ್ಯುತ್ ಬೋರ್ಡುಗಳ ಪುನರ್ರಚನೆಯ ಅವಸ್ಥೆ ಕೂಡಾ ಅದೇ ಆಗಿದೆ. ಇದಕ್ಕೆ 'ಮಾದರಿ'ಯಾಗಿದ್ದ ಒರಿಸ್ಸಾ ವಿದ್ಯುತ್ ಬೋರ್ಡ್‌ನ ಖಾಸಗೀಕರಣದ ಪರಿಣಾಮಗಳ ಬಗ್ಗೆ ಕುನುಂಗುವೋ ಸಮಿತಿ ವರದಿ, ಈ ಪ್ರಯೋಗ 'ಸಂಪೂರ್ಣ ವಿಫಲವಾಗಿದೆ' ಮಾತ್ರವಲ್ಲ ತೀವ್ರ ಬಿಕ್ಕಟ್ಟು ಸೃಷ್ಟಿಸಿವೆ **ಈ ಕ್ಷೇತ್ರದಲ್ಲಿ ಒಂದು ದಶಕದಲ್ಲಿ ವಿದ್ಯುತ್ ಕ್ಷೇತ್ರದ ಸಮಸ್ಯೆಗಳನ್ನು ಉಲ್ಬಣಗೊಳಿಸಿದ ಈ ವಿಶ್ವ-ಬ್ಯಾಂಕ್ ನಿರ್ದೇಶಿತ ನೀತಿಗಳನ್ನು ಕಿತ್ತು ಬಿಸಾಕದೆ ಯಾವುದೇ ಪರಿಹಾರವಿಲ್ಲ** ಎಂದು ರೆಡ್ಡಿಯವರ ಬಿಚ್ಚು ನುಡಿ. ಅದಕ್ಕೆ ಬದಲಿಯಾಗಿ ಜನತೆ - ಕೇಂದ್ರೀತ ವಿದ್ಯುತ್ ನೀತಿಯೊಂದನ್ನು ರೆಡ್ಡಿಯವರು ಮಂಡಿಸಿದರು. ಈ ವಿದ್ಯುತ್ ನೀತಿ ಸಾರ್ವಜನಿಕ ಕ್ಷೇತ್ರದಲ್ಲಿರುವ ಉತ್ಪಾದನೆ ಸಾಗಾಣಿಕೆ, ವಿತರಣೆ ಸಮಗ್ರೀಕರಣದ ಮೇಲೆ ಆಧಾರಿತ ಸಂಘಟನಾ ವ್ಯವಸ್ಥೆ ಪ್ರತಿಪಾದಿಸಬೇಕು. ವಿದ್ಯುತ್ ಎಲ್ಲರಿಗಾಗಿ, ವಿವಿಧ ಜನವಿಭಾಗಗಳ ಕೊಳ್ಳುವ ಶಕ್ತಿಯನ್ನೂ ನೀತಿ ಗಣನೆಗೆ ತೆಗೆದುಕಳ್ಳಬೇಕು. ಈ ಆಧಾರದ ಮೇಲೆ ಮೂರು ಜನವಿಭಾಗಗಳನ್ನು ಗುರುತಿಸಬಹುದು. ಕೊಳ್ಳುವ ಶಕ್ತಿ ಆಧಾರದ ಮೇಲೆ ವಿದ್ಯುತ್ ಉತ್ಪಾದಕ ಘಟಕಗಳನ್ನು ಮೀಸಲಿಡಬೇಕು. ಅತ್ಯಂತ ಕಡಿಮೆ ಕೊಳ್ಳುವ ಶಕ್ತಿಗೆ ಅತ್ಯಂತ ಕಡಿಮೆ ವೆಚ್ಚದ ಜಲವಿದ್ಯುತ್ ಶಕ್ತಿ ಘಟಕಗಳು ಇತ್ಯಾದಿ ಸಾರ್ವತ್ರಿಕ ವಿದ್ಯುದೀಕರಣ ನೀತಿಯ ಭಾಗವಾಗಿರಬೇಕು. ಇದು ರೆಡ್ಡಿಯವರು ಪ್ರತಿಪಾದಿಸಿದ ವಿದ್ಯುತ್ ನೀತಿಯ ಮುಖ್ಯ ಅಂಶಗಳು.

> **ಕೊಂಕಣ ಕ್ಯಾಲಿಫೋರ್ನಿಯಾ**
>
> ಎನ್ರೋನ್ ಕೊಂಕಣವನ್ನು ಕ್ಯಾಲಿಫೋರ್ನಿಯಾ ಮಾಡುತ್ತೇವೆ ಎಂದು ಬಂತು. ಆದರೆ ಕೊನೆಗೆ ಕ್ಯಾಲಿಫೋರ್ನಿಯಾವನ್ನು ಕೊಂಕಣ ಮಾಡಿ ಎರಡೂ ಕಡೆ ವಿದ್ಯುತ್ ಬಿಕ್ಕಟ್ಟು ಉಂಟು ಮಾಡಿತು.
>
> **- ಡಾ. ವಿವೇಕ ಮಾಂಟೆರೊ**

'ಎನ್ರೋನ್ ಕಲಿಸಿದ ಪಾಠ'

ಮುಂಬಯಿಯ ಸಿಐಟಿಯು ನಾಯಕ ಮತ್ತು ಎನ್ರೋನ್ ವಿರುದ್ಧ ಹೋರಾಟದ ಪ್ರಮುಖ 'ಹೀರೋ' ಡಾ। ವಿವೇಕ್ ಮಾಂಟೆರೋ ಎನ್ರೋನ್ ವಿದ್ಯುತ್ ಸುಧಾರಣೆಗಳ ಬಗ್ಗೆ ಕಲಿಸಿದ 'ಪಾಠ'ದ ಬಗ್ಗೆ ವಿಶದವಾಗಿ ತಿಳಿಸಿದರು. ಎನ್ರೋನ್ ನಮಗೆ ವಿದ್ಯುತ್ 'ಸುಧಾರಣೆಗಳ' ಸ್ವರೂಪ ಮಾತ್ರವಲ್ಲ, ಒಟ್ಟಾರೆ ಜಾಗತೀಕರಣ ಆರ್ಥಿಕ 'ಸುಧಾರಣೆಗಳ' ಸ್ವರೂಪದ ಬಗ್ಗೆ ನಮಗೆ ಸಮಗ್ರ ಶಿಕ್ಷಣನೀಡಿದೆ ಎಂದರು. ಎನ್ರೋನ್ ತನ್ನ ಧಾಬೋಲ್ 'ಫಾಸ್ಟ್‌ಟ್ರಾಕ್ ಪ್ರಾಜೆಕ್ಟ್' ಮತ್ತು 'ವಿದ್ಯುತ್ ಸುಧಾರಣೆ ನೀತಿಗಳ' ಅಂಗೀಕಾರಕ್ಕೆ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ನೀತಿ ನಿರ್ಧಾರಕರಿಗೆ 'ಶಿಕ್ಷಣ' ನೀಡಲು 2 ಕೋಟಿ ಡಾಲರು ಖರ್ಚು ಮಾಡಿತು ಎಂದು ಹೇಳಿಕೊಂಡಿದೆ. ಎನ್ರೋನ್‌ನ ಈ 'ಶಿಕ್ಷಣ'ಕ್ಕೆ ಮಾಂಟೆರೋ ಲೇವಡಿ ಮಾಡುತ್ತಿದ್ದರು ಎಂದು ಬೇರೆ ಹೇಳಬೇಕಾಗಿಲ್ಲವಲ್ಲ (ಶಿಕ್ಷಣ ವೆಚ್ಚಗಳು ಎನ್ರೋನ್ ಸಂಧರ್ಭದಲ್ಲಿ ಕೊಟ್ಟ ಭಾರಿ ಲಂಚ ಎಂದೂ ಹೇಳಬೇಕಾಗಿಲ್ಲವಲ್ಲ). ವ್ಯಂಗ್ಯದ ಕುಟುಕನ್ನು ತಮ್ಮ ಭಾಷಣದ ತುಂಬಾ ಬಳಸಿದ ಮೊಂಟೆರೋ ಎನ್ರೋನ್ ಹಗರಣವನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

ವಿದೇಶಿ ಖಾಸಗಿ ಕಂಪನಿಗಳು 'ಸ್ವತಂತ್ರ ವಿದ್ಯುತ್ ಕ್ಷೇತ್ರ' ಆಧಾರಿತ ನೀತಿಯ ಹಿಂದಿದ್ದ ಎಲ್ಲಾ ಆಶಯಗಳನ್ನು ಎನ್ರೋನ್ ಎಲ್ಲರಿಗೂ ಕಣ್ಣಿಗೆ ಹೊಡೆಯುವಂತೆ ಬಯಲು ಮಾಡಿದೆ. ಎನ್ರೋನ್ ಘಟಕ ಇತರ ಘಟಕಗಳಿಗಿಂತ 300 ಪಟ್ಟು ಹೆಚ್ಚು ದುಬಾರಿಯಾಗಿತ್ತು. ಆ ಕಂಪನಿ ದೀವಾಳಿಯಾದ ಮೇಲೆ ಬಯಲಾದಂತೆ, ಅದು ನೀಡಿದ್ದ ವಿದೇಶಿ ಬಂಡವಾಳ ಅತ್ಯಲ್ಪ. ಭಾರತೀಯ ಹಣಕಾಸು ಸಂಸ್ಥೆಗಳ 6500 ಕೋಟಿರೂ ಇತ್ತು. ಅಷ್ಟೇ ಬಂಡವಾಳದ ಎನ್ರೋನ್ ಸ್ಥಾಪಿಸಿದ ಸಾಮರ್ಥ್ಯದ ವಿದ್ಯುತ್ ಘಟಕ ಸ್ಥಾಪಿಸಬಹುದಿತ್ತು. ಧಾಬೋಲ್ ಘಟಕ ಒಂದೇ ವರ್ಷದಲ್ಲಿ ಆರೋಗ್ಯಕರವಾಗಿದ್ದ ಮಹಾರಾಷ್ಟ್ರ ವಿದ್ಯುತ್ ಬೋರ್ಡನ್ನು 1200 ಕೋಟಿರೂ ವೆಚ್ಚದಿಂದ ದೀವಾಳಿಯೆಬ್ಬಿಸಿತು. ಎನ್ರೋನ್ ಪ್ರಾಜೆಕ್ಟ್ ವಿರುದ್ಧ ಎಲ್ಲಾ ಆಯಾಮಗಳಲ್ಲಿ ಹೋರಾಡಿದ ಮೊಂಟೆರೋ ಅದರ ಎಲ್ಲಾ ಆಟಗಳ ಬಗ್ಗೆ ಅವರ ಸಂಘಟನೆಯ ಸಹೋದ್ಯೋಗಿ ಅಭಯ ಮೆಹತಾ ಬರೆದ 'ಪವರ್ ಪ್ಲೇ' ಎಂಬ ಪುಸ್ತಕದ ಉದಾರಣೆಗಳಿಂದ ವಿವರಿಸಿದರು. ಎನ್ರೋನ್ ಹಗರಣ ತಡೆಯುವಲ್ಲಿ ನಮ್ಮ ಇಡೀ ವ್ಯವಸ್ಥೆ ವಿಫಲವಾಯಿತು. ಇಂತಹ ಪ್ರಾಜೆಕ್ಟ್ ಒಂದನ್ನು ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಗಂಭೀರವಾಗಿ ಪರಿಶೀಲಿಸಬೇಕಾಗಿದ್ದ ಆಳುವ ರಾಜಕಾರಣಿಗಳು, ಅಧಿಕಾರಿಗಳು, ತಜ್ಞರು, ಕೋರ್ಟುಗಳು, ಎಲ್ಲರೂ ಸಮಗ್ರವಾಗಿ ವಿಫಲವಾದರು. ಇಡೀ ವ್ಯವಸ್ಥೆಯೇ ಕುಸಿದು ಬಿದ್ದಿತ್ತು. ಎನ್ರೋನ್ ಕಂಪನಿ ಕುಸಿದು ಬಿದ್ದಿದ್ದರೂ, ಅದರ ವಿರುದ್ಧ ಹೋರಾಟ ಪೂರ್ತಿ ಕೊನೆಗೊಂಡಿಲ್ಲ. ಆರ್ಥಿಕ ಸುಧಾರಣೆಗಳು (Reforms) ವಿಕೃತಿಗಳು (Deforms), ಖಾಸಗೀಕರಣ (Privatisation) ಹಗರಣಗಳು (Piratisation) ಎಂದು ಎನ್ರೋನ್ ನಮಗೆ 'ಶಿಕ್ಷಣ' ನೀಡಿದೆ. ಇಂತಹ ಹಗರಣಗಳನ್ನು ತಡೆಯಲು ಸಾಧ್ಯ. ಅದಕ್ಕೆ ಬದಲಿ ಕೊಡುವುದು ಸಾಧ್ಯ. ಎನ್ರೋನ್ 'ಶಿಕ್ಷಣ'ದಿಂದ ಈ 'ಪಾಠ' ಕಲಿಯಬೇಕು ಎಂದು ತಮ್ಮ ವ್ಯಂಗ್ಯ ಲೇಪಿತ ಕರೆ ಕೊಟ್ಟರು ಮೊಂಟೇರೋ.

> ಎನ್ರೋನ್ ಹಗರಣಕ್ಕೆ ಕಾರಣರಾದ ರಾಜಕಾರಣಿಗಳು, ಅಧಿಕಾರಿಗಳು, ಜಡ್ಜ್‌ಗಳನ್ನು ಕೋರ್ಟಿಗೆ ಎಳೆದು ಶಿಕ್ಷಿಸಲು ಸಾಧ್ಯವಿಲ್ಲವೆ? ವಿದ್ಯುತ್ ಸುಧಾರಣೆಗಳ' ಅಧಿವೇಶನದ ಸಂವಾದದಲ್ಲಿ ಎದ್ದ ಪ್ರಶ್ನೆ ಒರಿಸ್ಸಾದಲ್ಲಿ ವಿದ್ಯುತ್ ವಿತರಣೆಯಲ್ಲಿ ತೊಡಗಿದ್ದ ವಿದೇಶಿ ಕಂಪನಿ ಎ.ಇ.ಎಸ್. ಅಲ್ಲಿನ ಇತ್ತೀಚಿನ ಮಹಾಪೂರದಲ್ಲಿ ನಿರ್ನಾಮವಾದ 100 ಹಳ್ಳಿಗಳಿಗೆ ಪುನಃ ವಿದ್ಯುತ್ ವಿತರಣೆ ಮಾಡಲು ನಿರಾಕರಿಸಿತು. ಎರಡು ಸಾವಿರ ಕೋಟಿ ರೂ. ಕೊಟ್ಟರೆ ವಿದ್ಯುತ್ ವಿತರಣೆ ಪುನಃ ಆರಂಭಿಸುವುದು ಎಂದು ಹೇಳಿತು. ರಾಜ್ಯ ಸರ್ಕಾರ ನಿರಾಕರಿಸಿದಾಗ ತನ್ನ ಎಲ್ಲಾ ಚಟುವಟಿಕೆ ನಿಲ್ಲಿಸಿ ಓಡಿ ಹೋಯಿತು. ಇಂತಹ ಕಂಪನಿಗಳಿಗೆ ನಮ್ಮ ವಿದ್ಯುತ್ ಕ್ಷೇತ್ರವನ್ನು ಕೊಡಬೇಕೆ?
>
> **- ಕೆ.ಸಿ. ನಾಯಕವಾಡಿ**

'ವಿದ್ಯುತ್ ಸರಕಲ್ಲ, ಮೂಲಭೂತ ಸೇವೆ'

ಕರ್ನಾಟಕದ ಮೇಲೆ ವಿದ್ಯುತ್ ಸುಧಾರಣೆಗಳ ಪರಿಣಾಮಗಳ ಬಗ್ಗೆ ಮಾತನಾಡಿದ ಕೆ.ಸಿ. ನಾಯಕವಾಡಿ ಕೆ.ಪಿ.ಟಿ.ಸಿ.ಎಲ್.ನ ಚೀಫ್ ಎಂಜಿನಿಯರ್, ಅಲ್ಲದೆ ಅಖಿಲ ಭಾರತ ವಿದ್ಯುತ್ ಎಂಜಿನಿಯರ್ ಫೆಡರೇಶನ್‌ನ ಅಧ್ಯಕ್ಷ ಅವರು ಕರ್ನಾಟಕದಲ್ಲಿ ವಿದ್ಯುತ್‌ಕ್ಷೇತ್ರ ಪುನರ್ರಚನೆಗೆ ತೆಗೆದುಕೊಂಡ ಕ್ರಮಗಳನ್ನೂ, ದೇಶದ ಒಟ್ಟಾರೆ ವಿದ್ಯುತ್ ಕ್ಷೇತ್ರ ಹಾದುಬಂದ ದಾರಿ ಮತ್ತು ಅದು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದರು. ಒರಿಸ್ಸಾದಲ್ಲಿ ವಿದ್ಯುತ್ ಕ್ಷೇತ್ರ ಪುನರ್ರಚನೆಯ ವೈಫಲ್ಯವನ್ನು ವಿವರಿಸಿದ ಅವರು, ಕರ್ನಾಟಕದಲ್ಲಿ ಅದೇ ಗತಿ ಬರಲಿದೆ ಎಂದರು. ವಿದ್ಯುತ್ ಸುಧಾರಣೆಗಳ ಸಮಗ್ರ ವೈಫಲ್ಯವನ್ನೂ ಒತ್ತಿಹೇಳಿದ ನಾಯಕವಾಡಿ ರೆಡ್ಡಿಯವರು ಮಂಡಿಸಿದ ವಿದ್ಯುತ್ ನೀತಿ ರೂಪುರೇಷೆಗಳಿಗೆ ಬೆಂಬಲ ನೀಡಿದರು. ವಿವಿಧ ರಾಜ್ಯಗಳು ವಿದ್ಯುತ್ ಕ್ಷೇತ್ರದ ಖಾಸಗೀಕರಣ ವಿವಿಧ ಮಜಲುಗಳಿಗೆ ಮತ್ತು ಅದಕ್ಕೆ ವಿರೋಧ ಚಳುವಳಿಯ ಅಂಶಗಳನ್ನು ಗುರುತಿಸಿದರು. ರಾಜ್ಯ ವಿದ್ಯುತ್ ಬೋರ್ಡ್‌ಗಳು ಈಗ ಇರುವ ಸಮಗ್ರೀಕೃತ ಉತ್ಪಾದನೆ-ಸಾಗಾಣಿಕೆ-ವಿತರಣೆಗೆ ಜವಾಬ್ದಾರರಾಗಿರುವ ಸಾರ್ವಜನಿಕ ಕ್ಷೇತ್ರದ ಸಂಘಟನೆಗಳಾಗಿ ಉಳಿಸಿಕೊಳ್ಳುವುದು ಅವನ್ನು ಕಮರ್ಶಿಯಲ್ ಆದಾರದ ಮೇಲೆ ಶಿಸ್ತಿನಿಂದ ನಡೆಸುವುದು (ಅಂದರೆ ಶೇಕಡಾ 3 ಲಾಭ ಇರುವಂತೆ, ಲಾಭವನ್ನು ವಿದ್ಯುತ್ ಕ್ಷೇತ್ರದಲ್ಲಿ ತೊಡಗಿಸುವಂತೆ) ವಿದ್ಯುತ್ ಕ್ಷೇತ್ರದ ಸಮಸ್ಯೆಗಳಿಗೆ ಪರಿಹಾರ ವಿದ್ಯುತ್ ಮಸೂದೆ 2001ರ ಅಪಾಯಗಳನ್ನು ಅವರು ವಿವರವಾಗಿ ತಿಳಿಸಿರುವ ವಿದ್ಯುತ್ ಒಂದು ಸರಕಲ್ಲ. ಅದು ಒಂದು ಸೇವೆ ಎಂದು ಅವರು ಒತ್ತಿ ಹೇಳಿದರು. ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ ವಿದ್ಯುತ್ ಜನರಿಗಾಗಿ, ಹಣಕ್ಕಾಗಿ ಅಲ್ಲ. ವಿದ್ಯುತ್ ಬೆಳವಣಿಗೆ ಕೆಲಸಗಳಿಗಾಗಿ ಈಗಿನ 'ಹಗಲು ದರೋಡೆ' ಆಧಾರಿತ ನೀತಿಗೆ ಬದಲಿ ನೀತಿಗಾಗಿ ಹೋರಾಟ ಮಾಡಬೇಕು ಎಂದು ಕರೆ ನೀಡಿದರು.

ವಿಶ್ವಾಸಘಾತ : ಕೇಸರಿ ಪಡೆ ಇನ್ನೊಂದು ಹೆಸರು

ಗುಜರಾತ್‌ನಲ್ಲಿ ಚುನಾವಣೆಗಳು ಹತ್ತಿರವಾಗುತ್ತಿವೆ. ಈಗಲೇ 'ಇಂಡಿಯಾ ಟುಡೇ'ಯಂತಹ ಪತ್ರಿಕೆಗಳು ಬಿಜೆಪಿಯನ್ನು ಗೆಲ್ಲಿಸಲು ಆಟ ಆರಂಭಿಸಿವೆ. ವಿಶ್ವಹಿಂದೂ ಪರಿಷತ್ ಯಾತ್ರೆಯನ್ನು ತಡೆದ ಚುನಾವಣಾ ಆಯೋಗದ ಕ್ರಮದ ಬಗ್ಗೆ ಪ್ರಧಾನಿ, ಅಡ್ವಾಣಿ ಹೇಳಿಕೆಗಳಿಗೂ ಮತ್ತು ವಿಹೆಚ್‌ಪಿ ಆಟಗಳಿಗೂ ಏನು ಸಂಬಂಧವಿದೆ. ವಿಶ್ವಾಸಘಾತದ ಕೇಸರೀ ಪಡೆಗಳ ಕುತಂತ್ರಗಳೇನು?

ಕೇಸರಿ ಬಾಜಾಭಜಂತ್ರಿಗಾರರ ಮೇಳಗಾನ ಆರಂಭವಾಗಿಬಿಟ್ಟಿದೆ. ಆದರೆ 'ಇಂಡಿಯಾ ಟುಡೇ' ಗುಂಪಿನ 'ಅಭಿಪ್ರಾಯ ಸಂಗ್ರಹ'ದ ಹೆಸರಲ್ಲಿ ಅವರು ಹೇಳುತ್ತಿರುವುದನ್ನು ಯಾರೂ ಗಂಭೀರವಾಗಿ ತಗೊಂಡಿಲ್ಲ. ಗುಜರಾತಿನ ಚುನಾವಣೆಗಳಲ್ಲಿ ಬಿಜೆಪಿಗೆ ಮೂರನೇ ಎರಡು ಪ್ರಮಾಣದ ಸ್ಥಾನಗಳು ಸಿಗುತ್ತವೆ ಎಂಬ ಅದರ ಪ್ರಚಾರವನ್ನು ಸ್ವತಃ ಕೇಸರೀ ಪಡೆಗಳೇ ಗಂಭೀರವಾಗಿ ತಗೊಂಡಿಲ್ಲ. ಏಕೆಂದರೆ ಸರಕಾರ - ಪ್ರಾಯೋಜಿತ ಹತ್ಯಾಕಾಂಡಕ್ಕೆ ನೇತೃತ್ವದ ನೀಡಿದ ಹಿನ್ನೆಲೆಯಲ್ಲಿ ಒಂದು ಭಾರಿ ಚುನಾವಣಾ ವಿಜಯವನ್ನು ಗಳಿಸಬೇಕೆಂಬ ನಿರೀಕ್ಷೆ ಹೊತ್ತಿರುವ, ತಾನು 'ಚೋಟಾ ಸರದಾರ್' ಎಂದೇ ಭಾವಿಸಿರುವಾತ ಕೂಡಾ ತನ್ನ ಮತ ಕ್ಷೇತ್ರವನ್ನು ಬದಲಿಸಿ ಒಂದು 'ಸುರಕ್ಷಿತ ಕ್ಷೇತ್ರ'ವನ್ನು ಆರಿಸಿಕೊಂಡಿದ್ದಾರೆ. ಇದೇ ಬಿಜೆಪಿಯೊಳಗಿನ ಅತೀವ ಅಭದ್ರತೆಯನ್ನು ತೋರಿಸುತ್ತಿದೆ.

ಈ ನಡುವೆ ವಿಹೆಚ್‌ಪಿ ಯಾತ್ರೆಯನ್ನು ನಿಷೇಧಿಸಬೇಕೆಂಬ ಚುನಾವಣಾ ಆಯೋಗದ ನಿರ್ದೇಶನಕ್ಕೆ ಸಂಬಂಧಪಟ್ಟಂತೆ ದೇಶದ ಕಾನೂನನ್ನು ಎತ್ತಿ ಹಿಡಿಯಬೇಕು ಎಂದು ಪ್ರಧಾನ ಮಂತ್ರಿಗಳು ಹೇಳಿದ್ದಾರಂತೆ. ಭಾರತದ ದುರಂತವೆಂದರೆ ಹಲವು ಸದ್ಭಾವನೆಯ ವ್ಯಕ್ತಿಗಳೂ ಪ್ರಧಾನಮಂತ್ರಿಗಳ ಈ ಹೇಳಿಕೆಯನ್ನು ಹಾಡಿಹೊಗಳುತ್ತಿದ್ದಾರೆ. **ನಾವು ಎಂತಹ ಪರಿಸ್ಥಿತಿಯನ್ನು ತಲುಪಿದ್ದೇವೆಂದರೆ ಭಾರತದ ಸಂವಿಧಾನದ ಅಡಿಯಲ್ಲಿ ತಾನು ಏನು ಮಾಡುತ್ತೇನೆಂದು ಒಬ್ಬ ಪ್ರಧಾನಿ ಪ್ರತಿಜ್ಞೆ ಮಾಡಿದ್ದರೋ, ಅದನ್ನು ಮಾಡುತ್ತೇನೆ ಎಂದಾಗಲೂ ಚಪ್ಪಾಳೆ ತಟ್ಟಲಾಗುತ್ತಿದೆ. ದೇಶದ ಕಾನೂನನ್ನು ಎತ್ತಿ ಹಿಡಿಯುವುದು ಪ್ರಧಾನಮಂತ್ರಿಯಾಗಿ ಅವರ ಕೆಲಸ. ಆ ಕೆಲಸ ಮಾಡುತ್ತೇನೆಂದರೆ ಯಾರಿಗೆ ಉಪಕಾರ ಮಾಡಿದಂತಾಯಿತು?** ಆದರೆ ಅವರಿಗೆ ಸಿಗುತ್ತಿರುವ ಹೊಗಳಿಕೆಗಳು ರಾಜತಂತ್ರವನ್ನು ಕುರಿತಂತೆ ಕೌಟಿಲ್ಯನ ಅಥವಾ ಮ್ಯಾಕಿಯವೆಲ್ಲಿಯ ತಂತ್ರಗಳನ್ನು ನೆನಪಿಗೆ ತರುತ್ತೇವೆ - ಅಂದರೆ ಮೊದಲು ಎಷ್ಟೊಂದು ಕೆಡಕು ಉಂಟು ಮಾಡಲು ಸಾಧ್ಯ ಎಂಬ ಭ್ರಮೆಯನ್ನು ಸೃಷ್ಟಿಸಬೇಕು, ಆಮೇಲೆ ಅದನ್ನು ಮಾಡದಿರುವುದು, ಆಗ ಜನ ನಿಟ್ಟುಸಿರು ಬಿಡುತ್ತಾ ಚಪ್ಪಾಳೆ ತಟ್ಟುತ್ತಾರೆ!


ಫ್ಯಾಸಿಸ್ಟರ ಮಂದಗಾಮಿತನ?

ಈಗ ಅದೇ ಉದ್ದೇಶದಿಂದ 1951 ರಲ್ಲಿ ಕಳಿಸಿದ್ದ ಇನ್ನೊಬ್ಬ 'ಪ್ರಚಾರಕ'ನ ಸರದಿ. ಈಗ ಆತನನ್ನು 'ಮಂದಗಾಮಿ', 'ಹುಸಿ ಧರ್ಮನಿರಪೇಕ್ಷತಾವಾದಿ' ಎಂದು ಮೂದಲಿಸಲಾಗುತ್ತಿದೆ! ರಾಮಜನ್ಮಭೂಮಿ ಚಳುವಳಿಯ ಶಿಲ್ಪಿಯನ್ನು ತನ್ನ ಯಾತ್ರೆಗಳ ಬೆನ್ನ ಹಿಂದೆ ಅಭೂತಪೂರ್ವ ರಕ್ತದ ಹೊಳೆಯನ್ನು, ಕೋಮು ವೈಷಮ್ಯವನ್ನು ಹರಿಸಿದ ವ್ಯಕ್ತಿಯನ್ನು, 'ಹಿಂದೂರಾಷ್ಟ್ರ'ದ ಅಜೆಂಡಾವನ್ನು ಫ್ಯಾಸಿಸ್ಟ್ ಮಾದರಿಯಲ್ಲಿ ಕರಾರುವಾಕ್ಕಾಗಿ ವ್ಯಕ್ತಗೊಳಿಸಿದ ವ್ಯಕ್ತಿಯನ್ನು ಈಗ ವಿಹೆಚ್‌ಪಿ 'ಮಂದಗಾಮಿ' ಎನ್ನುತ್ತಿದೆ! ಆದರೆ ಆರ್‌ಎಸ್‌ಎಸ್ ಸ್ವಲ್ಪ ಹೆಚ್ಚು ನಿಷ್ಕಪಟತೆಯಿಂದ ಪ್ರತಿಕ್ರಿಯಿಸಿದೆ. ಅಡ್ವಾಣಿ ತಮ್ಮ ಸಂಘಟನೆಯ ಒಬ್ಬ ಹಳೆಯ ಸದಸ್ಯ, ಆದ್ದರಿಂದ ಆರ್‌ಎಸ್‌ಎಸ್ ನಂತೆ ಅವರೂ ಭಾರತ ಸದಾ ಹಿಂದೂ ದೇಶವಾಗಿತ್ತು, ಹಿಂದೂ ದೇಶವಾಗಿದೆ ಎಂದೇ ನಂಬುತ್ತಾರೆ ಎಂದು ಆರ್‌ಎಸ್‌ಎಸ್ ವಕ್ತಾರರು ಹೇಳಿದ್ದಾರೆ.

ಅಷ್ಟೇ ಅಲ್ಲ, ಭಾರತ ಎಂದೂ ಒಂದು ಹಿಂದೂ ಪ್ರಭುತ್ವವಾಗುವುದಿಲ್ಲ ಎಂದು ಅಡ್ವಾಣಿಯವರು ಸಂಸತ್ತಿನಲ್ಲಿ ನೀಡಿದ ಹೇಳಿಕೆ ರಾಜತಂತ್ರದ ಭಾಷೆ ಎಂದು ಆರ್‌ಎಸ್‌ಎಸ್ ವಕ್ತಾರರು ನಮಗೆ ಹೇಳುತ್ತಾರೆ. ಮಾತಿನ ಮಂಟಪಗಳನ್ನೆಲ್ಲಾ ಬದಿಗಿಟ್ಟು ನೋಡಿದರೆ ಇವೆಲ್ಲದರ ಅರ್ಥವಿಷ್ಟೆ - ಅದೆಂದರೆ ವಿಶ್ವಾಸಘಾತ. ನಿಜ ಆಶಯಗಳನ್ನು ಜನಗಳಿಗೆ ಪ್ರಿಯವೆನಿಸುವ ಅಬ್ಬರದ ಮಾತುಗಳ ಮೂಲಕ ಮರೆಮಾಚುವುದು ಫ್ಯಾಸಿಸ್ಟ್ ವಿಧಾನ. ಅದನ್ನು ಇಂದು ಬಿಜೆಪಿ ಕರಾರುವಾಕ್ಕಾಗಿ ಬಳಸಿಕೊಳ್ಳುತ್ತಿದೆ.

ಕೇಸರಿಪಡೆಗಳ ನಿಜ ಆಶಯವೇನು ಎಂದು ಬಹಳ ಸಲ ಹೇಳಿದ್ದೇವೆ. ಈಗ ಮತ್ತೊಮ್ಮೆ ಹೇಳಲೇಬೇಕಾಗುತ್ತದೆ. ಅಂದರೆ ಆಧುನಿಕ ಭಾರತದ ಧರ್ಮನಿರಪೇಕ್ಷ ಪ್ರಜಾಪ್ರಭುತ್ವವಾದಿ ಗಣತಂತ್ರದ ಸ್ವರೂಪವನ್ನು ಒಂದು ಫ್ಯಾಸಿಸ್ಟ್ ಮಾದರಿಯ ಉನ್ಮತ್ತ ಅಸಹಿಷ್ಣು 'ಹಿಂದುರಾಷ್ಟ್ರ'ವಾಗಿ ಬದಲಿಸಲು 'ಮೋದೀಕರಣ' ಮುಂಬರುವ ಗುಜರಾತ್ ಚುನಾವಣೆಗಳಲ್ಲಿ ಈ 'ಮೋದೀಕರಣ' ಎದುರಿಸಿ ನಿಲ್ಲಿಸಬೇಕಾಗಿದೆ.


ಗುಜರಾತಿನಲ್ಲಿನ ಇಂತಹ ಪರಿವರ್ತನೆಯಿಂದ ಭಾರತವನ್ನು ಉಳಿಸಲು ಧರ್ಮನಿರಪೇಕ್ಷ ಶಕ್ತಿಗಳು ಅಲ್ಲಿ ಚುನಾವಣೆಗಳು ನೇರ ಸ್ಪರ್ಧೆಯಿರುವಂತೆ ಮಾಡಬೇಕಾಗಿದೆ. ಇದಕ್ಕೆ ಅಲ್ಲಿ ಅತಿದೊಡ್ಡ ಪಕ್ಷವಾಗಿರುವ ಕಾಂಗ್ರೆಸ್ ನೇತೃತ್ವ ನೀಡಬೇಕು. ಅದು ಇತ್ತೀಚಿಗೆ ಉತ್ತರ ಪ್ರದೇಶದಲ್ಲಿ ಮಾಡಿದಂತೆ ಮಂದದೃಷ್ಟಿಯನ್ನು ತಳೆಯದೆ ಪರಿಸ್ಥಿತಿಗೆ ಸರಿಯಾಗಿ ಸ್ಪಂದಿಸುತ್ತದೆ ಎಂದು ನಿರೀಕ್ಷಿಸಲಾಗುತ್ತಿದೆ. ಕೇಸರಿ ಪಡೆಯೇನಾದರೂ ಗೆದ್ದರೆ ಭಾರತಕ್ಕೆ ಮತ್ತು ಇಲ್ಲಿಯ ಜನರಿಗೆ ಏನೂ ಕಾದಿದೆಯೆಂಬುದು ಕೌಟಿಲ್ಯ ತಂತ್ರ ಮತ್ತು ಫ್ಯಾಸಿಸ್ಟ್ ಮಾದರಿ ವಿಭಾಗಗಳ ವಿನಾಶಕಾರಿ ಮಿಶ್ರಣವಾದ 'ಮೋದೀಕರಣ' ನಮ್ಮೆದುರು ತೆರೆದಿಡುತ್ತಿದೆ. ○



ನರಹಂತಕನಿಗೆ ರಕ್ಷಣೆ!

ನರಹಂತಕ ಎಂದಾಕ್ಷಣ ಥಟ್ಟನೆ ನೆನಪಿಗೆ ಬರುವುದು ಕಾಡುಗಳ್ಳ ವೀರಪ್ಪನ್. ಅವನು ಕಾಡಿನಲ್ಲಿರುವ ನರಹಂತಕನಾದರೆ, ಊರಿನಲ್ಲಿರುವ ನರಹಂತಕ - ಗುಜರಾತ್ ಸರಕಾರದ ಉಸ್ತುವಾರಿ ಮುಖ್ಯಮಂತ್ರಿ ನರೇಂದ್ರ ಮೋದಿ. ನಾಜಿ ಪಡೆಗಳನ್ನು ನಾಚಿಸುವಷ್ಟು ಜನರ ಬರ್ಬರ ಹತ್ಯೆಗೆ, ಕಾರಣವಾದ ಗುಜರಾತ್ ಸರಕಾರವನ್ನು ಕೇಂದ್ರ ಸರ್ಕಾರದ ಗೃಹಮಂತ್ರಿ, ಬಿಜೆಪಿ ಬಳಗ, ಬೆಂಬಲ ನೀಡುತ್ತಿರುವ ಮೈತ್ರಿ ಪಕ್ಷಗಳು, ಹೃತ್ಪೂರ್ವಕವಾಗಿ ರಕ್ಷಿಸಿದೆ.

ಸಂದರ್ಭ ; ನವೆಂಬರ್ 8 ರಂದು ಲೋಕಸಭೆಯಲ್ಲಿ ಮಂಡಿಸಲಾದ ನಿಲುವಳಿ ಸೂಚನೆಯ ಮೇಲಿನ ಚರ್ಚೆ. ಚಳಿಗಾಲದ ಅಧಿವೇಶನ ಆರಂಭವಾದ ದಿನವೇ ಸಿಪಿಐ(ಎಂ)ನ ಲೋಕಸಭಾ ಸದಸ್ಯ ಸುಭೋದ್ ರಾಯ್ ಮಂಡಿಸಿದ "ದೇಶದಲ್ಲಿ, ವಿಶೇಷವಾಗಿ ಗುಜರಾತಿನಲ್ಲಿ, ಕೋಮುಶಕ್ತಿಗಳನ್ನು ಸೋಲಿಸಲು ಸರಕಾರ ವಿಫಲವಾಗಿದೆ". ಎಂಬ ನಿಲುವಳಿ ಸೂಚನೆಯ ಮೇಲಿನ ಚರ್ಚೆಯ ಸಂದರ್ಭದಲ್ಲಿ ಅದ್ವಾನಿ ಮತ್ತು ಇತರೆ ಬಿಜೆಪಿ ಮುಖಂಡರು ನಾಚಿಕೆ ಇಲ್ಲದಂತೆ ಗುಜರಾತ್ ಸರಕಾರದ ಹೇಯ ಕೃತ್ಯಗಳನ್ನು ಸಮರ್ಥಿಸಿ ಕೊಂಡರು. ನಿಲುವಳಿ ಸೂಚನೆಗೆ ನೋಟೀಸು ನೀಡಿದ'ವ'ರ'ಲ್ಲಿ ಸುಭೋದ್ ರಾಯ್ ಮಾತ್ರವಲ್ಲದೆ, ಸಿಪಿಐ(ಎಂ)ನ ಇನ್ನೋರ್ವ ಸದಸ್ಯ ರೂಪ ಚಂದ್ ಪಾಲ್, ಸಮಾಜವಾದಿ ಪಕ್ಷದ ರಾಮ್‌ಜಿ ಲಾಲ್ ಸುಮನ್, ಆರ್.ಜೆ.ಡಿ.ಯ ರಘುವಂಶ ಪ್ರಸಾದ್ ಸಿಂಗ್, ಸಿಪಿಐನ ಅಜೋಯ್ ಚಕ್ರವರ್ತಿ ಮತ್ತು ಕಾಂಗ್ರೆಸ್ ಪಕ್ಷದ ಪ್ರಭೋದ್ ಪಾಲಕಾ ಕೂಡಾ ಸೇರಿದ್ದರು.



ಯಾವುದೇ ನಾಚಿಕೆ ಇಲ್ಲದೆ, ಗುಜರಾತ್ ಸರಕಾರದ ರಕ್ಷಣೆಗೆ ಧಾವಿಸಿದ, ಬಿಜೆಪಿ ವಕ್ತಾರ ಪ್ರೊಫೆಸರ್ ವಿಜಯ್‌ಕುಮಾರ್ ಮಲ್ಹೋತ್ರ ಮಾತನಾಡುತ್ತಾ, ಯಾವುದೇ ಗಲಭೆಗಳಲ್ಲಿದೆ ಶಾಂತಿಯುತವಾಗಿ ವಿಶ್ವಹಿಂದೂ ಪರಿಷತ್‌ನ ಯಾತ್ರೆಯನ್ನು ಒಗೆಹರಿಸಿದ್ದಕ್ಕಾಗಿ ಗುಜರಾತ್ ಸರಕಾರ ಮತ್ತು ವಿ.ಹೆಚ್.ಪಿ.ಯನ್ನು ಅಭಿನಂದಿಸಿದರು. ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ವಿರೋಧ ಪಕ್ಷಗಳು ಗುಜರಾತಿನಲ್ಲಿ ಕೋಮು ಗಲಭೆ ನಡೆಯಬೇಕೆಂದು ಬಯಸುತ್ತವೆ" ಎಂದು ಆರೋಪಿಸಿದರು. ದೇಶದಲ್ಲಿ ಗುಜರಾತಿನಲ್ಲಿ ಕೋಮುಗಲಭೆಗಳನ್ನು ಹುಟ್ಟುಹಾಕಿರುವವರು ಯಾರು ಎಂಬುದು ಪ್ರಜ್ಞಾಪೂರ್ವಕವಾಗಿ ಆಲೋಚಿಸುವ ಪುಟಾಣಿಗಳಿಗೂ ತಿಳಿದಿದೆ.

ತನ್ನ ಪಕ್ಷದ ಸರಕಾರವನ್ನು ರಕ್ಷಿಸುವ ಭರದಲ್ಲಿ, ಗುಜರಾತ್ ಗಲಭೆ ಸಂದರ್ಭದಲ್ಲಿ, ಒಬ್ಬನೇ ಒಬ್ಬ ಕಾಂಗ್ರೆಸ್ ಕಾರ್ಯಕರ್ತನಿಗೆ ಗಾಯಗಳಾಗಿರುವುದನ್ನು ತೋರಿಸಿ' ಎಂದು ವಿರೋಧ ಪಕ್ಷಗಳಿಗೆ ಸವಾಲು ಎಸೆದ ಪ್ರೊಫೆಸರ್ ಮಲ್ಹೋತ್ರರವರು ಅವರ ಪಕ್ಷದವರಿಂದಲೇ ಅಪಹಾಸ್ಯಕ್ಕೆ ಈಡಾದರು. ಕಾಂಗ್ರೆಸ್ಸಿನ ಮಾಜಿ ಸಂಸತ್ ಸದಸ್ಯ ಇಸಾನ್ ಜಫ್ರಿಯವರು ಆರ್.ಎಸ್. ಎಸ್. ವಿಹೆಚ್‌ಪಿ ಗೂಂಡಾಗಳಿಂದ ಹತರಾದದ್ದು ಈ ಮರೆವಿನ ಪ್ರೊಫೆಸರ್ ನೆನಪಿಗೆ ಬರಲಿಲ್ಲ.!

ಗೃಹಮಂತ್ರಿಯವರ ಅದ್ವಾನ : ಗೃಹ ಮಂತ್ರಿ ಅದ್ವಾನಿಯವರ ಅದ್ವಾನವೇ ಇನ್ನೊಂದು ರೀತಿಯದ್ದು. 4 ವರ್ಷಗಳಿಂದ ಸತತವಾಗಿ ಗೃಹಮಂತ್ರಿಗಳಾಗಿದ್ದ ಆದ್ವಾನಿಯವರಿಗೆ 'ಭಾರತ ಜಾತ್ಯಾತೀತ' ರಾಷ್ಟ್ರ ಎಂಬುದು ನೆನಪಿಗೆ ಬಂತು. ಮತಧರ್ಮದ ಆಧಾರದ ಮೇಲೆ ಇದನ್ನು ಬದಲಿಸಲು ಸಾಧ್ಯವಿಲ್ಲ ಎಂದು ಘೋಷಿಸಿದರು! ದೇಶದ ಸಾಂಸ್ಕೃತಿಕ ಮೂಲ ಮತ್ತು ಪ್ರಾಚೀನ ನಾಗರೀಕತೆ ಇದಕ್ಕೆ ಕಾರಣ ಎಂದು ಬಣ್ಣಿಸಿದರು!! ಬಾಬ್ರಿ ಮಸೀದಿ ಉರುಳಿದುದು 'ದುರದೃಷ್ಟಕರ' ಎಂದರು. ಆದರೆ ಅಯೋಧ್ಯಾ ಚಳುವಳಿ ಶ್ರೇಷ್ಠವಾದುದಂತೆ. ದ್ವಂದ್ವ ನೀತಿಗೆ ಇನ್ನೆಂತಹ ಉದಾರಣೆ. **ಒಂದೆಡೆ ಸಂಘ ಪರಿವಾರದವರನ್ನು ಸಂತೈಸುವ ತಂತ್ರ ಇನ್ನೊಂದೆಡೆ. ಸಂವಿಧಾನಕ್ಕೆ ಅಪಚಾರ ಆಗುವುದೇನೋ ಎನ್ನುವ ಭಯ ಅಥವಾ ತಾನು ಪರಿವರ್ತನೆ ಆಗಿದ್ದೇನೆ ಎಂದು ಮುಗ್ಧ ಜನಕ್ಕೆ ತಿಳಿಸುವ ಕುತಂತ್ರ ಯಾವುದಾದರೇನಂತೆ?** ಬಾಬ್ರಿ ಮಸೀದಿ ಉರುಳುವಾಗ ಕೇಕೆ ಹಾಕುತ್ತಿದ್ದ ಉಮಾಭಾರತಿಯೊಂದಿಗೆ ಮನಸಾರೆ ನಗುತ್ತಿದ್ದ ಆದ್ವಾನಿ ಮತ್ತು ಮುರಳಿ ಮನೋಹರ್ ಜೋಷಿ ಅವರ ಫೋಟೋವನ್ನು ಮರೆಯಲು ಸಾಧ್ಯವೇ? ಅವರು ಪರಿವರ್ತನೆ ಆಗಿದ್ದಾರೆ ಎಂದರೆ ನಂಬಲು ಸಾಧ್ಯವೇ? ಅದ್ವಾನಿಯವರ ಈ ದ್ವಂದ್ವನೀತಿ; ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದ 'ಕೇಶವ' ಅವರು ಬರೆದ ವ್ಯಂಗ್ಯ ಚಿತ್ರಗಳನ್ನು ನೆನಪಿಗೆತರುತ್ತದೆ. ಹಿಂದೆ ಸಂಘ ಪರಿವಾರದಲ್ಲಿ ಆದ್ವಾನಿ ತೀವ್ರವಾದಿಯಾಗಿದ್ದು, ವಾಜಪೇಯಿ ಸೌಮ್ಯವಾದಿಯಾಗಿದ್ದರು. ಗುಜರಾತ್ ಗಲಭೆಯ ನಂತರ ನರೇಂದ್ರ ಮೋದಿ ತೀವ್ರಗಾಮಿಯಾಗುತ್ತಲೇ, ಆದ್ವಾನಿ ವಾಜಪೇಯಿ ಇಬ್ಬರೂ ಸೌಮ್ಯವಾದಿಗಳಾದರು. ಇದೀಗ ವಿಶ್ವಹಿಂದೂ ಪರಿಷತ್ತಿನ ಪ್ರವೀಣ್ ತೂಗಾಡಿಯಾ ತೀವ್ರವಾದಿ ವಾಜಪಾಯಿ, ಅದ್ವಾನಿ, ನರೇಂದ್ರಮೋದಿ ಮೂವರೂ ಸೌಮ್ಯವಾದಿಗಳೆ? ಮುಂದೊಂದು ದಿನ ಇನ್ನೊಬ್ಬ ತೀವ್ರಗಾಮಿ ಹುಟ್ಟುತ್ತಾನೆ. ಆಗ ಪ್ರವೀಣ್ ತೂಗಾಡಿಯೂ ಕೂಡಾ ಸೌಮ್ಯವಾದಿಗಳ ಸಾಲಿಗೆ ಸೇರುತ್ತಾನೆ.

ಎಲ್ಲರನ್ನೂ ಎಲ್ಲಾ ಕಾಲಕ್ಕೂ ಮೂರ್ಖರನ್ನಾಗಿಸಲು ಸಾಧ್ಯವಿಲ್ಲ ಎಂದು ನರಹಂತಕ ಪಡೆಗಳಿಗೆ ತಿಳಿದಿಲ್ಲವೆಂದು ಕಾಣುತ್ತದೆ.

ನಿಲುವಳಿ ಸೂಚನೆ ಸಂಖ್ಯೆಯ ಆಧಾರದಲ್ಲಿ ಸಂಸತ್ತಿನಲ್ಲಿ ಸೋತಿರಬಹುದು. ಆದರೆ ಅಲ್ಲಿ ನಡೆದ ಚರ್ಚೆ ಜನರ ನಡುವೆ ಮುಂದುವರಿಯಲಿದೆ ಜಾತ್ಯಾತೀತ ಪರಂಪರೆಯನ್ನು ಉಳಿಸಿಕೊಳ್ಳಲು ಮುಂದಾಗಲಿದೆ.

ವರದಕ್ಷಿಣೆಯ ಪೈಶಾಚಿ

ಎಪ್ಪತ್ತರ ದಶಕದವರೆಗೆ ಕೆಲವೇ ಮೇಲ್ಜಾತಿಯ ಹಾಗೂ ಮೇಲ್ವರ್ಗದ ಕುಟುಂಬಗಳಿಗ ಸರ್ವವ್ಯಾಪಿಯಾಗಿದೆ. ಗುಜರಾತಿನಿಂದ - ಗುವಾಹಟಿ, ಕನ್ಯಾಕುಮಾರಿಯಿಂದ ಕಾಶ್ಮೀರದವರೆ ನಡೆಸಿದ ಸಮೀಕ್ಷೆಯು ಇದನ್ನು ಮತ್ತಷ್ಟು ದೃಢಪಡಿಸಿದೆ. ಉಡುಗೊರೆಗಳ ರೂಪದಲ್ಲಿ ವಿಸ್ತರಿಸಿಕೊಂಡಿದೆ. ಹೊಸ ಹೊಸ ಆಯಾಮಗಳನ್ನು ಪಡೆದುಕೊಂಡು ಭಾರತೀಯ ಸಮಾ ಸಮುದಾಯದೆದುರು ಸವಾಲಾಗಿ ನಿಂತಿರುವ 'ವರದಕ್ಷಿಣೆ'ಯ ಪೈಶಾಚಿಕ ಅವತಾರಗಳು, ದೆದುರು ಬಿಚ್ಚಿಕೊಂಡವು. ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯು ಭಾರತೀಯ ದೇಶದಲ್ಲಿಯೇ ಪ್ರಥಮ ಬಾರಿಗೆ ರಾಷ್ಟ್ರೀಯ ಮಟ್ಟದ ವರದಕ್ಷಿಣೆ ವಿರೋಧಿ ಸಮಾವೇಶವ ದಿನಗಳ ಕಾಲ ನಡೆದ ಸಮಾವೇಶದಲ್ಲಿ 18 ರಾಜ್ಯಗಳಲ್ಲಿ ಎಐಡಿಬ್ಲ್ಯುಎ ಸಮೀಕ್ಷೆ ನಡೆಸಿ ತಂದ ವ ವರದಕ್ಷಿಣೆಗೆ ನೀರು ಗೊಬ್ಬರವನ್ನುಣಿಸಿ ಹೆಮ್ಮರವಾಗಿ ಪೋಷಿಸುತ್ತಿರುವ ಅಂಶಗಳ ಕಡೆಗೆ ಗಮ ಕುರಿತು ಒಕ್ಕೊರಲಿನಿಂದ ನಿರ್ಣಯ ಅಂಗೀಕರಿಸಲಾಯಿತು. ಈ ಬಗ್ಗೆ ಒಂದು ವರದಿ

ದೆಹಲಿಯಲ್ಲಿ ವರದಕ್ಷಿಣೆ ವಿರೋಧಿ ರಾಷ್ಟ್ರೀ

ತಮಿಳು ನಾಡಿನ ಸೇಲಂ ಜಿಲ್ಲೆಯ ಓಮಲೂಕ ತಾಲ್ಲೂಕಿನ ಹಳ್ಳಿಯೊಂದರ 14 ವಯಸ್ಸಿನ ಹುಡುಗನೊಬ್ಬ, "ನಿನ್ನಿಬ್ಬರು ಅವಳಿ ಹೆಣ್ಣು ಶಿಶುಗಳನ್ನು ಕೊಂದು ಹಾಕಿದರೆ ಮಾತ್ರವೆ ನಾನು ಸಂಜೆಗೆ ಮನೆಗೆ ಹಿಂದಿರುಗುವೆ ಇಲ್ಲವಾದರೆ ನಾನು ಮನೆ ಬಿಟ್ಟು ಎಲ್ಲಿಗಾದರೂ ಹೋಗುತ್ತೇನೆಂದು ತಾಯಿಗೆ ಬೆದರಿಕೆ ಹಾಕಿ ಶಾಲೆಗೆ ಓಡಿದ್ದ. ಒಬ್ಬನೇ ಗಂಡು ಮಗನಾಗಿದ್ದ ಅವನಿಗೆ ಇನ್ನಿಬ್ಬರು ಹಿರಿಯ ಸೋದರಿಯರಿದ್ದರು. ಶಾಲೆಯಲ್ಲಿ ಅವನ ಸ್ನೇಹಿತರು ಅವನೊಂದಿಗೆ ಹೇಳಿದ್ದರಂತೆ, ನೀನು ನಿನ್ನ ನಾಲ್ಕು ತಂಗಿಯರಿಗೆ ಹೇಗೆ ಮದುವೆ ಮಾಡುತ್ತೀಯ. ನಿನ್ನ ತಂದೆಗೆ ಈಗಾಗಲೆ ವಯಸ್ಸಾಗಿದೆ. ಎಲ್ಲ ಜವಾಬ್ದಾರಿ ನಿನ್ನ ಮೇಲೆಯೆ ಬೀಳುತ್ತದೆ ಹೇಗಾದರೂ ಮಾಡಿ ಅವಳಿ ಶಿಶುಗಳನ್ನ ಹೊರಗೆ ಹಾಕಿಸಬಾರದೆ ಎಂದು, ಹೀಗಾಗಿ ಹುಡುಗ ತಂದೆ ತಾಯಿಯರಿಗೆ ಬೆದರಿಕೆ ಹಾಕಿದ್ದ. ಈಗಾಗಲೆ ಆ ಹಳ್ಳಿಯಲ್ಲಿ ಮತ್ತು ಜಿಲ್ಲೆಯಲ್ಲಿ ಲಿಂಗ ಅನುಪಾತದಲ್ಲಿ ಅಪಾರ ವ್ಯತ್ಯಾಸ ಮತ್ತು ಹೆಣ್ಣು ಶಿಶು ಹತ್ಯೆಗಳು ಮನೆಮಾತಾಗಿದೆಯಂತೆ. ಹೆಣ್ಣು ಮಕ್ಕಳ ಮದುವೆ, ಮದುವೆಗೆ ಭರಿಸಬೇಕಾದ ವರದಕ್ಷಿಣೆ, ಮದುವೆಯ ನಂತರವೂ ಮುಂದುವರೆಯುಬಹುದಾದ ಬೇಡಿಕೆಗಳು, ಹೊರಬೇಕಾದ ಭಾರ 14ರ ಹುಡುಗನ ಮೆದುಳನ್ನು ಎಷ್ಟರ ಮಟ್ಟಿಗೆ ಹೊಕ್ಕಿವೆ, ಹೃದಯವನ್ನು ಎಷ್ಟು ಕಠಿಣಗೊಳಿಸಿವೆ ಯೋಚಿಸಿ! ಆತನ ಬೆದರಿಕೆಯಿಂದ ಹೆತ್ತ ಒಡಲಿಗಾಗಿರಬಹುದಾದ ತಳಮಳ ಎಂಥದ್ದಾಗಿರಬಹುದು ಊಹಿಸಲು ಸಾಧ್ಯವೆ?

ತಮಿಳುನಾಡಿನಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಕೆಳ ವರ್ಗದ ಶೇ. 8 ಕುಟುಂಬಗಳಲ್ಲಿ 10 ಸಾವಿರದವರೆಗೆ ಮಧ್ಯಮವರ್ಗದ ಶೇ. 8 ಕುಟುಂಬಗಳಲ್ಲಿ 1 ಲಕ್ಷದಿಂದ 3 1/2 ಲಕ್ಷದವರೆಗೆ ಮದುವೆಗಾಗಿ ಸಾಲ ಪಡೆಯಲಾಗುತ್ತಿದೆ. ಶೇ. 17 ರಷ್ಟು ಕುಟುಂಬಗಳು 50 ರಿಂದ 1 ಲಕ್ಷದವರೆಗೆ ಸಾಲ ಪಡೆದರೆ ಶೇ. 17 ಕುಟುಂಬಗಳು ಯಾವುದನ್ನೂ ತಿಳಿಸಲು ನಿರಾಕರಿಸಿದ್ದಾರೆ. ಇನ್ನುಳಿದವರು ಮನೆಯನ್ನು ಅಡವಿಡುವುದು, ಭೂಮಿಯನ್ನು ಮಾರುವುದು, ನಿವೃತ್ತಿ ಹಣವನ್ನು ವ್ಯಯಿಸುವುದು, ಕೂಡಿಟ್ಟ ಒಡವೆಗಳನ್ನು ಬಳಸುವುದು, ಪಿಂಚಣಿ ಹಣವನ್ನು ಉಪಯೋಗಿಸುವುದು, ಸಂಬಂಧಿಕರಿಂದ ಸಹಾಯ ತೆಗೆದುಕೊಳ್ಳುವುದು ಮುಂತಾದ ವಿವರಗಳನ್ನು ನೀಡಿರುತ್ತಾರೆ. ಇದೇ ಪರಿಸ್ಥಿತಿ ಎಲ್ಲೆಡೆ ಕಾಣ ಸಿಗುತ್ತಿದೆಯೆಂದರೆ ಅತಿಶಯೋಕ್ತಿಯಲ್ಲವಲ್ಲ.



ಈಶಾನ್ಯ ರಾಜ್ಯ ಅಸ್ಸಾಂನವರು ಏನನ್ನುತ್ತಾರೆ.....

ಸಮೀಕ್ಷೆಯಲ್ಲಿ ಪಾಲ್ಗೊಂಡ ಶೇ. 20.9 ರಷ್ಟು ಜನರ ಅಭಿಪ್ರಾಯವೆಂದರೆ ವರದಕ್ಷಿಣೆಯಿಲ್ಲದೆ ಮದುವೆಯೇ ಸಾಧ್ಯವಿಲ್ಲವೆಂಬುದು.

ಶೇ. 20.8 ಹೆಣ್ಣುಮಕ್ಕಳು ವರದಕ್ಷಿಣೆಯನ್ನು ಸಮರ್ಥಿಸಿದ್ದಾರೆ. ಅದಕ್ಕೆ ಅವರು ಕೊಡುವ ಕಾರಣವೇದರೆ ಒಮ್ಮೆಮದುವೆಯಾಗಿ ಜೀವಾವಧಿ ಗಂಡನ ಮನೆ ಸೇರಿದರೆ ತವರು ಮನೆಯಿಂದ ಏನನ್ನೂ ಪಡೆಯುವಂತಿಲ್ಲ. ಸಿಂಹಪಾಲು ಆಸ್ತಿಯನ್ನು ಗಂಡು ಮಕ್ಕಳು ಅನುಭವಿಸುವುದಾದರೆ, ಮದುವೆಯ ಸಂದರ್ಭಕ್ಕೆ ಸ್ವಲ್ಪ ಪಾಲನ್ನು ನಮಗಾಗಿ ವ್ಯಯಿಸುವುದರಲ್ಲಿ ತಪ್ಪೇನಿದೆ. ತಂದೆ ಆಸ್ತಿಯಲ್ಲಿ ನಮಗೆ ಹಕ್ಕಿಲ್ಲವೆ? ಅದರ ಭಾಗವಾಗಿ ಕೊಡಲಿ ಎಂದಿದ್ದಾರೆ. ಮಧ್ಯಮ ವರ್ಗದ ಕುಟುಂಬಗಳಿಗೆ ಸೇರಿದ ಯುವತಿಯರು. ಇದು ಆಲೋಚನೆಗೆ ಹಚ್ಚುವ ವಿಚಾರವೆ. ಏಕೆಂದರೆ ಮಹಿಳೆಯರಿಗೆ "ಆಸ್ತಿಯ ಹಕ್ಕು" ಘೋಷಣೆಯ ಹಂತದಲ್ಲಿಯೇ ಇರುವುದರಿಂದ ಇಷ್ಟೆಲ್ಲಾ ಗೊಂದಲಗಳು ವರದಕ್ಷಿಣೆಯನ್ನೇ ಸಮರ್ಥಿಸಬೇಕಾಗಿ ಬಂದ ವೈಪರೀತ್ಯಕ್ಕೆ ಕಾರಣಗಳು ಸಹ. ಕೇವಲ ಘೋಷಣೆಗಳೆ ಆಗಿರುವ 'ಸಮಾನ ನಾಗರೀಕ ಹಕ್ಕುಗಳು' (ರಾಜ್ಯನೀತಿಯ ನಿರ್ದೇಶಕ ತತ್ವಗಳ ಅನುಚ್ಛೇದ 44 ಪ್ರಕಾರ ಸಮಾನ ನಾಗರೀಕ ಹಕ್ಕನ್ನು ಘೋಷಿಸಲಾಗಿದೆ. ಇದರ ಪ್ರಕಾರ ಪುರುಷ ಮಹಿಳೆ ಸರಿಸಮಾನರು. ತಾರತಮ್ಯಕ್ಕೆ ಅವಕಾಶವಿಲ್ಲ).

ಸಮೀಕ್ಷೆಗೊಳಪಟ್ಟವರಲ್ಲಿ ಶೇ. 14.34 ಕುಟುಂಬದವರು ಮಗಳ ಮದುವೆಗಾಗಿ 15 ಸಾವಿರದವರೆಗೆ ಖರ್ಚು ಮಾಡಿದರೆ 20.67 ಶೇಕಡ 15 ರಿಂದ 50 ಸಾವಿರದರವರೆಗೆ ಖರ್ಚು ಮಾಡುತ್ತಾರೆ. ಹಾಗೆಯೆ ಶೇ. 9.70 ಜನ 50 ಸಾವಿರದಿಂದ 1 ಲಕ್ಷದವರೆಗೆ ಶೇ. 5.06 ರಷ್ಟು ಜನ 1 ಲಕ್ಷಕ್ಕಿಂತ ಮೀರಿ ಖರ್ಚುಮಾಡುತ್ತಾರೆ. ಶೇ. 4.21 ರಷ್ಟು ಜನ ಏನನ್ನೂ ನಮೂದಿಸಲು ಹಿಂಜರಿದಿದ್ದಾರೆ. ಬಡಕುಟುಂಬಗಳು ಕೆಳಮಧ್ಯಮ ಮತ್ತು ಮಧ್ಯಮ ವರ್ಗದ ಕುಟುಂಬಗಳ ಪರಿಸ್ಥಿತಿ ಇದಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲವಲ್ಲ. ಹಾಗೆಯೆ ಮದುವೆಗಾಗಿ ಸಾಲ ಮಾಡುವವರು ಶೇ. 19.83. ಮದುವೆಯ ನಂತರವೂ ಬೇಡಿಕೆಗಳನ್ನು ಭರಿಸುವವರು ಶೇ. 5.90.

ವರದಕ್ಷಿಣೆಯನ್ನು ಒಡವೆಗಳ ರೂಪದಲ್ಲಿ ನೀಡುವವರು ಶೇ. 15.61ರಷ್ಟಾದರೆ ಮೊತ್ತವಾಗಿ ಕೊಡುವವರು ಶೇ. 8.86. ಇನ್ನಿತರೆ ರೂಪದಲ್ಲಿ ಶೇ. 13.92, ಏನನ್ನೂ ಹೇಳಬಯಸದವರು ಶೇ. 6.32ರಷ್ಟು.


ಡೌರಿ ಮುಕ್ತ ರಾಜ್ಯವೆಂದೆ ಹೆಸರಾಗಿದ್ದ ಅಸ್ಸಾಂ ರಾಜ್ಯದಲ್ಲೀಗ 'ವರದಕ್ಷಿಣೆ'ಯು ಗುಡ್ಡಗಾಡು ಜನರ ಬಾಗಿಲುಗಳನ್ನು ಸಹ ತಟ್ಟುತ್ತಿದೆ. ಅಸ್ಸಾಮಿ ತಂದೆ ತಾಯಿಯರು ಹೆಣ್ಣು ಮಕ್ಕಳ ಮದುವೆಯ ಸಲುವಾಗಿ ತಲೆಯ ಮೇಲೆ ಕೈ ಹೊತ್ತು ಕೂರುವ ಸನ್ನಿವೇಶ ನಿರ್ಮಾಣಗೊಂಡಿದೆ ಯೆನ್ನುತ್ತಾರೆ ಅಸ್ಸಾಮಿನ ಸಮೀಕ್ಷಾ ವರದಿಗಾರರು.

ಗುಡ್ಡಗಾಡು ಜನರ ರಾಜ್ಯವೆಂದೇ ಹೆಸರಾಗಿರುವ ತ್ರಿಪುರಾದಲ್ಲಿ ಏನಾಗಿದೆ ಗಮನ ಹರಿಸೋಣವೆ

ವರದಕ್ಷಿಣೆ ತರಲಿಲ್ಲವೆಂಬ ಕಾರಣಕ್ಕಾಗಿ ಆದಿವಾಸಿ ಮಹಿಳೆಯೊಬ್ಬಳನ್ನ ಕೊಲೆ ಮಾಡಿದ ಘಟನೆ ಇತ್ತೀಚಿಗೆ ನಡೆಯಿತಂತೆ. ಈ ಕುಟುಂಬಗಳಲ್ಲಿ ಆಚರಣೆಯಲ್ಲಿದ್ದ ಒಂದು ವಿಶೇಷ ಪದ್ಧತಿಗೆ ತದ್ವಿರುದ್ಧ ಈ ಘಟನೆ. ಆದಿವಾಸಿ ಕುಟುಂಬಗಳ ಹೆಣ್ಣು ಮಕ್ಕಳನ್ನು ಮದುವೆಯಾಗ ಬಯಸುವ ವರ ತಾನು ಮದುವೆಗೆ ಯೋಗ್ಯನಿದ್ದೇನೆ ಹೆಂಡತಿಯನ್ನು ಸಾಕುವ ಸಾಮರ್ಥ್ಯ ವಿದೆಯೆಂಬುದನ್ನು ಸಾಬೀತುಪಡಿಸಲು ಹುಡುಗಿಯ ಮನೆಯಲ್ಲಿದ್ದುಕೊಂಡು ದುಡಿಮೆ ಮಾಡುವ ಮೂಲಕ ಸಾಬೀತು ಪಡಿಸಬೇಕಾಗಿತ್ತಂತೆ. ಆ ನಂತರವೆ ಮದುವೆ ಕಾರ್ಯ ನಡೆಯುತ್ತಿತ್ತಂತೆ. ಇಂತಹ ಜಾಗದಲ್ಲೀಗ ವರದಕ್ಷಿಣೆಯ ಭೂತ ಮನೆಮಾಡಿಕೊಂಡಿದೆ. ವರದಕ್ಷಿಣೆ ಕೊಲೆಯ ವರದಿಗಳು ಪ್ರಾರಂಭವಾಗಿದೆಯೆನ್ನುತ್ತಾರೆ ತ್ರಿಪುರಾದ ಮಹಿಳಾ ನಾಯಕಿಯರು.

ಇಷ್ಟರ ನಡುವೆ ಸಧ್ಯಕ್ಕೆ ಅವರಿಗಿರುವ ಸಮಾಧಾನವೆಂದರೆ ಇತರೆ ರಾಜ್ಯಗಳಿಗೆ ಹೋಲಿಸಿದರೆ ಈ ರೀತಿಯ ಅಪರಾಧಗಳು ವಿರಳವಾಗಿರುವುದು.

ತ್ರಿಪುರಾದಲ್ಲಿ ನಡೆದ ಸಮೀಕ್ಷೆಯ ಪ್ರಕಾರ ಆ ರಾಜ್ಯದಲ್ಲಿ ವರದಕ್ಷಿಣೆಯು "ಬ್ರಾಹ್ಮಣರ ಪದ್ಧತಿ" ಯೆಂದೆ ಹೆಸರಾಗಿದ್ದದ್ದು ಮತ್ತು ಅವರ ಮಧ್ಯದಲ್ಲಿ ಮಾತ್ರವೆ ಆಚರಣೆಯಲ್ಲಿದ್ದುದು. ಆದರೀಗ ಪರಿಸ್ಥಿತಿ ಬದಲಾಗಿದೆ. ಆದಿವಾಸಿಗಳು ಎಸ್.ಸಿ., ಎಸ್.ಟಿ, ಮುಸ್ಲಿಮರು, ಇತರೆ ಹಿಂದುಳಿದ ಜನರ ನಡುವೆಯೂ ಇದೀಗ 'ಡೌರಿ' ಇಣುಕಿದೆ. 5 ಸಾವಿರ ನಗದು ರೂಪದಿಂದ ಹಿಡಿದು ಟಿ.ವಿ. ಪೀಠೋಪಕರಣಗಳು, ಅಲ್ಮಿರಾಗಳು, ಬಟ್ಟೆಒಗೆಯುವ ಯಂತ್ರಗಳು, ಸ್ಕೂಟರ್, ಚಿನ್ನದ ಒಡವೆಗಳ ತನಕ ವರದಕ್ಷಿಣೆಯ ಪಟ್ಟಿ ಬೆಳೆಯುತ್ತಿದೆ. ಮೇಲ್ವರ್ಗದ 10, ಪರಿಶಿಷ್ಠ ಜಾತಿಯ 11, ಮುಸ್ಲಿಂ ಕುಟುಂಬದ 8



ಎನಾ

ನಮ್ಮ ರಾಜ್ಯದ ಕಥೆ ಏನು?

ರಾಜ್ಯದಲ್ಲಿ ವರದಕ್ಷಿಣೆ ಪ್ರಕರಣಗಳು ಅವ್ಯಾಹತವಾಗಿ ಹೆಚ್ಚುತ್ತಿವೆ. ವರದಕ್ಷಿಣೆ ಹಿಂಸೆಯಿಂದ ಸುಟ್ಟುಕೊಂಡು ಸತ್ತಿರುವವರು 1998ರಲ್ಲಿ 45, ಇದೇ ಕಾರಣಕ್ಕೆ ಬೇರೆ ಮಾರ್ಗದ ಮೂಲಕ ಸತ್ತಿರುವವರು 155, ವರದಕ್ಷಿಣೆ ಹಿಂಸೆಗೆ ಹೆದರಿ ಆತ್ಮಹತ್ಯೆ ಮಾಡಿಕೊಂಡವರು 12, ಇದಲ್ಲದೆ ಅತ್ಯಾಚಾರಕ್ಕೆ ಬಲಿಯಾದವರು 233. ಇವು ದಾಖಲಾದ ಅಂಕಿ ಅಂಶಗಳೆನ್ನಿ.

ರಾಜ್ಯದ ಐದು ಜಿಲ್ಲೆಗಳಲ್ಲಿ ಬೆಳಕಿಗೆ ಬಂದ ಸಂಗತಿಯೆಂದರೆ ಇಲ್ಲೂ ಸಹ ವರದಕ್ಷಿಣೆಯು ಸರ್ವವ್ಯಾಪಿಯಾಗುತ್ತಿರುವುದು ವರದಕ್ಷಿಣೆ ಪದ್ಧತಿಯಿರದಿದ್ದ ದಲಿತ ಮತ್ತು ಲಂಬಾಣಿ ಸಮುದಾಯಗಳಲ್ಲೂ ಈ ಪಿಡುಗು ಹಬ್ಬುತ್ತಿರುವುದು. ಮಗಳ ಮದುವೆಯ ಸಲುವಾಗಿ ಗ್ರಾಮಾಂತರದ ರೈತಾಪಿ ಜನತೆ ಭೂಮಿಯನ್ನು ಮಾರಿಕೊಳ್ಳುವ ಪ್ರಸಂಗಗಳು ಹೊರಬೀಳುತ್ತಿರುವುದು.

ವಿಶೇಷವೆಂದರೆ ಕರ್ನಾಟಕದಿಂದ ರಾಷ್ಟ್ರೀಯ ಸಮಾವೇಶದಲ್ಲಿ ನಾಲ್ಕು ಜನ ಪಾಲ್ಗೊಂಡಿದ್ದೆವು. ಅದರಲ್ಲಿ ಒಬ್ಬಾಕೆ ವರದಕ್ಷಿಣೆಯ ಕಿರುಕುಳಕ್ಕೆ ಬಲಿಯಾಗಿ ಗಂಡನ ಮನೆಯಿಂದ ಹೊರದೂಡಲ್ಪಟ್ಟವಳು.

ಆಕೆಯ ಮದುವೆಯ ಸಂದರ್ಭಕ್ಕೆ ವರದಕ್ಷಿಣೆಯಾಗಿ ಒಂದು ಜೀಪು, ವಸತಿ ಸಂಕೀರ್ಣದಲ್ಲೊಂದು ಮನೆ, ಸಾಕಷ್ಟು ಒಡವೆಗಳು, ಬೆಲೆಬಾಳುವ ಉಡುಪುಗಳು, ನಗದು ಹಣ, ಸ್ವತಃ ಖರ್ಚನ್ನು ಭರಿಸಿ ಅದ್ದೂರಿ ಮದುವೆ ಮಾಡಿದ್ದರು ಆಕೆಯ ತಂದೆ ತಾಯಿಯರು.

ಇಷ್ಟೆಲ್ಲಾ ಖರ್ಚುಮಾಡಿ ಸಂಸಾರ ಹೂಡಿದರೆ ಮಾವನ ಕಾಟ ಪ್ರಾರಂಭವಾಯಿತು. ಏಕಾಗಿ? ಮತ್ತಷ್ಟು ವರದಕ್ಷಿಣೆಯ ಸಲುವಾಗಿ. ಬಹಳ ಪ್ರಯಾಸಪಟ್ಟು ಪೊಲೀಸ್ ಠಾಣೆಯ ಮೆಟ್ಟಿಲುಗಳನ್ನು ಸವೆಸಿ ದೂರನ್ನು ದಾಖಲಿಸುವ ಹೊತ್ತಿಗಾಗಲೆ ಮಾವ ಮಗನಿಗೆ ಇನ್ನೊಂದು ಹುಡುಗಿಯನ್ನು ತಂದು ಗಂಟುಹಾಕಿ ಆಗಿತ್ತು. ಮದುವೆಯಾಗಿ ವರ್ಷದ ಒಳಗೆ ಎಲ್ಲವನ್ನೂ ಕಳೆದುಕೊಂಡು ಬರಿಗೈನಲ್ಲಿ ಹಿಂತಿರುಗಿದ ಆ ಹುಡುಗಿ ತವರಿನ ಆಸರೆ ಬೇಡಿದ್ದಾಳೆ.

ಆಕೆ ವರದಕ್ಷಿಣೆಯ ಕಿರುಕುಳಕ್ಕೆ ಗುರಿಯಾದದ್ದು ಸಾಮಾನ್ಯರಿಂದಲ್ಲ. ಸಂವಿಧಾನವನ್ನು ಜನರ ಹಕ್ಕುಗಳನ್ನು ಮಹಿಳೆಯರ ಮಾನ-ಗೌರವಗಳನ್ನು ಕಾಪಾಡಬೇಕಾದ ಸಾವಿರಾರು ನಾಗರಿಕರ ಪ್ರತಿನಿಧಿಯೂ ಆಗಿರುವ ಶಾಸಕರೋರ್ವರಿಂದ. ಶಿಸ್ತಿನ ಬಗ್ಗೆ ಬಡಾಯಿಕೊಚ್ಚುವ ಬಿಜೆಪಿ ಶಾಸಕರಿಂದ. ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಕ್ಷೇತ್ರದ ರೇವೂ ನಾಯಕರೆಂಬ ಈ ಗಣ್ಯ ಶಾಸಕರು ತಮ್ಮ ಹಿರಿಯ ಸೊಸೆ ರೇಣುಕಾ ಎಂಬ ಯುವತಿಗೆ ಮೋಕ್ಷ ಕಾಣಿಸಿದ್ದು ಹೀಗೆ. ಕೃಷ್ಣರ ಸಂಪುಟದಲ್ಲಿ ಮಂತ್ರಿಗಳಾಗಿರುವ ಕೆ.ಹೆಚ್. ರಂಗನಾಥರ ವೈದ್ಯ ಪುತ್ರರು ಬಹುಶಃ ಹೆಚ್ಚುವರಿ ಆದಾಯ ನಿರೀಕ್ಷಿಸಿ ಗಾಂಧರ್ವ ವಿವಾಹವಾಗಿದ್ದ ಯುವತಿಯನ್ನು ಕೈಬಿಟ್ಟಿರಬಹುದೇನೋ.

ಅವತಾರಗಳು

ಯಿತವಾಗಿದ್ದ "ವರದಕ್ಷಿಣೆಯು" ಪ್ರಸ್ತುತ ರು 18 ರಾಜ್ಯಗಳಲ್ಲಿ ಎ.ಐ.ಡಿ.ಡಬ್ಲ್ಯೂ.ಎ ಯಲ್ಲಿದ್ದ ವರದಕ್ಷಿಣೆ ತನ್ನ ಸ್ವರೂಪವನ್ನು ಬಲವಾಗಿ ಬೇರೂರತೊಡಗಿದೆ. ಮಹಿಳಾ ಕ್ಷಿಣೆ ವಿರೋಧಿ ರಾಷ್ಟ್ರೀಯ ಸಮಾವೇಶ" ಅಧ್ಯಯನ ಶಾಲೆಯ ಸಹಯೋಗದೊಂದಿಗೆ ಚಿಗೆ ದೆಹಲಿಯಲ್ಲಿ ಸಂಘಟಿಸಿತ್ತು. ಎರಡು ಮಂಡಿಸಲಾಯಿತು. ವ್ಯಾಪಕಗೊಳ್ಳುತ್ತಿರುವ ಾಯಿತು. ಭೂತದ ಬೆನ್ನಟ್ಟಿ ಹೋರಾಡುವ




ಸಮಾವೇಶ

ತಾಯಿತಂದೆಯರು ಮದುವೆಯ ನಂತರವೂ ಮುಂದುವರೆಯುವ ಒತ್ತಾಯಗಳ ಕುರಿತು ತಿಳಿಸಿದ್ದಾರೆ.

ಈ ಬೆಳವಣಿಗೆಗೆ ಕಾರಣವಾಗಿರುವ ಮುಖ್ಯ ಅಂಶಗಳೆಂದರೆ ಜಾಗತೀಕರಣ ಮತ್ತು ಗ್ರಾಹಕ ಸಂಸ್ಕೃತಿಯ ದಾಳಿ ಎನ್ನುತ್ತಾರೆ ತ್ರಿಪುರಾ ಮುಖಂಡರು.

ವರದಕ್ಷಿಣೆಯ ಬೇಡಿಕೆಗಳನ್ನು ಪೂರೈಸಲು ಅಲ್ಲೂ ಸಹ ಮನೆ ಮಠಗಳನ್ನು ಮಾರುವುದು, ಅಡವಿಡುವುದು, ಸಾಲ ಪಡೆಯುವುದು ಮನೆಯ ವಸ್ತುಗಳನ್ನು ಮಾರಿಕೊಳ್ಳುವುದು ಸಾಗಿದೆಯಂತೆ ಇದರಲ್ಲಿ ಎಸ್.ಸಿ, ಎಸ್.ಟಿ., ಓ.ಬಿ.ಸಿ., ಆದಿವಾಸಿ ಕುಟುಂಬ ಗಳೆಲ್ಲವು ಪಾಲ್ಗೊಂಡಿವೆಯೆಂಬುದು ವರದಿ.

ಹಾಗಿದ್ದ ಮೇಲೆ ಈಶಾನ್ಯ ಭಾರತದ ರಾಜ್ಯಗಳಾದ ಅಸ್ಸಾಂ ಮತ್ತು ತ್ರಿಪುರಾಗಳ ಮಹಿಳೆಯರು ಎರಡು ಭೂತಗಳಿಂದ ಆವೃತರಾಗಿದ್ದಾರೆ ಎಂದಾಯಿತು. ಒಂದು ಭಯೋತ್ಪಾದನೆ ಮತ್ತೊಂದು ವರದಕ್ಷಿಣೆ.



ರಾಜಧಾನಿ ದೆಹಲಿಯ ಮಹಿಳೆಯರು ವರದಕ್ಷಿಣೆಯಿಲ್ಲದೆ ಮದುವೆಯಾಗುವರೆ?

ರಾಷ್ಟ್ರದ ಅತ್ಯುಚ್ಚ ನ್ಯಾಯಾಲಯವನ್ನು ಶಾಸನಗಳನ್ನು ರೂಪಿಸುವ ಸಂಸತ್ತನ್ನು ಹೊಂದಿರುವ, ದೇಶಕ್ಕೆಲ್ಲಾ ನೀತಿ ನಿರೂಪಣೆಗಳನ್ನು ರವಾನಿಸುವ, ಎಲ್ಲ ಅಧಿಕಾರಗಳ ತವರೂ ಆಗಿರುವ ದೆಹಲಿಯ ಮಹಿಳೆಯರು 'ಸಮಾನ ನಾಗರೀಕತೆಯ' ಸಂವಿಧಾನಾತ್ಮಕ ಹಕ್ಕನ್ನು ಅನುಭವಿಸುತ್ತಿರಬಹುದೇ ಎಂದು ಪ್ರಶ್ನಿಸಿಕೊಳ್ಳಬಹುದು? ಹೀಗಾಗಿ ಇಲ್ಲಿ ಇತರೆ ರಾಜ್ಯಗಳಿಗಿಂತ ವರದಕ್ಷಿಣೆಯ ವೇಗ ಸ್ವಲ್ಪ ಹೆಚ್ಚು.

ಸಮೀಕ್ಷೆ ನಡೆಸಿದ 249 ಮಹಿಳೆಯರಲ್ಲಿ 75 ಮಹಿಳೆಯರು ಕೇಳುತ್ತಾರೆ ವರದಕ್ಷಿಣೆಯಿಲ್ಲದೆ ಮದುವೆ ಸಾಧ್ಯವೆ? 15 ರಿಂದ 20ರ ವಯೋಮಿತಿಯ ಯುವತಿಯರೇನೊ ಡೌರಿಯನ್ನು ಬಲವಾಗಿ ಖಂಡಿಸುತ್ತಾರಂತೆ ಆದರೆ ಮದುವೆ ಆಗಬೇಕಲ್ಲಾ ಎಂಬ ಕಾರಣಕ್ಕೆ ಕೊಡುವ ತೆಗೆದುಕೊಳ್ಳುವ ಪದ್ಧತಿಯ ಬಗ್ಗೆ ಮೌನ ತಾಳಿದ್ದಾರಂತೆ. ಕೋಮು, ಜಾತಿ, ಅಂತಸ್ತು, ವಾಸದ ಜಾಗ, ಉದ್ಯೋಗ, ಆದಾಯ ವಯೋಮಿತಿ ಮುಂತಾದವುಗಳ ವ್ಯತ್ಯಾಸವನ್ನು ವರದಕ್ಷಿಣೆ ಅಳಿಸಿ ಹಾಕಿದೆಯಂತೆ. ದೆಹಲಿಯಲ್ಲಿ ವರದಕ್ಷಿಣೆಯು ನಡೆಸುವ ದರ್ಬಾರಿನ ಮುಂದೆ ಎಲ್ಲರೂ ಸರಿಸಮಾನರಂತೆ. ಮುಸ್ಲಿಂ ಸಮುದಾಯದ ನಡುವೆಯೂ ವ್ಯಾಪಕಗೊಳ್ಳುತ್ತಿರುವ ವರದಕ್ಷಿಣೆಯ ವಿವಿಧ ಮುಖಗಳನ್ನು ಪತ್ತೆಹಚ್ಚುವ ಸಲುವಾಗಿ ದೆಹಲಿಯ ಎ.ಐ.ಡಿ.ಡಬ್ಲ್ಯೂ.ಎ. ಮುಸ್ಲಿಂ ಮಹಿಳೆಯರದ್ದೇ ಪ್ರತ್ಯೇಕ ಸಮೀಕ್ಷೆಯನ್ನು ಸಹ ನಡೆಸಿದೆ.

ಪ್ರೀತಿಯೊಂದೇ ಸಾಲದು

ಜಗತ್ತಿನ ಏಳು ಅದ್ಭುತಗಳಲ್ಲಿ ಒಂದಾಗಿರುವ ಪ್ರೇಮದ ಸಂಕೇತ ತಾಜಮಹಲನ್ನು ನೆತ್ತಿಯ ಮೇಲೆ ಹೊತ್ತು ವಿಶ್ವದ ಪ್ರವಾಸಿಗರನ್ನೆಲ್ಲಾ ಬರಮಾಡಿಕೊಂಡು ಷಹಜಹಾನ್ ಮಮ್ತಾಜರ ಆದರ್ಶ ದಾಂಪತ್ಯ, ಪ್ರೀತಿಯ ಬಗ್ಗೆ ಹೊಗಳಿಕೊಂಡಾಡುವ ಉತ್ತರ ಪ್ರದೇಶ ದೆಹಲಿಯನ್ನು ಹಿಂಬಾಲಿಸಿದೆಯಂತೆ.

ಕೆಳಗಿಳಿದು ಮಹಾರಾಷ್ಟ್ರಕ್ಕೆ ಬರೋಣವೆ?

ವರದಕ್ಷಿಣೆ ಸಾವುಗಳು, ಹಿಂಸಾಚಾರ ಮನೆಯಿಂದ ಹೊರಗಟ್ಟುವುದು, ಮರುಮದುವೆಗಳನ್ನು ಆಯ್ಕೆ ಮಾಡಿಕೊಳ್ಳುವುದು ವಧುದಹನದಂತಹ ಪ್ರಕರಣಗಳು ಮಹಾರಾಷ್ಟ್ರದಲ್ಲಿ ಸಾಮಾನ್ಯ ವಿಷಯಗಳಾಗಿ ಬಿಟ್ಟಿವೆ ಎನ್ನುತ್ತಾರೆ ಮಹಾರಾಷ್ಟ್ರದ ಗೆಳತಿಯರು. ಮಹಾರಾಷ್ಟ್ರದಲ್ಲಿ ಆದಿವಾಸಿಗಳ ನಡೆವೆಯೂ ವರದಕ್ಷಿಣೆ ಆರಂಭವಾಗಿದೆ.

ಗಾಬರಿ ಹುಟ್ಟಿಸುವ ಒರಿಸ್ಸಾ

ಒರಿಸ್ಸಾ ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ವರದಕ್ಷಿಣೆ ಸಂಭಂದಿತ ಸಾವುಗಳು ಹೆಚ್ಚಾಗುತ್ತಿರುವ ಕುರಿತು ಒರಿಸ್ಸಾದ ಸಂಗಾತಿಗಳು ಅತಂಕವ್ಯಕ್ತಪಡಿಸಿದರು. ಸರ್ವೆಗೊಳಪಟ್ಟವರಲ್ಲಿ ಶೇ. 98 ಮಹಿಳೆಯರು ವರದಕ್ಷಿಣೆ ಇಲ್ಲದೆ ಮದುವೆ ಆಗದೆಂಬ ಅಬಿಪ್ರಾಯ ವ್ಯಕ್ತಪಡಿಸಿದ ಬಗ್ಗೆ ಗಮನ ಸೆಳೆದರು. ಮದುವೆಯ ನಂತರವೂ ವರದಕ್ಷಿಣೆ ಒತ್ತಾಯಗಳು ಮುಂದುವರೆಯುವ ಕುರಿತಾಗಿ ಶೇ.78 ಮಹಿಳೆಯರು ದೂರಿದ್ದಾರೆ.

ವರದಕ್ಷಿಣೆಯ ಪರಿಧಿಯು ಶಪತಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಅನೈತಿಕ ವ್ಯವಹಾರಗಳು ಗಾಬರಿಹುಟ್ಟಿಸುವಷ್ಟು ಹೆಚ್ಚುತ್ತಿವೆ ಎನ್ನುತ್ತಾರೆ. ಸಮೀಕ್ಷೆ ನಡೆಸಿದ ಗೆಳತಿಯರು ಬಡತನ ಹಾಗೂ ವರದಕ್ಷಿಣೆಯ ಕಾರಣಕ್ಕಾಗಿ ವೇಶ್ಯಾವಾಟಿಕೆ ವಿಪರೀತವಾಗುತ್ತಿದೆ. ಚಂಡಮಾರುತದ ನಂತರವಂತೂ ಪರಿಸ್ಥಿತಿ ಇನ್ನೂ ಹದಗೆಟ್ಟಿದೆಯಂತೆ.

ಉದಾರೀಕರಣದ ಧಾಳಿಗೆ ತುತ್ತಾಗಿ ಕೆಲಸ ಕಳೆದುಕೊಂಡ ಯುವತಿಯೊಬ್ಬಳು ಮದುವೆಯೂ ಆಗಲಿಲ್ಲ. ನೌಕರಿಯು ಉಳಿಯಲಿಲ್ಲವೆಂದು ಗೋಳಾಡಿ ವಿಧಾನಸಭಾ ಸ್ಪೀಕರ್ ಮನೆಯ ಮುಂದೆ ಆತ್ಮಹತ್ಯೆ ಮಾಡಿಕೊಂಡ ಕಥೆಯನ್ನು ಉದಾಹರಿಸಿದರು.

ಸ್ಥಳಾಂತರಿಸಲ್ಪಟ್ಟ ಕುಟುಂಬಗಳಲ್ಲಿ ಹತ್ತಾರು ವರ್ಷಗಳ ಕಾಲ ಕೆಲಸ, ಆದಾಯವಿಲ್ಲದಂತಾಗಿ ಹಲವಾರು ಸಮಸ್ಯೆಗಳು ಉದ್ಭವವಾಗಿವೆ. ಅದರಲ್ಲಿ ಡೌರಿ ಪ್ರಧಾನವಾಗಿದೆಯಂತೆ! ಇದೀಗ ಓರಿಸ್ಸಾ ರಾಜ್ಯ ಸ್ವಯಂಸೇವಕ ಸಂಘಟನೆಗಳ (ಎನ್.ಜಿ.ಓ.) ತವರು ಮನೆಯಾಗಿದ್ದು ಇಂಡಿಯನ್ ಏರ್‌ಲೈನ್ಸ್‌ನ ಶೇ. 65 ಟಿಕೇಟುಗಳು ಎನ್.ಜಿ.ಓ.ಗಳಿಗೆ ಮಾರಾಟವಾಗುತ್ತಿವೆಯಂತೆ.

ಬಿಹಾರದಲ್ಲಿ

ಬಿಹಾರ ರಾಜ್ಯದಲ್ಲಿ ಬಡಕುಟುಂಬಗಳಲ್ಲಿ ಕೆಳಜಾತಿಗಳಲ್ಲಿ ಈ ಪದ್ದತಿ ತೀವ್ರಗೊಳ್ಳುತ್ತಿದೆ. 6 ವರ್ಷದ ಹೆಣ್ಣು ಮಗಳ ಮದುವೆಗೂ ವರದಕ್ಷಿಣೆ ನೀಡಿದ ಉದಾಹರಣೆಗಳಿವೆ.

ಪಶ್ಚಿಮ ಬಂಗಾಳದಲ್ಲಿ ವರದಕ್ಷಿಣೆ ಕೈಗೊಂಡಿರುವ ಕ್ರಮಗಳು

ಪಶ್ಚಿಮ ಬಂಗಾಳದಲ್ಲಿ ನಡೆಸಲಾದ ಸಮೀಕ್ಷೆಯ ಪ್ರಕಾರ 3470 ಮಹಿಳೆಯರಲ್ಲಿ ವರದಕ್ಷಿಣೆಯಿಲ್ಲದೆ ಮದುವೆ ಸಾಧ್ಯ ಎಂದಿರುವವರು 1486 ಆದರೆ ವರದಕ್ಷಿಣೆ ಯಿಲ್ಲದೆ ಮದುವೆಯೇ ಇಲ್ಲವೆಂದಿರುವವರ ಸಂಖ್ಯೆ 1036. ತಮ್ಮ ಮದುವೆಯ ಸಂದರ್ಭಕ್ಕೆ ವರದಕ್ಷಿಣೆ ಕೊಟ್ಟವರು ಇದರಲ್ಲಿ 809 ತಮ್ಮ ಹೆಣ್ಣು ಮಕ್ಕಳ ಸಲುವಾಗಿ ಕೊಟ್ಟವರು 173 ವರದಕ್ಷಿಣೆಯಿಲ್ಲದೆ ಮದುವೆಯಾದವರು 266. 3054 ಅವಿವಾಹಿತ ತರುಣಿಯರಲ್ಲಿ ವರದಕ್ಷಿಣೆಯಿಲ್ಲದೆ ಮದುವೆ ಸಾಧ್ಯವೆಂದವರು 1164. ಸಾಧ್ಯವಿಲ್ಲವೆಂದಿ ರುವವರು 499.

ಇತರೆ ರಾಜ್ಯಗಳಂತೆ ಪ. ಬಂಗಾಳದಲ್ಲೂ ವರದಕ್ಷಿಣೆ ಹೆಚ್ಚುತ್ತಿದೆ. ಆದರೆ ಪ್ರಜಾಪ್ರಭುತ್ವ ಚಳುವಳಿ ಪ್ರಬಲವಾಗಿರುವ ಕಾರಣ ನಿಯಂತ್ರಿಸಲು ಸಾಧ್ಯವಾಗುತ್ತಿದೆ. ವರದಕ್ಷಿಣೆ ಸಂಭಂದಿತ ಪ್ರಕರಣಗಳನ್ನ ಇತ್ಯರ್ಥಪಡಿಸಲು ಸಂಘಟಿತರಾಗಿರುವ ಕಾರ್ಮಿಕರು ಪ್ರಾಮಾಣಿಕ ಪ್ರಯತ್ನಗಳನ್ನ ನಡೆಸಿದ್ದಾರೆ. ಪೋಲೀಸ್ ಆಡಳಿತಗಾರದೊಂದಿಗೆ ಮಹಿಳಾ ಸಂಘಟನೆಯು ವರದಕ್ಷಿಣೆಯನ್ನು ತಡೆಯಲು ಕೆಲಸ ಮಾಡುತ್ತಿದೆ. ಪ. ಬಂಗಾಳದ ಎ.ಐ.ಡಿ.ಡಬ್ಲ್ಯೂ.ಎ ವರದಕ್ಷಿಣೆ ವಿರುದ್ಧ ವ್ಯಾಪಕ ಪ್ರಚಾರ ನಡೆಸಿದೆ. ಇದಕ್ಕೆ ಪೂರಕ ಬೆಂಬಲವಾಗಿ ಎಡರಂಗ ಸರ್ಕಾರ ಬ್ಲಾಕ್ ಮಟ್ಟಗಳಲ್ಲಿ ವರದಕ್ಷಿಣೆ ನಿಷೇದ ಅಧಿಕಾರಿಗಳನ್ನು ನೇಮಿಸಿದೆ. ಸಮಾಜ ಕಲ್ಯಾಣ ಇಲಾಖೆ ಈ ಬಗ್ಗೆ ವಿಶೇಷ ಗಮನ ನೀಡಿದೆ. ಮಹಿಳೆಯರ ಹೆಸರನ್ನೂ ಸೇರಿಸಿ ಭೂಮಿಯ ಜಂಟಿ ಪಟ್ಟಾಗಳನ್ನ ನೀಡುತ್ತಿದೆ. ಸಾಮೂಹಿಕ ಸಂಘಟನೆಗಳ ಮೂಲಕ ವರದಕ್ಷಿಣೆಯ ವಿರುದ್ಧ ಆಂದೋಲನವನ್ನೇ ಸಾರಿದೆ. ರಿಜಿಸ್ಟರ್ಡ್ ವಿವಾಹಗಳನ್ನು ಪ್ರೋತ್ಸಾಹಿಸಲಾಗುತ್ತಿದೆ. ಪ್ರತಿಯೊಂದು ಬ್ಲಾಕಿಗೂ ವಿವಾಹ ನೊಂದಣಾಧಿಕಾರಿಯನ್ನು ನೇಮಿಸಲಾಗುತ್ತಿದೆ. ವರದಕ್ಷಿಣೆ ಪಡೆದ ಅತ್ತೆಯನ್ನು ಮಹಿಳಾ ಸಂಘಟನೆಯ ಸದಸ್ಯತ್ವದಿಂದ ಕೈ ಬಿಡುವ ಆಚರಣೆಗಳು ರೂಢಿಗೊಂಡಿವೆ. ಈ ದಿಕ್ಕನಲ್ಲಿ ಆ ರಾಜ್ಯದ ಎ.ಐ.ಡಿ.ಡಬ್ಲ್ಯೂ.ಎ ಹೊಸ ಹೆಜ್ಜೆ ಇಟ್ಟಿದೆ.

ಕುಣಿಕೆಯಾದ ಕರುಳ ಬಳ್ಳಿ

ಮಧ್ಯ ಪ್ರದೇಶದಲ್ಲಿಯೂ ವರದಕ್ಷಿಣೆ ತನ್ನ ಬಾಹುಗಳನ್ನ ವಿಸ್ತರಿಸಿಕೊಳ್ಳುತ್ತಿದೆ. ಎಲ್ಲ ಜಾತಿಯ, ಎಲ್ಲ ವರ್ಗದ ಕುಟುಂಬಗಳು ಇದರಲ್ಲಿ ಒಳಗೊಂಡಿವೆ. ವರದಕ್ಷಿಣೆ ಹಿಂಸಾಚಾರ ಹೆಚ್ಚಾಗುತ್ತಿದೆ. ವರದಕ್ಷಿಣೆ ನೀಡದೆ ಹೆಣ್ಣು ಮಕ್ಕಳಿಗೆ ಮದುವೆ ಮಾಡುವುದು ಅಸಾಧ್ಯವೆಂದು ಪರಿಗಣಿಸಿರುವ ಆ ರಾಜ್ಯದಲ್ಲಿ ಹೆಣ್ಣು ಶಿಶುಹತ್ಯೆಗಳು ಮಾಮೂಲಿಯಾಗಿಬಿಟ್ಟಿವೆ. ಮಗುವಿನ ಬಾಯಿಗೆ ಅಫೀಮು ತುರುಕಿ ಸಾಯಿಸುವಂತಹ ಹೀನ ಪೈಶಾಚಿಕ ಕೃತ್ಯಗಳು ಅಲ್ಲಿ ಸಂಭವಿಸಿವೆ. ಹೆಣ್ಣು ಶಿಶುವಿನ ಗರ್ಭಪಾತಗಳು ವಿಪರೀತ ಹೆಚ್ಚಿವೆ. ಹೊಕ್ಕಳ ಬಳ್ಳಿಯನ್ನೇ ಮಗುವಿನ ಕುತ್ತಿಗೆಗೆ ಬೀಗಿದು ಸಾಯಿಸಿದ ಪ್ರಕರಣಗಳೂ ವರದಿಯಾಗಿವೆ. ಮಹಿಳಾ ಸಂಘಟನೆ ನಡೆಸಿದ 7-8 ವರ್ಷಗಳ ಪ್ರಯತ್ನಗಳಿಂದಾಗಿ ಪ್ರತಿ ಹಳ್ಳಿಗಳ ಐದಾರು ಮಕ್ಕಳು ಸಾವಿನಿಂದ ಪಾರಾಗುತ್ತಿವೆ. ವರದಕ್ಷಿಣೆ, ಮದುವೆ ಖರ್ಚುಗಳ ಭೀತಿಯಿಂದಾಗಿ ಹುಟ್ಟುವ ಮುಂಚಿಯೆ ಅಥವಾ ಹುಟ್ಟಿದ ನಂತರ ಹೆಣ್ಣು ಶಿಶುಗಳನ್ನ ಕೊಲ್ಲುವುದು ಸಾಮಾನ್ಯವಾಗಿದೆ.

ಆಂದದ ಊರಿನಲ್ಲಿ


ಕೆಲವೇ ಜಾತಿ ಹಾಗೂ ಕುಟುಂಬಗಳಿಗೆ

ಪುಟ 8 ಕ್ಕೆ

ರಾಷ್ಟ್ರೀಯ ಸಮಾವೇಶವು ವರದಕ್ಷಿಣೆ ವಿರೋಧಿ ಆಂದೋಲನಕ್ಕಾಗಿ ಕರೆನೀಡಿದೆ. ಕೆಳಕಂಡ ಅಂಶಗಳ ಮೇಲೆ ನಿರ್ಣಯ ಅಂಗೀಕರಿಸಿದೆ.

- ಅಂತರ್ಜಾತೀಯ ಹಾಗೂ ವರದಕ್ಷಿಣೆ ರಹಿತ ಮದುವೆಗಳನ್ನು ಹಾಗೂ ಸ್ವಯಂ ಆಯ್ಕೆಯ ಮದುವೆಗಳನ್ನು ಪ್ರೋತ್ಸಾಹಿಸುವುದು.
- ಲಿಂಗ ಪರೀಕ್ಷಾ ಕೇಂದ್ರಗಳನ್ನು ರದ್ದುಗೊಳಿಸಲು ಕ್ರಮವಹಿಸುವುದು.
- ವರದಕ್ಷಿಣೆಯನ್ನು, ಗಂಡುಮಕ್ಕಳಿಗೆ ಆದ್ಯತೆ ನೀಡುವ, ದುಬಾರಿ ಮದುವೆಗಳನ್ನ ಪ್ರೋತ್ಸಾಹಿಸುವ ಮಾಧ್ಯಮಗಳ ಜಾಹೀರಾತುಗಳನ್ನು ಕಾರ್ಯಕ್ರಮಗಳನ್ನು ತಡೆಯಲು ಹೋರಾಡುವುದು ಕಾನೂನಿನ ಉಪಯೋಗ ಮಾಡುವುದು.
- ವರದಕ್ಷಿಣೆ ಪದ್ಧತಿಯ ವಿರುದ್ಧ ಸಾಮೂಹಿಕ ಪ್ರಚಾರ ಹಾಗೂ ಸಾರ್ವಜನಿಕ ಪ್ರದರ್ಶನಗಳನ್ನ ಸಂಘಟಿಸುವುದು.
- 'ಗಂಡು ಸಂತಾನ' ಪ್ರೋತ್ಸಾಹಿಸುವ ಧಾರ್ಮಿಕ ವಿಧಿಗಳ ವಿರುದ್ಧ ಹೋರಾಟ ರೂಪಿಸುವುದು.
- ಗಂಡು ಸಂತಾನಕ್ಕಾಗಿ ಪ್ರೋತ್ಸಾಹಿಸುವ ಹಾಗೂ ಮಹಿಳಾ ವಿರೋಧಿ ಪಾರಂಪರಿಕ ಮೌಲ್ಯಗಳನ್ನು ಒಳಗೊಂಡಿರುವ ಶಾಲಾ-ಕಾಲೇಜುಗಳ ಪಠ್ಯಕ್ರಮವನ್ನು ತೆಗೆಯಲು ಹೋರಾಡುವುದು.
- ರಾಜಕೀಯ ಹೋರಾಟಗಳು ಚಳುವಳಿಗಳ ಭಾಗವಾಗಿ ವರದಕ್ಷಿಣೆ ವಿಷಯವನ್ನು ಬೆಸೆಯುವುದು.
- ಹಣ ಹಾಗೂ ಅಧಿಕಾರದ ದುರುಪಯೋಗ ಪಡಿಸಿಕೊಂಡು ವರದಕ್ಷಿಣೆಯನ್ನು ಆಚರಿಸುವ ಪ್ರತಿಷ್ಟಿತರ ವಿರುದ್ಧ ಸಾರ್ವಜನಿಕ ಪ್ರತಿಭಟನೆಗಳನ್ನು ಸಂಘಟಿಸುವುದು.
- ಧಾರ್ಮಿಕ ಮುಖಂಡರುಗಳನ್ನ ಪಾಲ್ಗೊಳಿಸಿಕೊಂಡು ಪುತ್ರಸಂತಾನಕ್ಕಾಗಿ ಮಾತ್ರವೆ ಆದ್ಯತೆ ನೀಡುವ ಮೌಲ್ಯಗಳ ವಿರುದ್ಧ ಪ್ರಚಾರ ನಡೆಸುವುದು.
- ನೀತಿ ನಿರೂಪಣೆಯ ಹಂತಗಳಲ್ಲಿ ಸಮರ್ಥ ಮಧ್ಯ ಪ್ರವೇಶ ಮಾಡುವುದು. ಮುಂತಾದ ನಿರ್ಣಯಗಳೊಂದಿಗೆ ಸಮಾವೇಶ ಮುಕ್ತಾಯಗೊಂಡಿತು.

ಪ್ರೀತಿಯ ಅನಿಯನ್ ಇನ್ನಿಲ್ಲ



'ಅನಿಯನ್' ಎಂದೇ ಎಲ್ಲರೂ ಪ್ರೀತಿಯಿಂದ ಕರೆಯುತ್ತಿದ್ದ ಇ.ಎಂ.ಶ್ರೀಧರನ್ ಕ್ಯಾನ್ಸರ್‌ನಿಂದ ಮರಣವನ್ನಪ್ಪಿದರು. ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ದುಡಿವವರ್ಗದ ಚಳುವಳಿಗೆ ಕೊಡುಗೆ ನೀಡಿದ ಅವರ ಕುರಿತು ಸಂಕ್ಷಿಪ್ತ ವರದಿ. ಹಾಗೇ ಕಾಮ್ರೇಡ್ ಇ.ಎಂ.ಎಸ್. ರವರ ಬರಹದಿಂದ ಆಯ್ದ ಭಾಗವೂ ಇಲ್ಲಿದೆ.

ಇ.ಕೆ.ಎನ್.ರಾಜನ್

ಸಿಪಿಐ(ಎಂ) ನ ಕೇರಳ ರಾಜ್ಯಸಮಿತಿ ಸದಸ್ಯರೂ, ಕಾ.ಇ.ಎಂ.ಎಸ್.ರವರ ಪುತ್ರ ಕಾಂ.ಇ.ಎಂ.ಶ್ರೀಧರನ್ ಇದೇ ನವೆಂಬರ್ 14 ರಂದು ಮಧ್ಯರಾತ್ರಿ ತಿರುವನಂತಪುರದ ರೀಜನಲ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ನಿಧನರಾದರು. ಕಾಂ.ಇ.ಎಂ.ಶ್ರೀಧರನ್ ಇ.ಎಂ.ಎಸ್.ರವರ ಎರಡನೇ ಮಗನಾಗಿ 1945 ಜನವರಿ 23 ರಂದು ಜನಿಸಿದರು.

ಶ್ರೀಧರನ್ ವಿದ್ಯಾರ್ಥಿ ಚಳುವಳಿಯಿಂದ ರಾಜಕೀಯಕ್ಕೆ ಕಾಲಿಟ್ಟವರು. ತಿರುವನಂತಪುರದ ಮಾಡೆಲ್ ಹೈಸ್ಕೂಲ್‌ನಲ್ಲಿ ವಿದ್ಯಾಭ್ಯಾಸ ಪೂರೈಸಿ ನಂತರ ದೆಹಲಿಯ ಮದ್ರಾಸ್ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಪದವಿಪೂರ್ವ ವಿದ್ಯಾಭ್ಯಾಸ ಪಡೆದು, ನಂತರ ಕೇರಳದ ಪಾಲಕಾಡಿನ ಗವರ್ನಮೆಂಟ್ ವಿಕ್ಟೋರಿಯಾ ಕಾಲೇಜಿನಲ್ಲಿ ಬಿ.ಕಾಂ. ಪದವಿ ಪಡೆದುಕೊಂಡು, 1971ರಲ್ಲಿ ಚಾರ್ಟೆಂಡ್ ಅಕೌಂಟೆಂಟ್ ಪಾಸ್ ಮಾಡಿ, ಮುಂದೆ ಚೆನ್ನೈಯ ವರ್ಮಾ ಅಂಡ್ ವರ್ಮಾ ಕಂಪನಿಯಲ್ಲಿ ಚಾರ್ಟೆಡ್ ಅಕೌಂಟೆಂಟ್ ಆಗಿ ಕೆಲಸಕ್ಕೆ ಸೇರಿದರು. ಮುಂದೆ ಕೆಲಸಕ್ಕೆ ರಾಜಿನಾಮೆ ನೀಡಿದ ಕಾ.ಶ್ರೀಧರನ್ ಯುವಜನ ಸಂಘಟನೆಯಲ್ಲಿ ಕೆಲಸ ಆರಂಭಿಸಿದರು. 1973 ರಲ್ಲಿ ಪಕ್ಷದ ಪೂರ್ಣಾವಧಿ ಕಾರ್ಯಕರ್ತನಾಗಿ 'ಚಿಂತಾ' ಪಬ್ಲಿಕೇಷನ್‌ನಲ್ಲಿ ಕೆಲಸ ಆರಂಭಿಸಿದರು. ಈ ಸಂದರ್ಭದಲ್ಲಿ ಪೀಪಲ್ಸ್, ಡೆಮಾಕ್ರಸಿ ಪತ್ರಿಕೆಯ ಸಂಪಾದಕೀಯ ಮಂಡಳಿ ಸದಸ್ಯನಾಗಿ ಸಹಾ ದೆಹಲಿಯಲ್ಲಿ ಕೆಲಸ ಮಾಡಿದ್ದರು. ಕಳೆದ ಎಡರಂಗ ಸರ್ಕಾರದಲ್ಲಿ ಆರ್ಥಿಕ ಮಂತ್ರಿಯ ವಿಶೇಷ ಆಪ್ತ ಕಾರ್ಯದರ್ಶಿ ಆಗಿ ಸಹಾ ಕೆಲಸ ಮಾಡಿರುತ್ತಾರೆ. ಎಡರಂಗ ಸರ್ಕಾರದ ಜನತಾ ಯೋಜನೆ (peoples plan)ಯ ಶಿಲ್ಪಿಗಳಲ್ಲೊಬ್ಬರು.

1992 ರಲ್ಲಿ ಕೇರಳ ರೈತಸಂಘದ ಜಂಟಿಕಾರ್ಯದರ್ಶಿಯಾಗಿಯೂ, 1995 ರಿಂದ ಅಖಿಲ ಭಾರತ ಕಿಸಾನ್ ಸಭಾದ ಕೌನ್ಸಿಲ್ ಸದಸ್ಯನಾಗಿಯೂ ದುಡಿದಿದ್ದಾರೆ. ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ ತಂದೆ ಕಾ.ಇ.ಎಂ.ಎಸ್ ನಿಧನ, ನಂತರ ತಾಯಿ ಆರ್ಯ, ಅಂತರ್‌ಜಾನಂ ನಿಧನ, ಕಳೆದ ವರ್ಷ ಅಗಸ್ಟ್ 25 ರಂದು ಇವರ ಪತ್ನಿ ಡಾ.ಯಮುನಾ ತೀರಿಕೊಂಡದ್ದು. ಈ ಎಲ್ಲಾ ಘಟನೆಗಳಿಂದ ಕಾ.ಶ್ರೀಧರನ್ ಮಾನಸಿಕವಾಗಿ ಬಹಳ ನೊಂದು ಜರ್ಜರಿತರಾಗಿದ್ದರೂ ಪಕ್ಷದ ಕೆಲಸವನ್ನು ಎಳ್ಳಷ್ಟು ಕೊರತೆಯಿಲ್ಲದೆ ಜವಾಬ್ದಾರಿಯಿಂದ ನಿರ್ವಹಿಸಿಕೊಂಡುಬಂದರು. ಕಾ.ಶ್ರೀಧರನ್‌ರ ಇಬ್ಬರು ಮಕ್ಕಳಲ್ಲಿ ಸ್ಕೂಲ್ ಆಫ್ ಡ್ರಾಮಾ ವಿದ್ಯಾರ್ಥಿ ಸುರ್ಜಿತ್ ಹಾಗೂ ಇನ್ನೊಬ್ಬ ಸಿ.ಎ. ಓದುತ್ತಿರುವ ಅಮಿತ್ ಶಂಕರ್.

ಕಾ.ಶ್ರೀಧರನ್ ನಿಧನದ ಸುದ್ದಿ ತಿಳಿದ ತಕ್ಷಣ ಕೇರಳ ರಾಜ್ಯದ ವಿವಿಧ ರಂಗಗಳ, ರಾಜಕೀಯ ಹಾಗೂ ಸಾಂಸ್ಕೃತಿಕ ವಲಯದ ಸಾವಿರಾರು ಮಂದಿ ಎ.ಕೆ.ಜಿ ಕೇಂದ್ರಕ್ಕೆ ಬಂದು ಅಂತಿಮ ದರ್ಶನ ಪಡೆದರು.

ಮಗನ ಬಗ್ಗೆ ತಂದೆ ಇ.ಎಂ.ಎಸ್. ಸ್ವತಃ ಬರೆದಿರುವುದು ಹೀಗಿದೆ.........

1947 ರ ಜನವರಿ 23 ರಂದು ನಾನು ಸಿಡುಬು ಬೇನೆಯಿಂದ ಮಲಗಿದ್ದೆ. ಗರ್ಬಿಣಿಯಾದ ನನ್ನ ಪತ್ನಿಗೆ ಹೆರಿಗೆ ಸಮಯ ಹತ್ತಿರವಾಗಿತ್ತು. ಆ ಸಂದರ್ಭದಲ್ಲಿ ಪೋಲೀಸರು ಮನೆಗೆ ಬಂದು ನನ್ನನ್ನು ಬಂಧಿಸಿ ಕರೆದುಕೊಂಡು ಹೋದರು. ಅಂಟು ರೋಗಕ್ಕೆ ತುತ್ತಾದ ಕಾರಣದಿಂದ ನನ್ನನ್ನು ಇತರೆ ಕೈದಿಗಳ ಜೊತೆ ಇಡದೆ ಪೋಲೀಸ್ ಕಾವಲಿನಲ್ಲಿ ಜೈಲಿನ ಆಸ್ಪತ್ರೆಗೆ ಸೇರಿಸಿದರು. ಅಂದು ರಾತ್ರಿ ನನ್ನ ಹೆಂಡತಿ ಗಂಡು ಮಗುವಿಗೆ ಜನ್ಮ ನೀಡಿದರು. ಸೆರೆಮನೆಯಲ್ಲಿದ್ದ ನನಗೆ ವಿಷಯ ತಡವಾಗಿ ತಿಳಿಯಿತು. ಮುಂದೆ ನನ್ನನ್ನು ವೆಲ್ಲೂರು ಸೆಂಟ್ರಲ್ ಜೈಲಿಗೆ ಕಳುಹಿಸಲಾಯಿತು. 8 ತಿಂಗಳ ಜೈಲುವಾಸ ಅನುಭವಿಸಿ ತಿರುಗಿ ಬಂದಾಗಲೇ ನನ್ನ ಎರಡನೇ ಮಗುವಾದ ಮೊದಲ ಪುತ್ರನನ್ನು ಕಂಡೆ.

ನನ್ನ ಮಗನ ನಾಮಕರಣದಲ್ಲಿ ನನ್ನ ಜಾತಿ ಸಂಪ್ರದಾಯದಂತೆ ನನ್ನ ತಂದೆಯ ಹೆಸರನ್ನು ಮಗನಿಗೆ ಇಡಬೇಕಾಗಿತ್ತು. ಆದರೆ ಆ ಸಮಯದಲ್ಲಿ ಪುನ್ನಪ್ರ ವಯಾಲಾರ್ ಹೋರಾಟದ ಸಕ್ರೀಯ ನಾಯಕ ಹಾಗೂ ಹುತಾತ್ಮರಾದ ಕಾ. ಶ್ರೀಧರನ್ ಹೆಸರು ನನ್ನ ನೆನಪಿಗೆ ಬಂದು ಇದೇ ಹೆಸರನ್ನು ನನ್ನ ಮಗನಿಗೆ ಇಟ್ಟೆ.

ಮುಂದೆ ಕೂಡಲೇ 4-5 ತಿಂಗಳೊಳಗೆ ನಾನು ಪುನಃ ಭೂಗತನಾಗಬೇಕಾಯಿತು. ನಾಲ್ಕು ವರ್ಷ ಕಳೆದ ನಂತರವೇ ನನಗೆ ಪುನಃ ನನ್ನ ಮಕ್ಕಳನ್ನು ಕಾಣಲು ಸಾಧ್ಯವಾಯಿತು. ನನ್ನ ಮೊದಲ ಮಗಳಾದ ಮಾಲತಿ ಹುಟ್ಟಿದಾಗಲೂ ನಾನು ಭೂಗತನಾಗಿದ್ದು ಎರಡುಕಾಲು ವರ್ಷದ ನಂತರವೇ ನಾನು ನನ್ನ ಮೊದಲನೇ ಮಗುವನ್ನು ನೋಡಿದ್ದು. ನನ್ನ ಮಕ್ಕಳ ಬಾಲ್ಯ ಜೀವನ ಕಾಣಲು, ಅವರ ಜೊತೆ ಸಮಯ ಕಳೆಯಲು ನನಗೆ ಸಾಧ್ಯವಾಗಲಿಲ್ಲ. ಹತ್ತಾರು ವರ್ಷದ ನಂತರ ಕಾ.ಶ್ರೀಧರನ್ ದೇಶಾಭಿಮಾನಿಯಲ್ಲಿ ಕೆಲಸ ಮಾಡುವಾಗ ತಂದೆಯಾದ ನನ್ನನ್ನು ದೇಶಾಭಿಮಾನಿ ಪತ್ರಿಕೆಗಾಗಿ ಸಂದರ್ಶನ ನಡೆಸಿದರು. ಆಗ ಶ್ರೀಧರನ್ ಹೀಗೆ ಕೇಳಿದ - ನಮಗೆ ನಮ್ಮ ಬಾಲ್ಯದಲ್ಲಿ ನಿಮ್ಮಿಂದ ದೊರೆಯದಿದ್ದ ಪ್ರೀತಿವಾತ್ಸಲ್ಯವನ್ನು ಇದೀಗ ನೀವು ನಿಮ್ಮ ಮೊಮ್ಮಕ್ಕಳಿಗೆ ನೀಡುತ್ತಿದ್ದೀರಿ. ಇದಕ್ಕೇನು ಕಾರಣ? ಎಂದು ಕೇಳಿದಾಗ ನಾನು ಹೀಗೆ ಉತ್ತರಿಸಿದೆ. ನಿಮ್ಮ ಬಾಲ್ಯವನ್ನು ಕಾಣಲು, ನಿಮ್ಮ ಚಿಕ್ಕವಯಸ್ಸಿನ ಬೆಳವಣಿಗೆ ನೋಡಲು ನಿಮ್ಮ ಜೊತೆ ನಾನಿರಲಿಲ್ಲ. ಅದನ್ನು ನೋಡಿ ಸಂತೃಪ್ತಿ ಪಡೆಯಲು ನನಗಾಗಲಿಲ್ಲ. ನೀವೆಲ್ಲ ಹುಟ್ಟುವ ಸಂದರ್ಭದಲ್ಲಿ ನಾನು ಸೆರೆಮನೆ ಇಲ್ಲವೇ ಭೂಗತ ಜೀವನದಲ್ಲಿದ್ದೆ ಹಾಗೂ ಪಕ್ಷದ ಕೇಂದ್ರ ಕಛೇರಿಯಿದ್ದ ಬಾಂಬೆ, ಕಲ್ಕತ್ತಾ ದೆಹಲಿಯಲ್ಲಿದ್ದೆ. ಆದುದರಿಂದ ನಿಮ್ಮ ಬಾಲ್ಯ ಕಂಡು ತೃಪ್ತಿ ಪಡಲು ನನಗೆ ಸಾಧ್ಯವಾಗಲಿಲ್ಲ. ಆದುದರಿಂದ ಇದೀಗ ನಿಮ್ಮ ಮಕ್ಕಳಾದ ನನ್ನ ಮೊಮ್ಮಕ್ಕಳ ಜೊತೆ ನಾನು ವಾಸ ಮಾಡುತ್ತಿದ್ದೇನೆ. ಅವರ ಅನುದಿನದ ಬೆಳವಣಿಗೆ ಕಂಡು, ಅವರ ಜೊತೆಯಲ್ಲಿ ಜೀವನ ನಡೆಸಿ ಬರುವ ಸಂತೃಪ್ತಿಯೇ ಇದಕ್ಕೆ ಕಾರಣ."

ಕೇರಳದಲ್ಲಿ ಭೂಗತನಾಗಿದ್ದ ಸಮಯದಲ್ಲಿ ಒಂದು ದಿನ ಹೆಂಡತಿಯ ಮನೆಯಲ್ಲಿದ್ದು ನನ್ನ ಹೆಂಡತಿ ಮಕ್ಕಳನ್ನು ಕಂಡಿದ್ದೆ. ನಂತರ ನಾನು ಕಲ್ಕತ್ತಾದಲ್ಲಿ ಭೂಗತನಾಗಿರುವಾಗ ನನ್ನ ಹೆಂಡತಿ ಮಕ್ಕಳು ಸ್ವಲ್ಪ ಕಾಲ ನನ್ನ ಜೊತೆಯಲ್ಲಿ ಭೂಗತರಾಗಿ ವಾಸ ಮಾಡಿದ್ದರು.

ನನ್ನ ಎರಡನೇ ಸಲದ ಭೂಗತ ಜೀವನದ ಸಮಯದಲ್ಲಿ ನನ್ನ ಕುಟುಂಬ ದಿನನಿತ್ಯದ ಬದುಕಿಗೆ ಬಹಳ ಪ್ರಯಾಸ ಪಟ್ಟಿತು. ನಾನು ಈ ಬಗ್ಗೆ ಪ್ರತಿದಿನ ಯೋಚನೆಗೆ ಒಳಗಾಗಿ ಮಾನಸಿಕವಾಗಿ ಬಹಳ ನೋವು ಅನುಭವಿಸಿದ್ದೆ. ನನ್ನ ಎರಡನೇ ಸಲದ ಭೂಗತ ಜೀವನ ಮುಗಿಸಿದ ನಂತರ ನನ್ನ ಪತ್ನಿ ಚೆನ್ನೈ ಹಾಗೂ ದೆಹಲಿಯಲ್ಲಿ ನನ್ನ ಜೊತೆಯಲ್ಲಿದ್ದರು. ಆದರೆ ಬೇರೆ ರಾಜ್ಯಗಳಲ್ಲಿ ಜೀವನ ನಡೆಸುವುದು ಅವರಿಗೆ ಇಷ್ಟವಾಗುತ್ತಿರಲಿಲ್ಲ. ಈ ಕಾರಣ ಅವರು ಕೇರಳಕ್ಕೆ ಮರಳಿದರು. ನಂತರ 1957 ರಲ್ಲಿ ನಾನು ಕೇರಳದ ಮುಖ್ಯಮಂತ್ರಿಯಾದಾಗ ಸರ್ಕಾರಿ ನಿವಾಸದಲ್ಲಿ ನನ್ನ ಹೆಂಡತಿ ಮಕ್ಕಳು ನನ್ನ ಜೊತೆ ವಾಸವಾಗಿದ್ದರು. ನಾನು ಭೂಗತನಾಗಿರುವಾಗ ನನ್ನ ಮಕ್ಕಳು ವಿದ್ಯಾಭ್ಯಾಸದಲ್ಲಿ ಅವರ ಸ್ವಂತ ಸಾಮರ್ಥ್ಯದಿಂದ ಒಳ್ಳೆಯ ಅಂಕ ಗಳಿಸುತ್ತಿದ್ದರು. ನನ್ನ ಮಗಳು ಮಾಲತಿಗೆ ವೈದ್ಯಕೀಯ ವಿದ್ಯಾಭ್ಯಾಸಕ್ಕೆ ಸ್ಥಾನ ದೊರೆಯಿತು. ಮಗ ಶ್ರೀಧರನ್ ಉತ್ತಮ ಅಂಕ ಪಡೆದು ತೇರ್ಗಡೆಯಾಗಿ ಚಾರ್ಟೆಡ್ ಅಕೌಂಟೆಂಟ್ ಆಗಿ ಚೆನ್ನೈನಲ್ಲಿ ಕೆಲಸ ಮಾಡುವಾಗ ನನಗೊಂದು ಪತ್ರ ಬರೆದಿದ್ದ. ಆ ಪತ್ರದಲ್ಲಿ ಕೆಲಸ ಬಿಟ್ಟು ಪೂರ್ಣಾವಧಿ ರಾಜಕೀಯ ಕೆಲಸ ಮಾಡಲು ಇಚ್ಛಿಸುವ ವಿಷಯವಿತ್ತು ಹಾಗೂ ವಿಷಯ ಹೀಗೆ ಇತ್ತು. "ನನ್ನ ಇಂದಿನ ಪ್ರಾಯದಲ್ಲಿ ನೀವು ಹೇಗೆ ಚಿಂತನೆ ಮಾಡಿದ್ದೀರಿ, ಯಾವ ರೀತಿಯಲ್ಲಿ ಕೆಲಸ ಮಾಡಿರುತ್ತೀರಿ ಎಂದು ಆಲೋಚನೆ ಮಾಡಿ'. ಅದೇ ದಿಕ್ಕಿನಲ್ಲಿ ಹೋಗಲು ನನಗೆ ಅನುಮತಿ ನೀಡಬಾರದಾ? ನಾನು ಪತ್ರಕ್ಕೆ ಪ್ರತ್ಯುತ್ತರ ಬರೆದಿರಲಿಲ್ಲ ಬದಲಿಗೆ ಮಗನನ್ನು ಕರೆಸಿ ಮಾತನಾಡಿದೆ. "ನೀವು ಒಬ್ಬೊಬ್ಬರು ಯಾವ ಕೆಲಸಕ್ಕೆ ಹೋಗಬೇಕು ಎಂದು ತೀರ್ಮಾನ ಮಾಡುವ ಹಕ್ಕು ನಿಮಗಿದೆ. ಶ್ರೀಧರನ್ ನನ್ನ ರೀತಿಯಲ್ಲಿಯೇ ಪೂರ್ಣ ಕಾಲ ರಾಜಕೀಯ ಕೆಲಸ ಮಾಡಲು ತಯಾರಿದ್ದರೆ ನಾನು ಸ್ವಾಗತಿಸುತ್ತೇನೆ."

ಮುಂದೆ ಅವನು ಕೆಲಸಕ್ಕೆ ರಾಜಿನಾಮೆ ನೀಡಿ ದೇಶಾಭಿಮಾನಿಯು ಹಾಗೂ ಪಕ್ಷದ ಇತರೆ ಪ್ರಕಟಣೆಗಳ ಲೆಕ್ಕಪತ್ರ ಆಡಿಟ್ ಮಾಡುವ ಜೊತೆಯಲ್ಲಿ ರಾಜಕೀಯ ಕೆಲಸ ಮಾಡಬೇಕೆಂದು ತೀರ್ಮಾನಿಸಿದರು. ಹೀಗೆ ರಾಜಕೀಯದಲ್ಲಿಯೂ, ಪತ್ರಿಕಾ ಕೆಲಸಕಾರ್ಯದಲ್ಲಿಯೂ ಸಕ್ರೀಯವಾಗಿ ಕೆಲಸ ಮಾಡಿಕೊಂಡು ಮುಂದೆ ತನ್ನ ಕೆಲಸದ ಸಾಮರ್ಥ್ಯದಿಂದ ಪಕ್ಷದ ರಾಜ್ಯಸಮಿತಿ ಸದಸ್ಯನಾಗಿದ್ದರು. ಇವರು ರಾಜಕೀಯಕ್ಕೆ ಕಾಲಿಟ್ಟಾಗ ಗುತ್ತೇದಾರಿ ಪತ್ರಿಕೆಯವರು ಹಾಗೂ ರಾಜಕೀಯ ವಿರೋಧಿಗಳು ಇದು ಮಕ್ಕಳ ರಾಜಕೀಯ ಎಂದು ನನ್ನನ್ನು ಗೇಲಿ ಮಾಡಿದರು. ಆದರೆ ಸ್ವಪ್ರಯತ್ನ, ಸರಳ ಕಮ್ಯುನಿಸ್ಟ್ ಜೀವನ ಇದರಿಂದ ಮಾತ್ರ ನನ್ನ ಮಗ ಶ್ರೀಧರನ್ ಪಕ್ಷದ ರಾಜ್ಯ ಸಮಿತಿ ಸದಸ್ಯನಾಗಲು ಸಾಧ್ಯವಾಯಿತು.

ವರದಕ್ಷಿಣೆಯ ಅವತಾರಗಳು...

ಪುಟ 7 ರಿಂದ

ಮುಡುಪಾಗಿದ್ದ ಡೌರಿ ಹಿಮಾಚಲ ಪ್ರದೇಶದಲ್ಲಿ ಎಲ್ಲರ ನಡುವೆಯು ನುಸುಳಿದೆ. ಶಿಮ್ಲಾದಲ್ಲಿ ವರದಕ್ಷಿಣೆ ಪ್ರಕರಣಗಳು ಹೆಚ್ಚಾಗುತ್ತಿವೆ. ಉದಾರೀಕರಣದ ಗ್ರಾಹಕ ಸಂಸ್ಕೃತಿಯ ಸೆಳತಕ್ಕೆ ಸಿಕ್ಕ ಯುವಕರು 'ಬೇಕು'ಗಳ ಪಟ್ಟಿಯೊಂದಿಗೆ ಸೇಬುಗಲ್ಲದ ಯುವತಿಯರನ್ನ ನಿರ್ದಾಕ್ಷಿಣ್ಯವಾಗಿ ಪೀಡಿಸುತ್ತಿದ್ದಾರೆ.

ಕೇರಳದಲ್ಲೂ... ಶಿಕ್ಷಣ, ಆರೋಗ್ಯ, ಉದ್ಯೋಗ ಮುಂತಾದ ವಿಷಯಗಳಲ್ಲಿ ಇತರೆಲ್ಲಾ ರಾಜ್ಯಗಳಿಗಿಂತ ಪ್ರಗತಿಯನ್ನು ಸಾಧಿಸಿರುವ ಹೆಗ್ಗಳಿಕೆ ಇರುವ ಕೇರಳ ರಾಜ್ಯ[illegible]ಯು ವರದಕ್ಷಿಣೆ ಚಾಲ್ತಿಯಲ್ಲಿದೆ.

ಗ್ರಾಮಾಂತರದ 76 ಮಹಿಳೆಯರಲ್ಲಿ 36 ಮಹಿಳೆಯರು ಹಾಗೂ ನಗರದ 73 ಮಹಿಳೆಯರಲ್ಲಿ 26 ಮಹಿಳೆಯರು ತಮ್ಮ ಅಳಿಯಂದಿರಿಂದ ಬರುತ್ತಿರುವ ವರದಕ್ಷಿಣೆ ಒತ್ತಾಯದ ಕುರಿತು ವಿವರಿಸಿದ್ದಾರೆ. ಮದುವೆಯ ನಂತರದ ಖರ್ಚುಗೆ ಒತ್ತಾಯಿಸುತ್ತಿರುವ ಬಗ್ಗೆ ತಿಳಿಸಿದ್ದಾರೆ. ಆಭರಣಗಳು, ಭೂಮಿ, ಮನೆ, ಐಷಾರಾಮಿ ಗೃಹ ಬಳಕೆ ವಸ್ತುಗಳು ಪಾತ್ರೆ ಪಗಡೆಗಳಿಗೂ ಹೆಚ್ಚುತ್ತಿರುವ ಒತ್ತಾಯದ ಕುರಿತು ಗಮನ ಸೆಳೆದಿದ್ದಾರೆ. ಕೆಲಸ ಅರಸಿ ಗಡಿಯಾಚೆಗೆ ಪ್ರಯಾಣ ಬೆಳೆಸುವ ಅವರ ಖರ್ಚುಗಳನ್ನ ಸಹ ನಾವೇ ಭರಿಸಬೇಕಾಗಿದೆ ಯೆಂದು ಕೇರಳದ ಮಹಿಳೆಯರು ತಿಳಿಸಿದ್ದಾರೆ.

ದೇಶದ ಉದ್ದಗಲಕ್ಕೂ ಕರಾಳ ಹಸ್ತಗಳನ್ನ ಚಾಚಿಕೊಂಡು ಮಹಿಳಾ ಸಮುದಾಯವನ್ನು ನಲುಗಿಸುತ್ತಿರುವ ವರದಕ್ಷಿಣೆಯ ಭೂತವನ್ನು ದಹನ ಮಾಡಬೇಕಾದ್ದು ಸಾಮಾಜಿಕ ಕರ್ತವ್ಯ. ಇದು ಬರೀ ಮಹಿಳೆಯರ ಪ್ರಶ್ನೆಯಲ್ಲ. ಉಲ್ಬಣಗೊಳ್ಳುತ್ತಿರುವ ಸಾಮಾಜಿಕ ಸಮಸ್ಯೆ ಈ ಪಿಡುಗನ್ನು ತಡೆಗಟ್ಟಲು 1961ರಲ್ಲಿ ವರದಕ್ಷಿಣೆ ನಿಷೇದ ಕಾಯಿದೆ ಭಾರತದಲ್ಲಿ ಜಾರಿಗೆ ಬಂತು. 1984ರಲ್ಲಿ ಹಾಗೂ 1986ರಲ್ಲಿ ಇದಕ್ಕೆ ತಿದ್ದುಪಡಿಗಳನ್ನು ತರಲಾಯಿತು. ಆದರೇನಂತೆ ಕಾನೂನಿನ ಪರಿಣಾಮಕಾರಿ ಜಾರಿಯಿಲ್ಲದೆ ಜೊತೆಗೆ ತನ್ನೊಳಗೆ ತೊಡಕನ್ನು ತುಂಬಿಕೊಂಡಿರುವ ಕಾನೂನಿಗೆ ಸೂಕ್ತ ತಿದ್ದುಪಡಿಗಳನ್ನು ತರದೆ ಇದರಿಂದ ಹೆಚ್ಚಿನದೇನನ್ನೂ ನಿರೀಕ್ಷಿಸಲಾಗದು.

ಗೋವು ಮತ್ತು ಗೋಮುಖವ್ಯಾಘ್ರಗಳು

ನಿತ್ಯಾನಂದಸ್ವಾಮಿ

ಗೋವಿನ ಚರ್ಮದ ವ್ಯಾಪಾರ ಮಾಡುತ್ತಿದ್ದ ದಲಿತರನ್ನು ಹರಿಯಾಣದಲ್ಲಿ ಅಮಾನವೀಯವಾಗಿ ಕೊಲ್ಲಲಾಯಿತು. 'ಗೋವು ಪವಿತ್ರ', 'ಗೋ ಹತ್ಯೆ ಮಹಾಪಾಪ' ಮುಂತಾಗಿ ಬಡಬಡಿಸುವ ಸಂಘ ಪರಿವಾರ, ಅವರದೇ 'ಪೂರ್ವಜರು' ಗೋಮಾಂಸ ಭಕ್ಷಿಸುತ್ತಿದ್ದ ಐತಿಹಾಸಿಕ ಧಾರ್ಮಿಕ ಅಂಶವನ್ನು ಮರೆಮಾಚಯಬಯಸುತ್ತಾರೆ. ಈ ಗೋಮುಖ ವ್ಯಾಘ್ರದ ವಾದಗಳಲ್ಲಿನ ಹುಸಿತನವನ್ನು ಲೇಖಕರು ಬಯಲಿಗೆಳೆದಿದ್ದಾರೆ. ಮಾತ್ರವಲ್ಲ ಹಿಂದಿನ ಆಚರಣೆಗಳು ವಿಶ್ಲೇಷಿಸಿದ್ದಾರೆ.

ಐದು ಜನ ದಲಿತರ ಪ್ರಾಣಕ್ಕಿಂತ ಒಂದು ಗೋವಿನ ಜೀವವು ಅಮೂಲ್ಯವೇ? 'ಹೌದು' ಎನ್ನುತ್ತಾರೆ ವಿಶ್ವ ಹಿಂದೂ ಪರಿಷತ್ತಿನ ಹಿರಿಯ ಉಪಾಧ್ಯಕ್ಷರಾದ ಆಚಾರ್ಯ ಗಿರಿರಾಜ ಕಿಶೋರ. 'ಒಂದು ಗೋವಿನ ಜೀವವು ಒಬ್ಬ ಮನುಷ್ಯನ ಪ್ರಾಣಕ್ಕಿಂತ ಶ್ರೇಷ್ಠವಾಗಿದೆ"(?)

ಇಂದು ಹರ್ಯಾಣದಲ್ಲಿ ನಡೆಸಲಾದ ದಲಿತರ ಕಗ್ಗೊಲೆ ಅಂದು ಒರಿಸ್ಸಾದಲ್ಲಿ ನಡೆಸಲಾದ ಅಮಾನುಷ ಕೃತ್ಯವನ್ನು ನೆನಪಿಸುತ್ತದೆ. ಅಂದು ಮತಾಂತರದ ಆರೋಪ ಹೇರಿ ಸ್ಟೇಯಿನ್ಸ್ ಮತ್ತು ಆತನ ಇಬ್ಬರು ಪುಟ್ಟ ಮಕ್ಕಳನ್ನು ಭಜರಂಗದಳದ ರಾಕ್ಷಸರು ಜೀವಂತ ಸುಟ್ಟು ಹಾಕಿದ್ದರು. ಇಂದು ಗೋಹತ್ಯೆಯ ಆರೋಪ ಹೇರಿ 5 ಜನ ಬಡ ದಲಿತ ಯುವಕರನ್ನು ವಿಶ್ವ ಹಿಂದೂ ಪರಿಷತ್ತಿನ ಗೋಮುಖ ವ್ಯಾಘ್ರಗಳು ಹಾಡಹಗಲೇ ಕೊಚ್ಚಿ ಹಾಕಿದ್ದರು. ಯಾರೂ ಮುಟ್ಟಲು ಇಷ್ಟಪಡದ ಕುಷ್ಠರೋಗಿಗಳ ಸೇವೆ ಮಾಡುತ್ತಿದ್ದ ತಪ್ಪಿಗೆ ವಿದೇಶಿ ಪಾದ್ರಿಯನ್ನು ದಾರುಣವಾಗಿ ಕೊಲ್ಲಲಾಯಿತು. ಯಾರೂ ಮುಟ್ಟಲು ಇಷ್ಟಪಡದ ಸತ್ತ ದನವನ್ನು ಎತ್ತಿಹಾಕಿದ ತಪ್ಪಿಗೆ 5 ಜನ ಸ್ವದೇಶಿ ಬಂಧುಗಳನ್ನು ಕ್ರೂರವಾಗಿ ಹೊಡೆದು ಸಾಯಿಸಲಾಯಿತು. ಹಿಂದುತ್ವದ ಹೆಸರಿನಲ್ಲಿ ನಡೆಸಲಾಗುತ್ತಿರುವ ಇಂತಹ ಹೃದಯಹೀನ ಕೃತ್ಯಗಳಿಂದ ಸಾತ್ವಿಕ ಹಿಂದುಗಳು ತಲೆತಗ್ಗಿಸುವಂತಾಗಿದೆ. ತಾವೂ ಹಿಂದುಗಳು ಎಂದು ಹೇಳಿಕೊಳ್ಳಲು ಹಿಂಜರಿಯುವಂತಾಗಿದೆ. ಗೋಮುಖವಾಡದ ಈ ವ್ಯಾಘ್ರಗಳ ಮಾನವ ರಕ್ತದಾಹವು ಗುಜರಾತ್‌ನಲ್ಲಿ ಮೋದಿ ಎಂಬ ಕಟುಕನ ನೇತೃತ್ವದಲ್ಲಿ ನಡೆದ ಜನಾಂಗೀಯ ಹತ್ಯೆಯಲ್ಲಿ ಅನಾವರಣಗೊಂಡಾಗ ಇಡೀ ವಿಶ್ವವೇ ದಿಗ್ಭ್ರಮೆಗೊಂಡಿತ್ತು. ರಕ್ತದ ರುಚಿಯುಂಡ ಈ ವ್ಯಾಘ್ರಗಳನ್ನು ಕಾಡಿಗೆ ಅಟ್ಟದಿದ್ದರೆ ಈ ನೆಲದಲ್ಲಿ ನೆಮ್ಮದಿ ನೆಲೆಸಲಾರದು.

ಯಾಕೆ ಅಸ್ಪೃಶ್ಯತೆ?

ಊರೊಳಗೆ ಸತ್ತು ಬಿದ್ದು ಕೊಳೆತು ನಾರುತ್ತಿರುವ ಪಶುಪ್ರಾಣಿಗಳನ್ನು ಎತ್ತಿಹಾಕಿ ಊರಿನ ನೈರ್ಮಲ್ಯವನ್ನು, ಜನರ ಆರೋಗ್ಯವನ್ನು ಕಾಪಾಡುವವರು ಅಸ್ಪೃಶ್ಯರೇಕೆ? ಶತಶತಮಾನಗಳಿಂದ ಅವರು ಈ ಕಾಯಕವನ್ನು ಮಾಡದೇ ಇದ್ದಿದ್ದರೆ ಜನ ಆರೋಗ್ಯವಂತರಾಗಿ ಬಾಳಲು ಸಾಧ್ಯವಿತ್ತೇ? ತಮ್ಮ ಮೈಯನ್ನು ಕೊಳೆ ಮಾಡಿಕೊಂಡು, ರೋಗರುಜಿನಗಳಿಗೆ ಮೈಯೊಡ್ಡಿ ಇನ್ನುಳಿದವರ ಹಿತವನ್ನು ಕಾಯುವ ಇವರುಗಳಿಗೆ ನಮ್ಮ ನಾಗರೀಕ ಸಮಾಜವು ನೀಡಿದ ಪುರಸ್ಕಾರವೇ ಅಸ್ಪೃಶ್ಯತೆ! ಇದನ್ನು ಧರ್ಮವೆನ್ನಬೇಕೇ? ಸಂಸ್ಕೃತಿಯೆನ್ನಬೇಕೆ?

ಈ ದೇಶದ ಅತ್ಯಂತ ಲಾಭದಾಯಕವಾದ ಚರ್ಮೋದ್ಯಮವನ್ನು ಕಟ್ಟಿ ಬೆಳೆಸಿದವರು ಯಾರು? ಸತ್ತ ದನಗಳನ್ನು ಊರಾಚೆಗೆ ಸಾಗಿಸಿ, ಅವುಗಳ ಚರ್ಮವನ್ನು ತೆಗೆದು, ಹದಮಾಡಿ ಪಾದರಕ್ಷೆಗಳನ್ನು ತಯಾರಿಸಲು ಅವರು ಮುಂದಾಗದಿದ್ದರೆ, ಆಧುನಿಕ ಚರ್ಮೋದ್ಯಮ ಹೇಗೆ ಬೆಳೆದು ಬರುತ್ತಿತ್ತು? ಭಾರತದ ಚರ್ಮೋದ್ಯಮ ಅತ್ಯಂತ ಪ್ರಾಚೀನ ಉದ್ಯಮಗಳಲ್ಲಿ ಒಂದು. ಯುರೋಪಿಯನ್ನರು, ಅಮೆರಿಕನ್ನರು ಈ ಉದ್ಯಮವನ್ನು ಆರಂಭಿಸಿದ ಎಷ್ಟೋ ಕಾಲ ಮೊದಲೇ ಚರ್ಮೋದ್ಯಮ ಭಾರತದಲ್ಲಿ ಬೆಳೆದಿತ್ತು. ಅವರ ಬಗ್ಗೆ ಹೆಮ್ಮೆಪಟ್ಟುಕೊಳ್ಳುವ ಬದಲು ನಾವು ಅವರನ್ನು ಅಸ್ಪೃಶ್ಯರೆಂದು ಕಾಣುತ್ತೇವೆ. ಮೇಲ್ಜಾತಿಯವರು ಎಂದು ಹೇಳಿಕೊಳ್ಳುವವರೇ ಎಷ್ಟೋ ಜನ ಚರ್ಮೋದ್ಯಮಿಗಳಾಗಿದ್ದಾರೆ. ವಿಶ್ವ ಹಿಂದೂ ಪರಿಷತ್ತಿನ ಎಷ್ಟೋ ಜನ ಪ್ರಮುಖರು ಈ ದಂದೆ ಮಾಡುತ್ತಾರೆ. ದನದ ಚರ್ಮವನ್ನು ಸುಲಿಯದೆ ಈ ಉದ್ಯಮ ನಡೆಯಲು ಸಾಧ್ಯವೇ? ಚರ್ಮೋದ್ಯಮ ನಡೆಸುವುದು ತಪ್ಪಲ್ಲವೆನ್ನುವುದಾದರೆ ದನದ ಚರ್ಮವನ್ನು ಸುಲಿಯುವುದು ಹೇಗೆ ತಪ್ಪಾಗುತ್ತದೆ?

ಉದ್ಯೋಗ ಹುಡುಕಿಕೊಂಡು ನಮ್ಮ ಜನ ಅಮೆರಿಕಕ್ಕೆ ಹೋಗುತ್ತಾರೆ. ಸಾಮಾನ್ಯವಾಗಿ ವಿದೇಶಗಳಿಗೆ ಹೋಗುವವರು ಮೇಲ್ಜಾತಿಗಳ ಯುವಕಯುವತಿಯರೇ. ಅನೇಕ ಸಲ ಬ್ರಾಹ್ಮಣರು. ಅಮೆರಿಕಕ್ಕೆ ಹೋದವರು ಅಲ್ಲಿ ಏನು ಕೆಲಸ ಮಾಡುತ್ತಾರೆ. ಬಹಳಷ್ಟು ಜನ ಅಲ್ಲಿ ದನದ ಮಾಂಸವನ್ನು ಪ್ಯಾಕ್ ಮಾಡುವ ಹಾಗೂ ಚರ್ಮದ ವಸ್ತುಗಳನ್ನು ತಯಾರಿಸುವ ಘಟಕಗಳಲ್ಲಿ ಕೆಲಸ ಮಾಡುತ್ತಾರೆ. ಇವರೆಲ್ಲರು ಅಸ್ಪೃಶ್ಯರೆ? ಅನಿವಾಸಿ ಭಾರತೀಯರಲ್ಲಿ ಬಹುಸಂಖ್ಯಾತರು ದನದ ಮಾಂಸವನ್ನು ತಿನ್ನುತ್ತಾರೆ. ಇಂತಹ ಎನ್‌ಆರ್‌ಐಗಳಿಂದ ದಾನದ ಡಾಲರುಗಳನ್ನು ನಮ್ಮ ಮಡಿವಂತ ಮಠಾಧಿಪತಿಗಳು, ಹಿಂದೂ ಪರಿವಾರದ ಸಂಘಗಳು ತಿರಸ್ಕರಿಸುವುದಿಲ್ಲ ಏಕೆ?

ಗೋಮಾಂಸ ಭಕ್ಷಣೆ ಎಂದಿನಿಂದ?

ಗೋಮಾಂಸ ಭಕ್ಷಣೆ ಭಾರತಕ್ಕೆ ಮುಸಲ್ಮಾನರಿಂದ, ಕ್ರಿಶ್ಚಿಯನ್ನರಿಂದ ಬಂದ ಪಿಡುಗು ಎಂದು ನಂಬಿಸಲಾಗುತ್ತಿದೆ. ಇದು ಸತ್ಯಕ್ಕೆ ದೂರವಾದ ಮಾತು. ಇಂದು ಭಾರತ ಎನ್ನಲಾಗುತ್ತಿರುವ ಈ ಪ್ರದೇಶಕ್ಕೆ ಮಧ್ಯ ಏಶ್ಯಾದಿಂದ ಆರ್ಯರು ವಲಸೆ ಬರುವುದರೊಂದಿಗೆ ಇಲ್ಲಿಗೆ ಗೋಮಾಂಸ ಭಕ್ಷಣೆ ಕಾಲಿಟ್ಟಿದೆ. ಆರ್ಯರು ಪಶುಪಾಲಕರಾಗಿದ್ದರು. ದನಗಳ ಮಾಂಸ ಹಾಗೂ ಹಾಲನ್ನು ಅವರು ಆಹಾರವಾಗಿ ಬಳಸುತ್ತಿದ್ದರು. ಯಜ್ಞಯಾಗಗಳಲ್ಲಿ ದನಗಳನ್ನು ಕಡಿದು ತಿನ್ನುತ್ತಿದ್ದರು. 'ಗೋಸಾವಾ' ಎನ್ನಲಾದ ಗೋಬಲಿ ಮಹಾಯಜ್ಞಗಳ ಅವಿಭಾಜ್ಯ ಅಂಗವಾಗಿರುತ್ತಿತ್ತು. ವೇದಗಳಲ್ಲೇ ಅತಿ ಪ್ರಾಚೀನವಾದ ಋಗ್ವೇದದಲ್ಲಿ ಗೋಬಲಿ ಮತ್ತು ಗೋಮಾಂಸ ಭಕ್ಷಣೆಯ ಉಲ್ಲೇಖಗಳಿವೆ. ಆರ್ಯರು ಕುದುರೆಯನ್ನು ಪಳಗಿಸಿದವರಾಗಿದ್ದರು. ಆರ್ಯರು ಭಾರತ ಉಪಖಂಡಕ್ಕೆ ಕಾಲಿಡುವ ಮೊದಲು ಇಲ್ಲಿ ಕುದುರೆಗಳೇ ಇರಲಿಲ್ಲ. ಕುದುರೆಯ ಬಂಡಿಗಳನ್ನು (ರಥ) ಅವರು ಬಳಸುತ್ತಿದ್ದರು. ಅಶ್ವಮೇಧ ಯಾಗಗಳಲ್ಲಿ ಕುದುರೆಗಳನ್ನು ಬಲಿಕೊಟ್ಟು ಅದರ ಮಾಂಸವನ್ನು ಭಕ್ಷಿಸಲಾಗುತಿತ್ತು. ಋಗ್ವೇದದ ಮೊದಲ ಮಂಡಲದ 162ನೇ ಸೂಕ್ತವು ಇಡಿಯಾಗಿ ಕುದುರೆಯ ಬಲಿ ಕೊಡುವುದನ್ನು ವಿವರಿಸುತ್ತದೆ.

ಉಪನಿಷತ್ತುಗಳಲ್ಲಿಯೂ ಗೋಮಾಂಸ ಭಕ್ಷಣೆಯ ಉಲ್ಲೇಖವಿದೆ. ಪಾಂಡಿತ್ಯಪೂರ್ಣ ಮಗನನ್ನು ಪಡೆಯಲು ಎಳೆಯ ಹೋರಿಯ ಮಾಂಸವನ್ನು ಹೇಗೆ ಅಡುಗೆ ಮಾಡಿ ತಿನ್ನಬೇಕು ಎಂಬುದನ್ನು ಬೃಹದಾರಣ್ಯಕಾಲುಪನಿಷತ್ ಹೇಳುತ್ತದೆ.

ಕೃಷಿಯ ಬೆಳವಣಿಗೆಯ ನಂತರ, ಕೃಷಿ ಕೆಲಸಗಳಿಗೆ ಎತ್ತುಗಳನ್ನು ಬಳಸುವುದು ಅನಿವಾರ್ಯವಾದಾಗ ದನಗಳನ್ನು ಕಡಿದು ತಿನ್ನುವುದನ್ನು ನಿಯಮಿತಗೊಳಿಸುವುದು ಅನಿವಾರ್ಯವಾಯಿತು. ಅಷ್ಟರಲ್ಲಿ ಬೆಳೆದು ಬಂದ ಪುರಾಣಗಳಲ್ಲಿ ಹಸುವನ್ನು ಗೋಮಾತೆಯಾಗಿ ವೈಭವೀಕರಿಸಿ ಅದರ ಸಂಸ್ಕೃತಿಯನ್ನು ಕಾಪಾಡುವ ಪದ್ಧತಿಗೆ ಬೆಂಬಲ ದೊರಕಿಸಲಾಯಿತು. ಎಲ್ಲಾ ಪ್ರಾಣಿವಧೆಯನ್ನು ವಿರೋಧಿಸುವ ಜೈನ ಧರ್ಮದ ಪ್ರಭಾವವೂ ಈ ಬೆಳವಣಿಗೆಯನ್ನು ಬಲಪಡಿಸುವಂತಾಯಿತು. ಆದರೆ ಆರಂಭದಿಂದಲೂ ಗೋಮಾತೆಯನ್ನು ಪವಿತ್ರವೆಂದು ಎಲ್ಲಿಯೂ ಪರಿಗಣಿಸಲಾಗುತ್ತಿರಲಿಲ್ಲ. ಗೋವಧೆಯನ್ನು ಮನುಸ್ಮೃತಿಯಲ್ಲಿಯೂ ನಿಷೇಧಿಸಲಾಗಿಲ್ಲ. ವಶಿಷ್ಠ ಗೋಮಾಂಸ ಪ್ರಿಯ. ಕರುಗಳ ನಾಲಗೆಗಳ ಅಡುಗೆ ಆತನಿಗೆ ಪ್ರಿಯವಾದ ಭಕ್ಷ್ಯ. ನೇಪಾಳದ ಹಿಂದೂ ರಾಜರ ಅಂತ್ಯಸಂಸ್ಕಾರದ ವಿಧಿಗಳಲ್ಲಿ ಗೋಮಾಂಸ ಬಳಕೆಯನ್ನು ಗಮನಿಸಿದಾಗ ಗೋಮಾಂಸ ಭಕ್ಷಣೆ ಸಾಕಷ್ಟು ಪ್ರಾಚೀನ ಸಂಪ್ರದಾಯವೆಂಬುದನ್ನು ದೃಢಪಡುತ್ತದೆ. ಟಿಬೆಟಿನ ಬೌದ್ಧರು ಇಂದಿಗೂ ದನದ ಮಾಂಸ ಭಕ್ಷಿಸುತ್ತಾರೆ.



ಅಶೋಕ್ ಸಿಂಘಾಲ್ - ಪ್ರವೀಣ್ ತೊಗಾಡಿಯಾ

ಪವಿತ್ರವಾದುದನ್ನೇ ಭಕ್ಷಿಸುವುದು ಎಲ್ಲ ಮತಪಂಥಗಳಲ್ಲಿ ಕಂಡುಬರುವ ಸಂಪ್ರದಾಯ. ಅಪವಿತ್ರವಾದುದನ್ನು ಯಾರೂ ತಿನ್ನುವುದಿಲ್ಲ. ಉದಾಹರಣೆಗೆ ಮುಸಲ್ಮಾನವರು ಹಂದಿಯನ್ನು ಅಪವಿತ್ರವೆಂದು ಭಾವಿಸುತ್ತಾರೆ. ಆದ್ದರಿಂದ ಅದನ್ನು ಕೊಂದು ತಿನ್ನುವುದಿರಲಿ, ಅದನ್ನು ಮುಟ್ಟಲು ಸಹ ಹೇಸುತ್ತಾರೆ. ಮುಸಲ್ಮಾನರಿಗೆ ಒಂಟೆ ಒಂದು ಪವಿತ್ರವಾದ ಪ್ರಾಣಿ. ಆದ್ದರಿಂದ ಅವರು ವರ್ಷಕ್ಕೊಮ್ಮೆ ಯಾದರೂ ಒಂಟೆಯ ಮಾಂಸವನ್ನು ಭಕ್ಷಿಸಲು ಬಯಸುತ್ತಾರೆ. ಕ್ರಿಶ್ಚಿಯನ್ನರು ಯಾವುದೇ ಪ್ರಾಣಿಯನ್ನು ಅಪವಿತ್ರ ಎಂದು ಭಾವಿಸುವುದಿಲ್ಲ. ಆದರೆ ದೇವರ ಅವತಾರ ಎಂದು ಅವರು ನಂಬುವ ಯೇಸುಕ್ರಿಸ್ತನ ಮಾಂಸವನ್ನು ಮತ್ತು ರಕ್ತವನ್ನು ಪ್ರಸಾದದ ರೂಪದಲ್ಲಿ ಸೇವಿಸುವ ಪದ್ಧತಿ ರೋಮನ್ ಕಥೋಲಿಕ್ ಕ್ರಿಶ್ಚಿಯನ್ನರಲ್ಲಿದೆ.

"ನನ್ನನ್ನು ನೀವು ಸೇವಿಸದಿದ್ದರೆ ನಿಮಗೆ ಜೀವ ಇರಲಾರದು" ಎಂಬ ಯೇಸುಕ್ರಿಸ್ತನ ಮಾತನ್ನು ಉದಾಹರಿಸಿ ಅವರು ಮಂತ್ರಿಸಿದ ಗೋಧಿ ರೊಟ್ಟಿಯನ್ನು ಮತ್ತು ದ್ರಾಕ್ಷಿಯ ರಸವನ್ನು ಯೇಸುಕ್ರಿಸ್ತನ ಮಾಂಸ ಮತ್ತು ರಕ್ತ ಎಂದು ಭಾವಿಸಿ ಸೇವಿಸುತ್ತಾರೆ. ಇಂತಹ ನಂಬಿಕೆಗಳಿಗೆ ಏನೆನ್ನಬಹುದು? ಒಂದು ಮತಪಂಥದ ಜನ ಅನುಸರಿಸಿಕೊಂಡು ಬಂದ ಸಂಪ್ರದಾಯಗಳು ಇನ್ನೊಂದು ಮತಪಂಥದವರ ನಂಬಿಕೆಗಳಿಗೆ ತುಂಬಾ ಭಿನ್ನವಾಗಿರುತ್ತವೆ. ಹಂದಿಯನ್ನು ಮುಸಲ್ಮಾನರು ಅಪವಿತ್ರ ಎಂದು ಭಾವಿಸಿದರೆ ದಶಾವತಾರಗಳನ್ನು ನಂಬುವ ಹಿಂದುಗಳಿಗೆ ವರಹ ಅಪವಿತ್ರವಾಗುವುದಿಲ್ಲ. ಗೋವು ನಮಗೆ ಪವಿತ್ರವಾದದ್ದು; ಆದ್ದರಿಂದ ಅದನ್ನು ನೀವು ಕಡಿದು ತಿನ್ನಬಾರದು ಎಂದು ತಮ್ಮ ನಂಬಿಕೆಯನ್ನು ಇನ್ನೊಬ್ಬರ ಮೇಲೆ ಹೇರುವುದು ಎಷ್ಟು ಸರಿ? ಗೋಹತ್ಯೆಯನ್ನು ನೆಪಮಾಡಿಕೊಂಡು ಇಂದು ದೇಶದ ಹಲವೆಡೆ ಹಿಂದುತ್ವ ಶಕ್ತಿಗಳು ಅಲ್ಪಸಂಖ್ಯಾತ ಮುಸಲ್ಮಾನರ ಮೇಲೆ, ಕ್ರಿಶ್ಚಿಯನ್ನರ ಮೇಲೆ ದೌರ್ಜನ್ಯ ಮಾಡುತ್ತಿರುವುದು ಹೆಚ್ಚಾಗುತ್ತಿದೆ. ಮಾಂಸಹಾರಿಗಳಾಗಿರುವ ಇವರಿಗೆ ಕಡಿಮೆ ಬೆಲೆಯಲ್ಲಿ ಲಭ್ಯವಿರುತ್ತಿದ್ದ ದನದ ಮಾಂಸ ಈಗ ದೊರೆಯದಂತಾಗಿದೆ. ಬಡವರೇ ಹೆಚ್ಚಿನ ಸಂಖ್ಯೆಯಲ್ಲಿರುವ ಈ ಜನಗಳಿಗೆ ಮಾಂಸಾಹಾರದ ಅವರ ಹಕ್ಕನ್ನು ನಿರಾಕರಿಸಿದಂತಾಗಿದೆ.

ದನದ ಮಾಂಸವನ್ನು ತಿನ್ನುವವರು ಅದನ್ನು ತಿನ್ನದೆ ಇರುವ ಜನರ ಭಾವನೆಗಳಿಗೂ ಗೌರವ ನೀಡುವುದು ಒಳ್ಳೆಯದು. ಅಂದರೆ ದನಗಳನ್ನು ಕಡಿಯುವ ಸ್ಥಳ ಆದಷ್ಟು ಜನವಸತಿ ಪ್ರದೇಶದಿಂದ ದೂರವಾಗಿರುವಂತೆ ನೋಡಿಕೊಳ್ಳುವುದು, ವಧಾಲಯಗಳಲ್ಲಿ ವೈಜ್ಞಾನಿಕ ಕ್ರಮಗಳನ್ನು ಅನುಸರಿಸುವುದು ಸಾಧ್ಯವಾಗಬೇಕು. ಮಾಂಸಕ್ಕಾಗಿ ಕೋಳಿಗಳನ್ನು, ಕುರಿಗಳನ್ನು, ಹಂದಿಗಳನ್ನು ಸಾಕುವಂತೆ ದನಕರುಗಳನ್ನು ಸಾಕುವ ಪದ್ಧತಿ ಜಾರಿಗೆ ಬಂದರೆ ಒಳ್ಳೆಯದು. ಕೃಷಿ ಕೆಲಸಗಳಿಗೆ ದನಗಳ ಕೊರತೆಯಾಗದಂತೆ ನೋಡಿಕೊಳ್ಳಲೂ ಸಾಧ್ಯವಿದೆ. ಕೇವಲ ಧಾರ್ಮಿಕ ನಂಬಿಕೆಗಳ ಹೆಸರಿನಲ್ಲಿ ಇನ್ನೊಂದು ಧಾರ್ಮಿಕ ನಂಬಿಕೆಯುಳ್ಳ ಅಥವಾ ಭಿನ್ನವಾದ ಆಹಾರ ಪದ್ಧತಿಯನ್ನು ಹೊಂದಿರುವ ಜನರ ಮೇಲೆ ದಾಳಿ ದೌರ್ಜನ್ಯ ನಡೆಸುವುದಕ್ಕೆ ನಮ್ಮ ನಾಗರಿಕ ಸಮಾಜ ಅವಕಾಶ ನೀಡಬಾರದು. ಕ್ಷುಲ್ಲಕ ವಿಷಯಗಳನ್ನೇ ದೊಡ್ಡದಾಗಿಸಿ ಮುಸಲ್ಮಾನರ ಮೇಲೆ, ಕ್ರಿಶ್ಚಿಯನ್ನರ ಮೇಲೆ, ದಲಿತರ ಮೇಲೆ ಆಕ್ರಮಣ ಮಾಡುವ ಹಿಂದುತ್ವ ಶಕ್ತಿಗಳನ್ನು ಹದ್ದುಬಸ್ತಿನಲ್ಲಿಡುವುದು ನಿಜವಾದ ಹಿಂದೂಗಳ ಜವಾಬ್ದಾರಿ.

ಚೀನಾ ಕಮ್ಯುನಿಸ್ಟ್ ಪಕ್ಷದ 16ನೇ ಮಹಾಧಿವೇಶನ

ಭೂರ್ಜ್ವಾ ಪತ್ರಿಕೆಗಳು ಕಂಡಂತೆ

ಶರತ್‌ಚಂದ್ರ

ಇತ್ತೀಚೆಗ ಮುಗಿದ ಚೀನಿ ಕಮ್ಯುನಿಸ್ಟ್ ಪಕ್ಷದ 16ನೇ ಮಹಾಧಿವೇಶನದ ಬಗ್ಗೆ ಬರೆಯುವುದಕ್ಕಿಂತ, ಅದರ ವರದಿ ಮಾಡಿದ ಬೂರ್ಜ್ವಾ ಪತ್ರಿಕೆಗಳ ವೈಖರಿ ಬಗ್ಗೆ ಬರೆಯುವುದು ಹೆಚ್ಚು ಅವಶ್ಯವೇನೋ. ಏಕೆಂದರೆ ಈ ಮಹಾಧಿವೇಶನದ ಮಹತ್ವವನ್ನು, ಬೂರ್ಜ್ವಾ ಪತ್ರಿಕೆಗಳು ಹರಡುವ ವಿಕೃತಿಗಳನ್ನು ಒಡೆದುಹಾಕದೆ ಹೇಳುವುದು ಕಷ್ಟ. ಇದು ಮಾತ್ರವಲ್ಲ ಈ ಪತ್ರಿಕೆಗಳು ಮಹಾಧಿವೇಶನದಲ್ಲಿ ಏನು ನಡೆಯಿತು ಎಂಬುದಕ್ಕಿಂತ ಹೆಚ್ಚಾಗಿ, ಅದರ ಬಗ್ಗೆ ತಮ್ಮ ಪೂರ್ವಗ್ರಹಪೀಡಿತ ಟೀಕೆಗಳನ್ನು ಮಾಡಿದ್ದೇ ಹೆಚ್ಚು. ಸುದ್ದಿಗಳಂತೂ ರೈಟರ್, ಎಪಿ ಮುಂತಾದ ಸಾಮ್ರಾಜ್ಯಶಾಹಿಯ ಬಾಲಂಗೋಚಿ ಸುದ್ದಿ ಸಂಸ್ಥೆಗಳದ್ದೇ ಆದ್ದರಿಂದ, ಎಲ್ಲಾ ಪತ್ರಿಕೆಗಳಿಗೆ ಅದೇ ಅರೆಸತ್ಯ ಪೂರ್ವಗ್ರಹದ ಸುದ್ದಿ-ಟೀಕೆಗಳು. ಲೇಖನಗಳು. ನ್ಯೂಯಾರ್ಕ್‌ಟೈಮ್ಸ್, ವಾಶಿಂಗ್‌ಟನ್ ಪೋಸ್ಟ್, ಲಾಸ್ ಎಂಜಲೀಸ್ ಟೈಮ್ಸ್‌ಗಳಿಂದ ಎತ್ತಿದವು. ಭಾರತೀಯರು ಬರೆದಾಗಲೂ ಅವುಗಳದ್ದೇ ಛಾಯೆ. ಹಲವು ಪತ್ರಿಕೆಗಳು ಆ ಬಗ್ಗೆ ಸಂಪಾದಕೀಯ, ಲೇಖನ ಪ್ರಕಟಿಸುವ ಗೋಜಿಗೆ ಹೋಗಿಲ್ಲ. ಭಾರತದ ಯಾವ ಪತ್ರಿಕೆಯೂ ತನ್ನದೇ ವರದಿಗಾರನನ್ನು ಕಳಿಸಿ ನೇರ ವರದಿ ಬರೆಸಲಿಲ್ಲ. ಪಶ್ಚಿಮದಿಂದ ಬಂದಿದ್ದೇ ತೀರ್ಥ ಎಂದು ಸ್ವೀಕರಿಸಿ ತೃಪ್ತರಾದರು. ಈ ಎಲ್ಲಾ ಲೇಖನಗಳಲ್ಲಿ ವರದಿಗಳಲ್ಲಿ, ಹಲವು ಸಾಮಾನ್ಯ ಅಂಶಗಳು ಬಂದಿವೆ. ಯಾವುದೋ ಕಾರಣಕ್ಕೆ ಇವರೆಲ್ಲರಿಂದ ಒಂದೇ ರೀತಿಯ ಲೇಖನ ಬರೆಸುತ್ತಿದೆಯೋ ಎಂಬಂತೆ ಏನು ಈ ಸಾಮಾನ್ಯ ಅಂಶಗಳು? ಇವುಗಳ ಮುಖ ಏನು?

ಮೂರು ಪದವಿಗಳನ್ನು ತೊರೆದ ಮೊದಲಿಗ!

ಹಲವು ಪತ್ರಿಕೆಗಳು ತಮ್ಮ ವರದಿಯಲ್ಲಿ ಹೇಳಿರುವ ಅಂಶಗಳಲ್ಲಿ ಒಂದು ಜಿಯಾಂಗ್ ಝುಮಿನ್ ಎಲ್ಲಾ ಮೂರು ಪದವಿಗಳನ್ನು ಹೊಂದಿದ್ದು ಶಾಂತಿಯುತವಾಗಿ ತಾನೇ ತೊರೆದ ಮೊದಲ ನಾಯಕ ಅಂತ. ಅವರು ಹೇಳುವ ಮೂರು ಪದವಿಗಳು - ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ, ಮಿಲಿಟರಿ ನಿಯಂತ್ರಣ ಆಯೋಗದ ಮುಖ್ಯಸ್ಥ, ದೇಶದ ಅಧ್ಯಕ್ಷ, ನಿಜವಾಗಿಯೂ ಹೇಳಬೇಕಾದರೆ ಈ ಮೂರು ಪದವಿಗಳನ್ನು ಹೊಂದಿದ್ದು ಜಿಯಾಂಗ್ ಝುಮಿನ್‌ರೇ ಮೊದಲ ಬಾರಿ. ಆದರೆ ವರದಿಗಳು (ಕೆಲವು ನೇರವಾಗಿ , ಕೆಲವು ಅಪ್ರತ್ಯಕ್ಷವಾಗಿ) ಈ ಮೂರು ಪದವಿಗಳು ಚೀನಾದಲ್ಲಿ ಯಾವಾಗಲೂ ಒಂದೇ ನಾಯಕನದ್ದು ಎಂಬ ಪರಂಪರೆ ಇದೆ ಎನ್ನುವ ಭಾವನೆ ನೀಡುತ್ತಿದೆ. ಇದು ಹಸಿ ಸುಳ್ಳು. ಮಾವೋ ಪಕ್ಷದ ಪ್ರಧಾನ ಕಾರ್ಯದರ್ಶಿ ಆಗಿರಲಿಲ್ಲ, ಪಕ್ಷದ ಅಧ್ಯಕ್ಷನಾಗಿದ್ದ. ಡೆಂಗ್ ದೇಶದ ಅಧ್ಯಕ್ಷನಾಗಿರಲಿಲ್ಲ. ಡೆಂಗ್ ಸಹ ತನಗೆ ಇದ್ದ ಪದವಿಗಳನ್ನು 'ಶಾಂತಿಯುತವಾಗಿ ಬಿಟ್ಟಿದ್ದ. ಮಾವೋ ಮಾತ್ರ ಸಾಯುವವರೆಗೆ ಪಕ್ಷದ ಅಧ್ಯಕ್ಷ ಆಗಿದ್ದುದು. ಅದೇ ರೀತಿ ಈ ಮೂರು ಪದವಿಗಳು ಮಾತ್ರ ನಿಜವಾದ ಅಧಿಕಾರವಿರುವಂಥವು ಎಂಬುದೂ ನಿಜವಲ್ಲ.

ದೇಶದ ಪ್ರಧಾನಿ, ಪಾರ್ಲಿಮೆಂಟು (ರಾಷ್ಟ್ರೀಯ ಜನತಾ ಅಧಿವೇಶನ National Peoples Congress) ಅಧ್ಯಕ್ಷ ಅಷ್ಟೇ ಪ್ರಮುಖ ಪದವಿಗಳು. ಕೆಲವೊಮ್ಮೆ ಕೆಲವು ಪದವಿಗಳು ಅದನ್ನು ಹೊಂದಿದ ವ್ಯಕ್ತಿಯ ಜನಪ್ರೀಯತೆ, ದೇಶಕ್ಕೆ ಆತನ ಕೊಡುಗೆ, ಪ್ರಭಾವದ ಮೇಲೆ ಹೊಂದಿರುತ್ತದೆ. ದೇಶದ ಅಧ್ಯಕ್ಷರಾಗಿದ್ದವರು ಪಕ್ಷದ ಪ್ರಧಾನ ಕಾರ್ಯದರ್ಶಿ ಆಗಿದ್ದವರು ಯಾವಾಗಲೂ ಅಂತಹ ಪ್ರಮುಖ ಜನಪ್ರಿಯ ನಾಯಕರೂ ಆಗಿರಲಿಲ್ಲ. ಜಿಯಾಂಗ್ ಝುಮಿನ್ ಮೊದಲು ಅಧ್ಯಕ್ಷರಾಗಿದ್ದವರಾಗಲಿ, ಪ್ರಧಾನ ಕಾರ್ಯದರ್ಶಿ ಆಗಿದ್ದವರಾಗಲಿ - ಅವರ ಹೆಸರು ಬಹಳ ಕೇಳಬರುತ್ತಿರಲಿಲ್ಲ. ಮೊದಲ ಪ್ರಧಾನಿಯಾಗಿದ್ದ ಚೌ-ಎನ್-ಲಾಯ್ ಮಾವೋ ರಷ್ಟೇ ಜನಪ್ರಿಯ ವಿಶ್ವವಿಖ್ಯಾತ, ಪ್ರಮುಖ ನಾಯಕರಾಗಿದ್ದರು.

ಬದಲಾಯಿಸಬಹುದು. ಪ್ರಧಾನ ಕಾರ್ಯದರ್ಶಿ ಪಾಲಿಟ್‌ಬ್ಯೂರೋದ ಸದಸ್ಯರಲ್ಲಿ ಕೆಲಸದ ಸಂಯೋಜನೆ ಹೊಣೆ ಹೊತ್ತವ. ಸಮಾನ ಹಕ್ಕು-ಕರ್ತವ್ಯಗಳಿರುವ ಎಲ್ಲಾ ಸದಸ್ಯರಲ್ಲಿ ಮೊದಲಿನ ಅಷ್ಟೆ.

ಮಿಲಿಟರಿ ನಿಯಂತ್ರಣ ಆಯೋಗದ ಮುಖ್ಯಸ್ಥನನ್ನೂ ಪಕ್ಷದ ಮಹಾಧಿವೇಶನ ಆರಿಸುತ್ತದೆ. ಅದೂ ಒಂದು ಬಹು ಸದಸ್ಯರಿರುವ ಸಮಿತಿ. ಮುಖ್ಯಸ್ಥನಿಗೆ ಪರಮಾಧಿಕಾರಗಳಿಲ್ಲ. ಸಾಮೂಹಿಕ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ಪ್ರಧಾನ ಕಾರ್ಯದರ್ಶಿ ಮತ್ತು ಈ ಮುಖ್ಯಸ್ಥ ಒಬ್ಬನೇ ಆಗಿರಬೇಕಾಗಿಲ್ಲ. ಆಗಿರಬಾರದು ಎಂದೂ ಚೀನಿ ಕಮ್ಯುನಿಸ್ಟ್ ಪಕ್ಷದ ಸಂವಿಧಾನ ಹೇಳುವುದಿಲ್ಲ. ಚೀನಿ ಕಮ್ಯುನಿಸ್ಟ್ (ಅಥವಾ ಯಾವುದೇ ಕಮ್ಯುನಿಸ್ಟ್ ಪಕ್ಷ) ಅತ್ಯಂತ

ಇದೆ. ಇವೆರಡೂ ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಯುತ್ತಾ, ಜನರಿಗೆ ಬದ್ಧರಾಗಿ ಅವರ ಸೇವೆ ಮಾಡುವ ಸಂಘಟನೆಗಳು. ಜನತೆಯ ದೊಡ್ಡ ಬಹುಸಂಖ್ಯಾತರ ಹಿತಾಸಕ್ತಿ ಕಾಪಾಡುವ ಸಂಸ್ಥೆಗಳು. ಬೂರ್ಜ್ವಾ ದೇಶದ ಪಾರ್ಲಿಮೆಂಟು, ಪಕ್ಷಗಳಂತೆ ಸಾಮಾಜಿಕ- ಜನ ಬೆಂಬಲ ಇರದ ಸಂಘಟನೆಗಳಲ್ಲ. ಬೂರ್ಜ್ವಾ - ಭೂಮಾಲಿಕ ಮುಂತಾದ ಶೋಷಿತ ವರ್ಗಗಳ ಅಸ್ತ್ರಗಳಲ್ಲ- ಎಂಬುದನ್ನು ಜೀರ್ಣಿಸಿಕೊಳ್ಳಲಾಗದೆ ಬರುವ ವಿಷಪೂರಿತ ಮಾತುಗಳಿವು.

ನಾಯಕತ್ವದಲ್ಲಿ ಬದಲಾವಣೆ ನೀತಿಗಳಲ್ಲಿ ಬದಲಾವಣೆ!

ಈ ಬಾರಿಯ ಮಹಾಧಿವೇಶನದಲ್ಲಿ ಪಕ್ಷದ ಕೇಂದ್ರ ನಾಯಕತ್ವದಲ್ಲಿ ವ್ಯಾಪಕ ಬದಲಾವಣೆಗಳಾಗಿವೆ. ಕೇಂದ್ರ ಸಮಿತಿಯಲ್ಲಿ ಅರ್ಧದಷ್ಟು, ಪಾಲಿಟ್‌ಬ್ಯೂರೋದಲ್ಲಿ ಹೊ

ಕಮ್ಯುನಿಸ್ಟ್ ಪಕ್ಷದ ಬಗ್ಗೆ ಅಜ್ಞಾನ ಅಪಪ್ರಚಾರ

ಇದು ಚಿನಾದ ರಾಜಕೀಯ ವ್ಯವಸ್ಥೆ, ಕಮ್ಯುನಿಸ್ಟ್ ಪಕ್ಷದ ಸಂಘಟನಾ ವ್ಯವಸ್ಥೆಯ ಬಗ್ಗೆ ಅಜ್ಞಾನ ಮಾತ್ರವಲ್ಲ, ಸುಳ್ಳು ಹರಡುವ ಪ್ರಯತ್ನವಷ್ಟೇ. ಚೀನಾ ಮಾತ್ರವಲ್ಲ ಯಾವುದೇ ಕಮ್ಯುನಿಸ್ಟ್ ಪಕ್ಷದಲ್ಲಿ ಪಕ್ಷದ ಕೇಂದ್ರ ಸಮಿತಿಯನ್ನು ಪಕ್ಷದ ಮಹಾಧಿವೇಶನ ಚುನಾಯಿಸುತ್ತದೆ. ಕೇಂದ್ರ ಸಮಿತಿಗೆ ನಿಜವಾದ



ಟಿಬೆಟ್ಟಿನ ಪ್ರತಿನಿಧಿಗಳು

ಪರಮಾಧಿಕಾರ ಇರುವುದು. ಆದರೆ ಕೇಂದ್ರ ಸಮಿತಿ ತನ್ನ ಪರಮಾಧಿಕಾರವನ್ನು ಮಹಾಧಿವೇಶನದಿಂದ ಪಡೆಯುತ್ತದೆ. ಎರಡು ಮಹಾಧಿವೇಶನಗಳ ನಡುವೆ ಕೇಂದ್ರ ಸಮಿತಿಗೆ ಪರಮಾಧಿಕಾರ. ಆದರೆ ಕೇಂದ್ರ ಸಮಿತಿಯ ನಿರ್ಧಾರವನ್ನು ಮಹಾಧಿವೇಶನ ವಿಮರ್ಶಿಸಬಹುದು. ಅಗತ್ಯವಿದ್ದರೆ, ಬದಲಾಯಿಸಬಹುದು. ಪಾಲಿಟ್‌ಬ್ಯೂರೋ ಮತ್ತು ಪ್ರಧಾನ ಕಾರ್ಯದರ್ಶಿಯನ್ನು ಕೇಂದ್ರ ಸಮಿತಿ ಆರಿಸುತ್ತದೆ ಮತ್ತು ಅವರು ಅದಕ್ಕೆ ಪೂರ್ಣ ಬದ್ಧರಾಗಿರುತ್ತಾರೆ. ಅವರಿಗೂ ಅಧಿಕಾರವಿರುವುದು ಎರಡೂ ಕೇಂದ್ರಸಮಿತಿಗಳ ಸಭೆಗಳ ನಡುವೆ ಕೇಂದ್ರ ಸಮಿತಿ ಸಭೆ ನಡೆದಾಗ ಪಾಲಿಟ್‌ಬ್ಯೂರೊ, ಪ್ರಧಾನ ಕಾರ್ಯದರ್ಶಿಯ ನಿರ್ಧಾರಗಳನ್ನು ಪ್ರಶ್ನಿಸಬಹುದು,

ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಸಲ್ಪಡುವ ಪಕ್ಷಗಳು ಎಂಬುದನ್ನು ಮರೆಮಾಚಲು ಪ್ರಯತ್ನಿಸುವ, ಅವು ಸರ್ವಾಧಿಕಾರ ಬಯಸುವ ಪಕ್ಷಗಳು ಎಂದು ಬಿಂಬಿಸಲು ಬೂರ್ಜ್ವಾ ಪತ್ರಿಕೆಗಳು ಹಸಿ ಸುಳ್ಳು ಹೇಳದೆ ವಿಧಿಯಿಲ್ಲ.

ಹೊ ಅಧ್ಯಕ್ಷರಾಗಿ ಬಿಟ್ಟಂತೆ.........

16 ನೇ ಮಹಾಧಿವೇಶನದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದ ಹೊ ಜಿಂತಾವೋ ಅಧ್ಯಕ್ಷರಾಗೇ ಬಿಡುತ್ತಾರೆ. ಇದು ಚೀನಾದ ಪರಂಪರೆ. ಕೆಲವು ಪತ್ರಿಕೆಗಳು ಇದೊಂದು ಬರಿಯ ಔಪಚಾರಿಕತೆ ಎನ್ನುವಂತೆ ಹೇಳಿವೆ. ಇದು ಇನ್ನೊಂದು ಹಸಿ ಸುಳ್ಳು ಎಂಬುದು ಮೇಲೆ ಹೇಳಿದ ಉದಾಹರಣೆಗಳಿಂದ ಸ್ಪಷ್ಟ. ದೇಶದ ಅಧ್ಯಕ್ಷನನ್ನು ಆರಿಸುವುದು ದೇಶದ ಪಾರ್ಲಿಮೆಂಟು. ವರ್ಷಕ್ಕೊಮ್ಮೆ ಸಭೆ ಸೇರುವ ಪಾರ್ಲಿಮೆಂಟು ಮುಂದಿನ ವರ್ಷ ಮಾರ್ಚ್‌ನಲ್ಲಿ ಸಭೆ ಸೇರಿ ಈ ಬಗ್ಗೆ ನಿರ್ಧಾರ ಕೈಗೊಳ್ಳುವುದು. ಹೂ ರನ್ನೇ ಆರಿಸಬೇಕೆಂದಾಗಲಿ, ಜೆಮಿನ್‌ರನ್ನು ಮುಂದುವರೆಸಬಾರದೆಂದಾಗಲಿ, ಬೇರೆ ಯಾರನ್ನಾದರೂ ಆರಿಸಬಾರದೆಂದಾಗಲಿ - ವಿಧಿ ವಿಧಾನಗಳೇನಿಲ್ಲ. ಪಾರ್ಲಿಮೆಂಟಿನಲ್ಲಿ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿಗಳಿಗೆ ಬಹುಮತವೂ ಇಲ್ಲ. (ಅವರ ಸಂಖ್ಯೆ ಶೇಕಡಾ 3 ಮಾತ್ರ) ಪಾರ್ಲಿಮೆಂಟಿನ ಸಿಂಹಪಾಲು ವ್ಯಾಪಕ ಜನವಿಭಾಗಗಳ ಪ್ರತಿನಿಧಿಗಳು (ಮಹಿಳಾ, ರೈತ, ಕಾರ್ಮಿಕರು, ಉದ್ಯೋಗಿಗಳು, ಸೈನ್ಯ, ಇತ್ಯಾದಿ) ಅದರಲ್ಲಿ ಇರುತ್ತಾರೆ. ಅವರು ಕಮ್ಯುನಿಸ್ಟ್ ಪಕ್ಷದ ಸದಸ್ಯರನ್ನೇ ಆಯ್ಕೆ ಮಾಡಬೇಕೆಂದೂ ಏನಿಲ್ಲ. ಚೀನಾದಲ್ಲಿ ಕಮ್ಯುನಿಸ್ಟ್ ಪಕ್ಷ (ಅದರ ವಿಧಿ-ವಿಧಾನಗಳು, ಪ್ರತಿನಿಧಿಗಳು ನಾಯಕರು) ಮತ್ತು ಚೀನಾದ ಸರ್ಕಾರ ಎರಡು ಬೇರೆ ಬೇರೆ ಎಂಬುದು ಗೊತ್ತಿರದ, ಗೊತ್ತಿದ್ದೂ ಒಪ್ಪಿಕೊಳ್ಳದೆ ಇರುವುದು ಈ ಹಸಿ ಸುಳ್ಳಿನ ಮೂಲ. ಅಲ್ಲದೆ ಇವೆರಡರ ಮೇಲೂ ಜನತೆಗೆ ನಿಯಂತ್ರಣ

ಬಿಟ್ಟರೆ ಇತರ ಎಲ್ಲರೂ ಹೊಸಬರೇ ಆದರೂ ಪಕ್ಷದ ನೀತಿಗಳಲ್ಲಿ ಭಾರಿ ಬದಲಾವಣೆಗಳೇನೂ ಇರುವುದಿಲ್ಲ ಎಂದು ಬೂರ್ಜ್ವಾ ಪತ್ರಿಕೆಗಳು ಒಂದು ಕಡೆ ಹಲುಬುತ್ತವೆ. ಇನ್ನೊಂದು ಕಡೆ ನೀತಿ ಬದಲಾವಣೆಗಳಾಗದೆ ನಾಯಕತ್ವ ಬದಲಾವಣೆ ಬರಿಯ ನೆಪಮಾತ್ರ ಎಂದೂ ಹಲುಬುತ್ತವೆ. ಕಮ್ಯುನಿಸ್ಟ್ ಪಕ್ಷದ ನೀತಿಗೂ ಅದರ ನಾಯಕತ್ವಕ್ಕೂ ನೇರ ಸಂಬಂಧ ಏನೂ ಇಲ್ಲ. ಪಕ್ಷದ ನೀತಿ ನಿರ್ಧಾರವಾಗುವುದು ಅದರ ಮಹಾಧಿವೇಶನದಲ್ಲಿ ಪ್ರತಿನಿಧಿಗಳಿಂದ. ಅದನ್ನು ರೂಪಿಸುವುದರಲ್ಲಿ ನಾಯಕತ್ವ ಸೇರಿದಂತೆ ಇಡೀ ಪಕ್ಷ ಪಾತ್ರ ವಹಿಸುತ್ತದೆ. ಮಹಾಧಿವೇಶನ ಆಲಿಸುವ ನಾಯಕತ್ವ ಅದನ್ನು ಜಾರಿ ಮಾಡುತ್ತದೆ. ಪಕ್ಷದ ನೀತಿ ನಿರ್ಧಾರದ ಮೇಲೆ ಪರಿಣಾಮ ಬೀರುವುದು. ರಾಷ್ಟ್ರೀಯ-ಅಂತರಾಷ್ಟ್ರೀಯ ಪರಿಸ್ಥಿತಿ, ಸಮಾಜವಾದದತ್ತ ಸಾಗಲು ರೂಪಿಸಿದ ರಣನೀತಿ, ತಂತ್ರಗಳ ಫಲಾಫಲಗಳು ಇತ್ಯಾದಿ. ನಾಯಕತ್ವದಲ್ಲಿರುವ ನಾಯಕರಲ್ಲ. ನಾಯಕತ್ವ ಬದಲಾವಣೆ ಆಗದಿದ್ದಾಗಲೂ (ಮಾವೋ-ಚೌಎನ್ ಲಾಯ್ ನಾಯಕತ್ವದ ಅವಧಿಯಲ್ಲೂ) ಹಲವು ಬದಲಾವಣೆಗಳಾಗಿವೆ (ಮಹಾನ್ ನೆಗೆತ, ನೂರು ಹೂವು ಅರಳಲಿ, ಸಾಂಸ್ಕೃತಿಕ ಕ್ರಾಂತಿ). ಈ ಬಗ್ಗೆ ಇಡೀ ಪಕ್ಷದೊಳಗೆ ವ್ಯಾಪಕ ಚರ್ಚೆ ಆಗಿದೆ. ಅವುಗಳಲ್ಲಿ ಕೆಲವು ತಪ್ಪು ಎಂದೂ ಪಕ್ಷ ಆಮೇಲೆ ನಿರ್ಧರಿಸಿದೆ. ನಾಯಕತ್ವ ಬದಲಾವಣೆಯಾದರೂ ನೀತಿಗಳು ಬದಲಾಗಿಲ್ಲ. (ಡೆಂಗ್- ಝುಮಿನ್ ಅವಧಿಗಳಲ್ಲಿ) ಆದರೆ ಬೂರ್ಜ್ವಾ ಪತ್ರಿಕೆಗಳು, ಹೇಳುವ ನೀತಿಗಳು ಬೇರೆಯೇ. ಕಮ್ಯುನಿಸ್ಟ್ ಪಕ್ಷ ಸಮಾಜವಾದವನ್ನು ಬಿಟ್ಟುಕೊಟ್ಟು, ಬಂಡವಾಳಶಾಹಿ ವ್ಯವಸ್ಥೆ ಅಂಗೀಕರಿಸಬೇಕು ಎಂದು ಅವು ನಿರೀಕ್ಷಿಸುತ್ತವೆ. ಇಂತಹ ನೀತಿ 'ಬದಲಾವಣೆ' ಮಾಡುವ ನಾಯಕತ್ವದ ಬದಲಾವಣೆ ಬಯಸುತ್ತದೆ. ಇವ್ಯಾ ಆಗದಿದ್ದಾಗ, ಅಂತಹ ಮಹಾಧಿವೇಶನ


ಚೀನಾ ಕಮ್ಯುನಿಸ್ಟ್ ಪಕ್ಷದ 16ನೇ ಮಹಾಧಿವೇಶನ

ಪುಟ 10 ರಿಂದ

ಔಪಚಾರಿಕ ಎಂದು ತಿರಸ್ಕರಿಸುತ್ತವೆ!

ಆರ್ಥಿಕ ಸುಧಾರಣೆ ಸರಿ- ರಾಜಕೀಯ ಸುಧಾರಣೆ ಎಲ್ಲಿ?

ಚೀನಾದಲ್ಲಿ ಆರ್ಥಿಕ ಸುಧಾರಣೆಗಳೇನೂ ಆಗಿವೆ. ಕಳೆದ ಹತ್ತಿಪತ್ತು ವರ್ಷಗಳ ಪ್ರಗತಿ ಅಗಾಧ. ಸರಿ ಆದರೆ ಅದಕ್ಕೆ ತಕ್ಕ ರಾಜಕೀಯ ಸುಧಾರಣೆಗಳೆಲ್ಲಿ? ಇದು ಇನ್ನೊಂದು ಬೂರ್ಜ್ವಾ ಪತ್ರಿಕೆಗಳ ಸಾಮಾನ್ಯ ಪ್ರಶ್ನೆ. ಅವರು ಕೇಳುವ ಆರ್ಥಿಕ ಸುಧಾರಣೆಗಳು, ಬಯಸುವ ರಾಜಕೀಯ ಸುಧಾರಣೆಗಳು ಯಾವುವು? ಅವುಗಳ ಪ್ರಕಾರ ಚೀನಾ


ಸೈನ್ಯದ ಪ್ರತಿನಿಧಿಗಳು

ಪಾಶ್ಚಿಮಾತ್ಯ ದೇಶಗಳ ಬಂಡವಾಳಶಾಹಿ ವ್ಯವಸ್ಥೆಯನ್ನು ಸಾರಾಸಗಟಾಗಿ ಅನುಸರಿಸಬೇಕು. ಚೀನಾ ತಾನೇ ರೂಪಿಸಿದ ಸಮಾಜವಾದಿ ಆರ್ಥಿಕ- ರಾಜಕೀಯ ವ್ಯವಸ್ಥೆಯನ್ನು ಉತ್ತಮಪಡಿಸಲು ಕ್ರಮ ಕೈಗೊಳ್ಳುವುದು 'ಸುಧಾರಣೆ'ಗಳಲ್ಲ. ಈ ಪತ್ರಿಕೆಗಳ ಪ್ರಕಾರ ಚೀನಾದಲ್ಲಿ ಕಳೆದ ದಶಕದಲ್ಲಿ ಆದ ಆರ್ಥಿಕ ಸುಧಾರಣೆಗಳು ಬಂಡವಾಳಶಾಹಿ ವ್ಯವಸ್ಥೆಯನ್ನು ಜಾರಿಗೆ ತಂದದ್ದು! ಅದೇ ರೀತಿ ಬಂಡವಾಳಶಾಹಿ ರಾಜಕೀಯ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಮೇಲೆ ಸಮಾಜವಾದಿ ರಾಜಕೀಯ ವ್ಯವಸ್ಥೆ ನಿಲ್ಲಬಾರದು. ಇದು ಈ ಪತ್ರಿಕೆಗಳ ಹುಂಬ ಆಲೋಚನೆ. ಬಂಡವಾಳಶಾಹಿ ವ್ಯವಸ್ಥೆಗೆ ಯಾವುದೆ ಬದಲಿ ವ್ಯವಸ್ಥೆ ಗೊತ್ತಿಲ್ಲದ, ಊಹೆಯೂ ಮಾಡಲಾಗದ ಹುಂಬರು ಇನ್ನೇನು ಹೇಳಿಯಾರು? 'ಫಾಲುನ್ ಗಾಂಗ್'ನ ಭೂತ

ಇದೇ ಹುಂಬ ಆಲೋಚನೆ ಮುಂದುವರೆಸಿ, ಈ ಮಹಾಶಯರು 'ರಾಜಕೀಯ ಸುಧಾರಣೆ' (ಅವರು ಅಂದುಕೊಳ್ಳುವ) ತರದಿದ್ದರೆ, ಚೀನಾದ ರಾಜಕೀಯ ವ್ಯವಸ್ಥೆ ಕುಸಿದುಹೋಗುತ್ತದೆ ಎನ್ನುತ್ತಾರೆ. ಆರ್ಥಿಕ ಸುಧಾರಣೆಗಳು ದೊಡ್ಡ ಪ್ರಮಾಣದಲ್ಲಿ ಅತೃಪ್ತಿ ತಂದಿವೆ. ಅದಕ್ಕೆ ರಾಜಕೀಯ ಅಭಿವ್ಯಕ್ತಿ ಅವಕಾಶ ಕೊಡದಿದ್ದರೆ ಅದು ಸ್ಫೋಟವಾಗುತ್ತದೆ ಎನ್ನುತ್ತಾರೆ ಇವರು. ಆದರೆ ಅದಕ್ಕೆ ಉದಾಹರಣೆಗಳನ್ನು ತೋರಲಿಕ್ಕೆ ಅವರ ಬಳಿ ಏನೂ ಇಲ್ಲ. ಅದಕ್ಕೆ ಅವರು ಕಂಡುಕೊಂಡ ಸುಲಭ ಪರಿಹಾರ ಫಾಲುನ್‌ಗಾಂಗ್' ಎಂಬ ಪ್ರತಿಗಾಮಿ ಸಂಘಟನೆ ಮಾಡುತ್ತಿರುವ ಗಲಭೆಗಳಿಗೆ ಬೆಟ್ಟು ಮಾಡುವುದು. ಇದು ಒಂದು ಜನವಿರೋಧಿ ಪ್ರತಿಗಾಮಿ ಸಂಘಟನೆಯಾಗಿದ್ದು, ಯಾವುದೇ ಅರ್ಥದಲ್ಲಿ ಸಾಮಾಜಿಕ ಸಂಘಟನೆ ಯಲ್ಲ. ಇದರ ಮೇಲೆ ಕೈಗೊಂಡಿರುವ ಕ್ರಮ, ನಿಷೇಧ ಗಳನ್ನು ಚೀನಾದ ರಾಜಕೀಯ ವ್ಯವಸ್ಥೆಗೆ ಸವಾಲು ಎಂದೆಲ್ಲಾ ಈ ಟೀಕಾಕಾರರು ಹಗಲುಕನಸು ಕಾಣುತ್ತಿದ್ದಾರೆ. 'ಕುಸಿದು ಬೀಳುವ' ಭವಿಷ್ಯವಾಣಿಯನ್ನು 1978 ರಿಂದ (ಚೀನಾ ಹೊರಜಗತ್ತಿಗೆ ತೆರೆದುಕೊಳ್ಳಲು ಆರಂಭವಾದಾಗಿನಿಂದ) ಈ ಮಹಾಶಯರು ಹೇಳುತ್ತಿದ್ದು, ಚೀನಾ ಜಗತ್ತಿನ ಅತ್ಯಂತ ಪ್ರಬಲ ಆರ್ಥಿಕ - ರಾಜಕೀಯ ದೃಢವಾಗಿ ಹೆಜ್ಜೆ ಇಡುತ್ತಿರುವುದನ್ನು ವಿವರಿಸಲಾಗದೆ, ಸಮಜಾಯಿಷಿಗೆ ತಿಣಕಾಡುತ್ತಿದ್ದಾರೆ. ಇಡೀ ಬಂಡವಾಳಶಾಹಿ ಆರ್ಥಿಕ ಕುಸಿದು ಬಿದ್ದರೂ, ಚೀನಾ ಯಾವುದೇ ಬಿಕ್ಕಟ್ಟಿಗೆ ಸಿಲುಕದೆ ಮುನ್ನಡೆ ಸಾಧಿಸುತ್ತಿರುವುದು ಅವರಿಗೆ ನುಂಗಲಾರದ ತುತ್ತಾಗಿದೆ.

ಬಂಡವಾಳಶಾಹಿ ಕಮ್ಯುನಿಸ್ಟ್ ಪಕ್ಷದ ಸದಸ್ಯ...?

ಈ ಮಾಹಾಶಯರ ಕೃಪಾಕಟಾಕ್ಷಕ್ಕೆ ಈ ಮಹಾಧಿವೇಶನದಲ್ಲಿ ಪಕ್ಷದ ಸಂವಿಧಾನಕ್ಕೆ ತಂದ ತಿದ್ದುಪಡಿಯೊಂದು ಬಿದ್ದಿದೆ. ಬಂಡವಾಳಶಾಹಿ ಮಾಲಿಕನಾದವ ಕಮ್ಯುನಿಸ್ಟ್ ಪಕ್ಷದ ಸದಸ್ಯನಾಗುವಂತಿಲ್ಲ ಎಂಬ ಕಲಮಿಗೆ ತಿದ್ದುಪಡಿ ತಂದಿದ್ದನ್ನು ಮನಬಂದಂತೆ ವಿಶ್ಲೇಷಿಸಲಾಗುತ್ತಿದೆ. ಜಗತ್ತಿನ ಹೆಚ್ಚಿನ ಕಮ್ಯುನಿಸ್ಟ್ ಪಕ್ಷಗಳಲ್ಲಿ ಬಂಡವಾಳಶಾಹಿ ಮಾಲಿಕನಾಗಿರುವ ವ್ಯಕ್ತಿ ಪಕ್ಷದ ಸದಸ್ಯನಾಗಬಾರದು ಎಂಬ ಯಾವುದೇ ನಿಯಮಗಳಿಲ್ಲ. ಕಮ್ಯುನಿಸ್ಟ್ ಪಕ್ಷ ದುಡಿಯುವ ಜನರ ಪಕ್ಷ. ಅವರ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುವ ಪಕ್ಷ. ಅದರೆ ಇತರ ವರ್ಗಗಳ ಸದಸ್ಯರು ಪಕ್ಷದ ಕಾರ್ಯಕ್ರಮ ನೀತಿ, ಸಂಘಟನಾ ನಿಯಮಗಳನ್ನು ಒಪ್ಪಿದರೆ ವ್ಯಕ್ತಿಗತವಾಗಿ ಸದಸ್ಯರಾಗಬಹುದು. ಚೀನಾ ಕಮ್ಯುನಿಸ್ಟ್ ಪಕ್ಷದ ಸಂವಿಧಾನದಲ್ಲಿ ಬಂಡವಾಳಶಾಹಿ ವ್ಯಕ್ತಿ ಸದಸ್ಯನಾಗಬಾರದು ಎಂಬ ಅಂಶ ಸೇರಿದ್ದು 'ಸಾಂಸ್ಕೃತಿಕ ಕ್ರಾಂತಿ' ಎಂಬ ಅವಧಿಯಲ್ಲಿ ಪಕ್ಷ ಹಲವು ಗಂಭೀರ ತಪ್ಪುಗಳನ್ನು ಮಾಡಿದ ಭಾಗವಾಗಿ ಇದನ್ನು ಈಗ ಸರಿಪಡಿಸಲಾಗಿದೆ. ಈ ತಿದ್ದುಪಡಿಯೊಂದಿಗೆ ಚೀನಾದ ಕಮ್ಯುನಿಸ್ಟ್ ಪಕ್ಷ ದುಡಿಯುವವರ ಪಕ್ಷವಾಗಿ ಉಳಿದಿಲ್ಲ. ಅಥವಾ ಬಂಡವಾಳ ಶಾಹಿಗಳ ಪಕ್ಷವಾಗಲಿದೆ ಎಂದು ಬೇಕಾಬಿಟ್ಟಿ ಯಾಗಿ 'ವಿವರಣೆ' ಕೊಡಲಾಗುತ್ತಿದೆ. ಇದು ಕಮ್ಯುನಿಸ್ಟ್ ಪಕ್ಷದ ಸಂಘಟನೆ, ಕಾರ್ಯಕ್ರಮದ ಬಗ್ಗೆ ಅಪರಿಮಿತ ಅಜ್ಞಾನವೂ ಹೌದು. ಆ ಬಗ್ಗೆ ಜನತೆಯಲ್ಲಿ ವಿಕೃತ ಅಭಿಪ್ರಾಯ ಮೂಡಿಸುವ ಪ್ರಯತ್ನವೂ ಹೌದು.

ಪಾರ್ಥಸಾರಥಿಯವರು ಎಲ್ಲರನ್ನು ಮೀರಿಸಿದ್ದಾರೆ.

ಬೂರ್ಜ್ವಾ ಪತ್ರಿಕೆಗಳು, ಅವರ ಬಾಡಿಗೆ ಲೇಖಕರು ಚೀನಾದ ಸಮಾಜವಾದಿ ಆರ್ಥಿಕ ರಾಜಕೀಯ ವ್ಯವಸ್ಥೆ ಬಗ್ಗೆ ವಿಷಕಾರುವುದರ ಕಾರಣ ಬಹಳ ಸುಲಭವಾಗಿ ಅರ್ಥವಾಗುವಂಥದು. ಬಂಡವಾಳಶಾಹಿ ವ್ಯವಸ್ಥೆ ತೀವ್ರ ಬಿಕ್ಕಟ್ಟಿನಲ್ಲಿರುವ ಜಾಗತೀಕರಣದ ವಿರುದ್ಧ ಸಾರ್ವತ್ರಿಕ ಆಕ್ರೋಶದ ಮಧ್ಯದಲ್ಲಿ ಚೀನಾ ಬಲಾಢ್ಯ ದೇಶವಾಗಿ ಸಮಾಜವಾದಿ ದಾರಿಯಲ್ಲಿ ಮುನ್ನಡೆಯುತ್ತಿರುವುದು ಅವರಿಗೆ ನುಂಗಲಾರದ ತುತ್ತಾಗಿದೆ. ಆದರೆ ಸಂಯುಕ್ತ ಕರ್ನಾಟಕದಲ್ಲಿ ನವೆಂಬರ್ 18 ಸಂಚಿಕೆಯಲ್ಲಿ ಚೀನಾದಲ್ಲಿ ಮಹತ್ತರ ಅಧಿಕಾರ 'ವರ್ಗಾವಣೆ ಪ್ರಕ್ರಿಯೆ' ಎಂಬ ಲೇಖನ ಬರೆದಿರುವ ಕೆ.ಎಸ್.ಪಾರ್ಥಸಾರಥಿ ಇವರೆಲ್ಲರನ್ನು ಮೀರಿಸಿದ್ದಾರೆ. ತಾವು ಚೀನಾದ ಪರ, ಸಮಾಜವಾದಿ ವ್ಯವಸ್ಥೆಯ ಪರ ಎನ್ನುತ್ತಲೇ ಚೀನಾದ ರಾಜಕೀಯ ಆರ್ಥಿಕ ವ್ಯವಸ್ಥೆ ಬಗ್ಗೆ ತಮ್ಮ ಅಪಾರ ಅಜ್ಞಾನ ಪ್ರದರ್ಶಿಸಿದ್ದಾರೆ. ಈ ಮೇಲಿನ ಎಲ್ಲಾ ಅಂಶಗಳಲ್ಲಿ ಬೂರ್ಜ್ವಾ ಲೇಖಕರನ್ನು ಖಂಡಿಸುವ ಅವರು ಚೀನಾದ ವ್ಯವಸ್ಥೆಯನ್ನು ಅವರು 'ಬೆಂಬಲಿಸುವ' ವೈಖರಿ ನಡುಕ ಹುಟ್ಟಿಸುವಂಥದು! ಗೊತ್ತಿರುವ ಶತ್ರುಗಳಿಗಿಂತ 'ಹುಂಬ ಮಿತ್ರರು' ಹೆಚ್ಚು ಅಪಾಯಕಾರಿ ಅವರ ಕೆಲವು ಅಣಿಮುತ್ತುಗಳು ಇಲ್ಲವೆ. ಮಾವೋ, ಡೆಂಗ್, ಜಿಯಾಂಗ್ - ಇವರೆಲ್ಲ 'ಕೂಡು ಸಂಸಾರದ ಯಜಮಾನ' (Helmsman)ರಂತೆ. ನಮ್ಮ ಮಠಗಳಲ್ಲಿ ಹಿರಿ ಸ್ವಾಮಿಯು ಕಿರಿ ಸ್ವಾಮಿಗೆ ಪರಂಪರೆಯನ್ನು ಸೂಕ್ಷ್ಮವಾಗಿ ಅಧಿಕಾರ ವರ್ಗಾವಣೆಯ ಪ್ರಕ್ರಿಯೆಯಂತೆ ಎನ್ನುತ್ತಾರೆ ಇವರು. ಬೂರ್ಜ್ವಾ ಟೀಕಾಕಾರ 'ವಿಕೃತಿ'ಯನ್ನೇ ವ್ಯವಸ್ಥೆಯ ಗಟ್ಟಿತನ ಎನ್ನು ಹುಂಬತನ ಇದು. ಈಗಿನ ಪ್ರಧಾನ ಕಾರ್ಯದರ್ಶಿ ಹೊ ರವರನ್ನು ಜಿಯಾಂಗ್ ಉತ್ತರಾಧಿಕಾರಿಯಾಗಿ ಡೆಂಗ್‌ರವರು 1991ರಲ್ಲೇ ಆರಿಸಿದ್ದರು ಎಂಬ ಅಣಿಮುತ್ತ್ತ ನ್ನು ಅವರು ಉದುರಿಸುತ್ತಾರೆ. ಇದೇ ರೀತಿ ಬೂರ್ಜ್ವಾ ಮಾಧ್ಯಮಗಳು ಚೀನಾದ ಬಗ್ಗೆ ಪ್ರತಿಯೊಂದು ಹಸಿ ಸುಳ್ಳನ್ನು ಕಣ್ಣುಮುಚ್ಚಿ ನಂಬಿ, ಅದು ಚೀನಾದ ವ್ಯವಸ್ಥೆಯ ಗಟ್ಟಿತನ ಎಂದು ಹುಂಬವಾದ ಮಾಡುತ್ತಾರೆ. ಇಂತಹ ಕುರುಡು ಬೆಂಬಲಿಗರಿಂದ ಸಮಾಜವಾದಿ


ಅಲ್ಪಸಂಖ್ಯಾತ ಪ್ರತಿನಿಧಿಗಳು

ಚಳುವಳಿಯನ್ನೂ, ಚೀನಾವನ್ನೂ ದೇವರೇ ಕಾಪಾಡಬೇಕು! ಸಾಮ್ರಾಜ್ಯಶಾಹಿ ಮಾಧ್ಯಮಗಳು ಹೆಣೆಯುವ ಸುಳ್ಳಿನ ಸರಮಾಲೆಗಳು ಎಂತೆಂತಹ ವಿಕೃತಿಗಳನ್ನು ಸೃಷಿಸಬಲ್ಲುದು, ಅದರ ವಿರುದ್ಧ ಎಂತಹ ದೀರ್ಘ, ದೃಢ ಹೋರಾಟ ಅಗತ್ಯ ಎಂಬುದನ್ನೂ ತೋರಿಸುತ್ತದೆ. ಒಂದು ರೀತಿಯಲ್ಲಿ ಪಾರ್ಥಸಾರಥಿಯವರ ಲೇಖನವೇ ಈ ಲೇಖನಕ್ಕೆ 'ಸ್ಫೂರ್ತಿ'!

.....ಕೃಷ್ಣ ಸರ್ಕಾರದ ದಶಾವತಾರಗಳು

ಪುಟ 3 ರಿಂದ

ವಿಭಜಿಸಿ, ಮೀಟರೀಕರಣ ಮಾಡಲು ತಂತ್ರವನ್ನು 'ವಿದ್ಯುತ್ ಶುಲ್ಕ ವಸೂಲಿ ಗ್ರಾಮ ಪಂಚಾಯತಿಗಳಿಗೆ ಉತ್ತಮ ಕಮಿಷನ್ ಮತ್ತು ಗುಣಮಟ್ಟದ ವಿದ್ಯುತ್‌ನ್ನು ನೀಡುವುದಾಗಿ ಪಂಚಾಯತಿಗಳುನ್ನು ನಂಬಿಸಿ, ಒಪ್ಪಂದಗಳನ್ನು ಮಾಡಿದ್ದಾರೆ. ವಸೂಲಿಯಲ್ಲಿ ಕಮಿಷನ್ ಉತ್ತಮ ಗುಣಮಟ್ಟದ ವಿದ್ಯುತ್ ಸೇವೆ, ಇತ್ಯಾದಿ ಅಂಶಗಳಿದ್ದರೂ ಸಾಧ್ಯವಿಲ್ಲದ

ಒಪ್ಪಂದದ ಮುಖ್ಯ ಅಂಶಗಳಾಗಿ ಇದರಲ್ಲಿ ಮೀಟರೀಕರಣಕ್ಕೂ ಗ್ರಾಮ ಪಂಚಾಯತಿಗಳು ಕೆಲಸ ಮಾಡಬೇಕೆಂಬ ಅಂಶವನ್ನು ಸಹ ಸೇರಿಸಿದ್ದಾರೆ. ಪಂಚಾಯತಿಗೆ ಉತ್ತಮ ಗುಣ ಮಟ್ಟದ ವಿದ್ಯುತ್, ಸಾವಿರಾರು ರೂಗಳ ಕಮಿಷನ್ ಸಿಗುವುದೆಂಬ ಆಸೆ ತೋರಿಸಿ ಒಪ್ಪಂದಗಳನ್ನು ಮಾಡಿದ್ದರೂ ಸರ್ಕಾರದ ನಿಜವಾದ ಉದ್ದೇಶ ಮೀಟರೀಕರಣ ಮಾಡುವುದೇ. ಮೀಟರೀಕರಣ ಮಾಡಲು ಸರ್ಕಾರ ಎತ್ತಿರುವ ದಶಾವತಾರಗಳಲ್ಲಿ ಇದು ಒಂದು ಅವಾಂತರ.

ಸರ್ಕಾರದ ಈ ತಂತ್ರವನ್ನು ಅರಿತು, ದೊಡ್ಡಬಳ್ಳಾಪುರ ತಾಲೂಕಿನ ಕೊನೆಘಟ್ಟ ಗ್ರಾಮ ಪಂಚಾಯತಿ ರೈತರು, ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ನಾಯಕತ್ವದಲ್ಲಿ ಪಕ್ಷಾತೀತವಾದ ನೀರಾವರಿ ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿಗಳನ್ನು ರಚಿಸಿಕೊಂಡು ವ್ಯಾಪಕ ಪ್ರತಿರೋಧವನ್ನು ಒಡ್ಡಲಾಗಿರುವುದರಿಂದ ಈ ಒಪ್ಪಂದವನ್ನು ಕೈಬಿಡುವುದಾಗಿ ಪಂಚಾಯತಿಯು ನಿರ್ಧರಿಸಿದೆ. ಇದರ ಫಲವಾಗಿ ತನ್ನ ತಂತ್ರ ಫಲಿಸದ ಕಾರಣ ರಾಜ್ಯ ಸರ್ಕಾರ ಹೊಸ ಅವತಾರವನ್ನು ಎತ್ತಲು ಯೋಜಿಸುತ್ತಿರಬಹುದು.

ಆಳುವ ರಾಜಕೀಯ ಪಕ್ಷಗಳ ಐಕ್ಯತೆಯ ವಿರುದ್ಧ ದುಡಿಯುವ ರೈತಾಪಿ ಜನರ ಐಕ್ಯತೆ ಕಟ್ಟುವುದು ಇವತ್ತಿನ ತುರ್ತು ಅಗತ್ಯ!

ವಿದ್ಯುತ್ ದರ ಏರಿಕೆ, ಮೀಟರೀಕರಣ ಮತ್ತು ಖಾಸಗೀಕರಣದ ವಿಷಯದಲ್ಲಿ ದೆಹಲಿಯಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ವಾಜಪೇಯಿ ಯಡಿಯೂರಪ್ಪ ಮತ್ತು ಸೋನಿಯಾಗಾಂಧಿ ರಾಜ್ಯ ಎಸ್.ಎಂ.ಕೃಷ್ಣ ಒಂದಾಗಿದ್ದಾರೆ.

ಆಮದು ನೀತಿ, ಜಾಗತೀಕರಣ ನೀತಿಗಳಿಂದ ಕೃಷಿ ರಂಗವೇ ಬಿಕ್ಕಟ್ಟಿಗೆ ಸಿಲುಕಿ ರೈತ ಕುಲವೇ ನಾಶವಾಗುತ್ತಿರುವ ಈ ಗಂಭೀರ ಸನ್ನಿವೇಶದಲ್ಲಿ ರೈತರು, ಜಾತಿ, ಮತ, ಮುಖ್ಯವಾಗಿ ಪಕ್ಷ ರಾಜಕೀಯಗಳನ್ನು ಬದಿಗೊತ್ತಿ ವಿಶಾಲವಾದ ಹೋರಾಟದತ್ತ ಮುನ್ನಡೆಯುತ್ತಿರುವುದು ಅತ್ಯಂತ ಮಹತ್ವದ ಬೆಳವಣಿಗೆಯಾಗಿದೆ. ದಶಕಗಳಿಂದ ಪ್ರಜಾಸತ್ತಾತ್ಮಕ ಶಕ್ತಿಗಳು ನಿರೀಕ್ಷಿಸುತ್ತಿದ್ದ ಚಳುವಳಿಗಳಿಗೆ ಅನುಕೂಲಕರವಾದ, ಪರಿಸ್ಥಿತಿ ಯನ್ನು ಉಪಯೋಗಿಸಿ ರೈತ ಕಾರ್ಯಕರ್ತರು ಮುನ್ನಡೆಯಬೇಕಿದೆ. ನಮ್ಮ ಘೋಷಣೆಗಳು, ರೈತರನ್ನು ಮುನ್ನಡೆಸುವ ಘೋಷಣೆಗಳಾಗಿ ಮಾರ್ಪಡಿಸುತ್ತಿರುವ ಈ ಹೊಸ ಸನ್ನಿವೇಶದಲ್ಲಿ ಹೊಸ ತಿಳುವಳಿಕೆ ಉತ್ಸಹದೊಂದಿಗೆ ಕೆಲಸ ಮಾಡಿ, ರೈತರ ವಿಶ್ವಾಸವನ್ನು ಗಳಿಸಿ, ನಿಜವಾದ ರೈತ ಚಳುವಳಿಯನ್ನು ಕಟ್ಟಬೇಕಿದೆ. ಕೆಳಮಟ್ಟದ ಹೋರಾಟಗಳ ಮೂಲಕ ಮೂಡಿಬರುವ ವಿಶಾಲ ಐಕ್ಯತೆ ಮಾತ್ರವೇ (ಆಳುವ ರಾಜಕೀಯ ಪಕ್ಷಗಳಲ್ಲಿ) ವಿನಾಶಕಾರಿ ನೀತಿಗಳ ಆಧಾರದಲ್ಲಿ ಮೂಡಿಬಂದಿರುವ ಐಕ್ಯತೆಯನ್ನು ಬಯಲು ಮಾಡಲು ಮತ್ತು ಹಿಮ್ಮೆಟ್ಟಿಸಲು ಸಾಧ್ಯ.

ಈ ದಿಸೆಯಲ್ಲಿ ರೈತ ಸಮುದಾಯದ ಚಾಲನೆಯನ್ನು ಗುರ್ತಿಸಿ ಮುನ್ನಡೆಯಾಗೋಣ.

ಐಕ್ಯರಂಗ

ದಾನಗಳಿಂದ ಸೂಪರ್ ಲಾಭಕ್ಕೆ ಗೇಟ್ ತೆರೆಯುವ ಯತ್ನ

ಮಾಹಿತಿ ತಂತ್ರಜ್ಞಾನದ ಮಹಾದೈತ್ಯ ಬಿಲ್‌ಗೇಟ್ ಭಾರತಕ್ಕೆ ಬಂದುಹೋದ. ಆತನಿಗೆ ಎಲ್ಲರೂ ಜೈ ಪರಾಕು ಹಾಕುವವರೇ! ಆತನ ದಾನಶೂರ ಗುಣಗಾನ ಮಾಡುವವರೇ! ಈ ದಾನದ ಒಪ್ಪಂದ ಕರಾಳ ಭವಿಷ್ಯವನ್ನೇ ರೂಪಿಸಲಿದೆ. ಮೇಲಾಗಿ ಈ ಅಮೆರಿಕಾದ ಹಣದಾಹಿ ಪಿಶಾಚಿ 'ಏಡ್ಸ್ ನಿವಾರಕ ಯೋಜನೆ'ಗೂ ಕೈಯಿಟ್ಟಿದೆ. ಅದೇನಿದು ಪಿತೂರಿ? ಇಲ್ಲಿ ಓದಿ



ಬಿಲ್‌ಗೇಟ್ಸ್ ದಾನ ಮಾಡಲಿದ್ದಾನೆ! ಹುಶಾರ್ ಹುಶಾರ್ !!

ಬಿಲ್‌ಗೇಟ್ಸ್ ಜಗತ್ತಿನ ನಂಬರ್ ಒನ್ ಶ್ರೀಮಂತ. ಇತ್ತೀಚೆಗೆ ಭಾರತಕ್ಕೆ ಬಂದು ಸುದ್ದಿ ಮಾಡಿದ್ದ. ನಮ್ಮ ದೇಶದ ಏಡ್ಸ್ ಮತ್ತು ಕಂಪ್ಯೂಟರ್ ಶಿಕ್ಷಣಕ್ಕೆ ಹಲವು ದೊಡ್ಡ ದಾನಗಳನ್ನು ಮಾಡಿದ. ಅಧ್ಯಕ್ಷರು, ಪ್ರಧಾನಿಗಳಿಂದ ಹಿಡಿದು ಎಲ್ಲರೂ ಗೇಟ್ಸ್‌ಗೆ ಬಹುಪರಾಕು ಹೇಳುವವರೆ. ಅದೇ ಸಮಯದಲ್ಲಿ ಇನ್ನೊಂದು ಧ್ರುವ ಎನ್ನಬಹುದಾದ ರಿಚರ್ಡ್ ಸ್ಟಾಲ್‌ಮನ್ ದೆಹಲಿಯ ಸಮಾರಂಭವೊಂದರಲ್ಲಿ ಹೇಳಿದರು. 'ಬಿಲ್‌ಗೇಟ್ಸ್ ದಾನಗಳಿಂದ ಹುಶಾರ್! ಈತ ಯಾರಪ್ಪ ಎಂದಿರಾ? ಈತ ಕಂಪ್ಯೂಟರ್ ತಜ್ಞ ಮತ್ತು 'ಮುಕ್ತ ಸಾಫ್ಟ್‌ವೇರ್ ಪ್ರತಿಷ್ಠಾನ'ದ ಅಧ್ಯಕ್ಷ. ಜಗತ್ತಿನಾದ್ಯಂತ ಈಗ ಬೆಳೆಯುತ್ತಿರುವ 'ಮುಕ್ತ ಸಾಫ್ಟ್‌ವೇರ್ ಚಳುವಳಿ'ಯ ಪ್ರವರ್ತಕ. ದೆಹಲಿಗೆ ಬಂದಿದ್ದು ಪ್ರಜಾಶಕ್ತಿ ಪ್ರಕಾಶನ ಪ್ರಕಟಿಸಿದ ಆತನ ಪುಸ್ತಕ 'ಬೇಡ ಸಾರ್, ಬೇಡ ಏಕಸ್ವಾಮ್ಯ, ಮುಕ್ತ ಸಾಫ್ಟ್‌ವೇರ್' ಬಿಡುಗಡೆಗೆ. ಆ ಸಮಾರಂಭದಲ್ಲಿ ಮಾಡನಾಡುತ್ತಾ ಬಿಲ್‌ಗೇಡ್ಸ್ ದಾನಗಳು ಸೂಪರ್ ಲಾಭಕ್ಕೆ 'ಗೇಟ್ ತೆರೆಯುವ ಪ್ರಯತ್ನ ಎಂದ. ಕಂಪ್ಯೂಟರ್ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ತನ್ನ ಏಕಸ್ವಾಮ್ಯ ಉಳಿಸಿಕೊಳ್ಳುವ, ಅದನ್ನು ಇನ್ನಷ್ಟು ಬೆಳೆಸುವ ಹುನ್ನಾರ ಈ ದಾನಗಳ ಹಿಂದಿದೆ ಎಂದ.

ಬಿಲ್‌ಗೇಟ್ಸ್ ಎರಡು ಪ್ರಮುಖ ದಾನಗಳನ್ನು ಮಾಡಿದ. ಒಂದು ಕಂಪ್ಯೂಟರ್ ಶಿಕ್ಷಣ ಪ್ರಾಜೆಕ್ಟ್‌ಗಳಿಗೆ ಇನ್ನೊಂದು ಏಡ್ಸ್ - ತಡೆ ಕಾರ್ಯಕ್ರಮಕ್ಕೆ. ಎರಡರ ಹಿಂದೆಯೂ ಇನ್ನಷ್ಟು ಸೂಪರ್ ಲಾಭ ಮಾಡುವ ಹುನ್ನಾರ ಇದೆ. ಕಂಪ್ಯೂಟರ್ ಶಿಕ್ಷಣ ಪ್ರಾಜೆಕ್ಟ್ ದಾನದ ಹಿಂದೆ ಮೈಕ್ರೊಸಾಫ್ಟ್ ಸಾಫ್ಟ್‌ವೇರ್ (ವಿಂಡೊಸ್, ವರ್ಡ್ ಇತ್ಯಾದಿ)ನಿಂದಲೇ ಮಕ್ಕಳು ಕಂಪ್ಯೂಟರ್ ಕಲಿತರೆ, ಅದೇ ಸಾಫ್ಟ್‌ವೇರ್ ಎಂದು ತಿಳಿದು ಮೈಕ್ರೋಸಾಫ್ಟ್ 'ಏಕಸ್ವಾಮ್ಯ' ಗಟ್ಟಿಗೊಳಿಸುವ ಪ್ರಯತ್ನ. ಮಕ್ಕಳಿಗೆ ಸಿಗರೇಟ್ ಬಿಟ್ಟಿಯಾಗಿ ಸೇದಲು ಕಲಿಸಿ, ಆಮೇಲೆ ಜೀವನವಿಡಿ ಸಿಗರೇಟ್ ಕೊಳ್ಳುವಂತೆ ಮಾಡುವ ಪ್ರಯತ್ನದಂತೆ ಇದು ಅಂತ ಕೆಲವರ ಅಭಿಪ್ರಾಯ. ಈ ದಾನದ ಹಿಂದೆ ಈ ಪ್ರಾಜೆಕ್ಟ್‌ನಲ್ಲಿ ಮೈಕ್ರೋಸಾಫ್ಟ್ ಅಲ್ಲದೆ ಬೇರೆ ಯಾವುದೇ ಸಾಫ್ಟ್‌ವೇರ್ ಕೊಳ್ಳಬಾರದು ಎಂಬ ಷರತ್ತಿದೆ. ಒಂದು ಬಾರಿ ಮೈಕ್ರೋಸಾಫ್ಟ್ ಸಾಫ್ಟ್‌ವೇರ್ ಬಳಸಿದ ಮೇಲೆ ಜೀವನವಿಡೀ ಅವರ ಹೊಸ ಸಾಫ್ಟ್‌ವೇರ್‌ಗಳನ್ನೇ ಬಳಸುವಂತೆ ಮಾಡುವ ಕಮರ್ಶಿಯಲ್ ಸೂತ್ರಗಳು ಗೇಟ್ಸ್ ಬಳಿ ಇದೆ. ಪ್ರತಿ ಒಂದುವರೆ-ಎರಡು ವರ್ಷಗಳಿಗೊಮ್ಮೆ 'ಹೊಸ ಮಾಡೆಲ್' ತಂದು ಹಳೆಯದನ್ನು ಕೈಬಿಟ್ಟು ಹೊಸದು ಕೊಳ್ಳುವಂತೆ ಮಾಡಲಾಗುತ್ತದೆ.

ಇನ್ನೊಂದು ಕಾರಣ ಶಿಕ್ಷಣ ಕ್ಷೇತ್ರದಲ್ಲಿ 'ಮುಕ್ತ ಸಾಫ್ಟ್‌ವೇರ್ ಚಳುವಳಿ' ವ್ಯಾಪಕವಾಗಿ ಹರಡುತ್ತಿದೆ. ಆಫ್ರಿಕಾದ ದಕ್ಷಿಣ ಅಮೇರಿಕಾದ ಹಲವು ದೇಶಗಳಲ್ಲಿ (ಉದಾ: ನಮೀಬಿಯಾ, ಪೆರು) ಲಿನಕ್ಸ್' ಎಂಬ ಮುಕ್ತ ಸಾಫ್ಟ್‌ವೇರ್ ಆಧಾರಿತ ಕಂಪ್ಯೂಟರ್ ಶಿಕ್ಷಣ ಪ್ರಾಜೆಕ್ಟ್‌ಗಳು ಸಫಲವಾಗಿ ಜಾರಿಯಲ್ಲಿವೆ. ಭಾರತದಲ್ಲೂ ಕೆಲವು ರಾಜ್ಯಗಳು ಈ ದಿಕ್ಕಿನಲ್ಲಿ ಸಾಗಿವೆ. ಕಮರ್ಶಿಯಲ್ ಕ್ಷೇತ್ರದಲ್ಲೂ 'ಲಿನಕ್ಸ್' ಜನಪ್ರಿಯವಾಗಿ, ಮೈಕ್ರೋಸಾಫ್ಟ್‌ನ ಏಕಸ್ವಾಮ್ಯಕ್ಕೆ ಸವಾಲಾಗಿದೆ. ಬಿಲ್‌ಗೇಟ್ಸ್ ದಾನಗಳ ಹಿಂದೆ ಹೀಗೆ, ಇರುವುದು ಏಕಸ್ವಾಮ್ಯ ಬಳಸಿಕೊಂಡು ಇನ್ನಷ್ಟು ಲಾಭಗೊಳಿಸುವ ಹುನ್ನಾರವಷ್ಟೆ. ಎಳ್ಳಷ್ಟು ಶಿಕ್ಷಣಕ್ಕೆ ಪ್ರೋತ್ಸಾಹ ಕೊಡುವ ಉದ್ದೇಶವಿಲ್ಲ.

ಶಿಕ್ಷಣ ಕ್ಷೇತ್ರದಲ್ಲಿ ಗೇಟ್ಸ್ ದಾನದ ಹುನ್ನಾರ ಕೆಲವರಿಗಾದರೂ ಅರ್ಥವಾಗುವಂತದ್ದು. ಆದರೆ ಏಡ್ಸ್-ತಡೆ ಕಾರ್ಯಕ್ರಮಗಳ ಹಿಂದಿನ ಹುನ್ನಾರ ಇನ್ನಷ್ಟು ನಿಗೂಡವಾದದ್ದು. ಇದು ಹಲವರಿಗೆ ಅರ್ಥವಾಗದ್ದು. ಬಹಳ ಜನರಿಗೆ ಬಿಲ್‌ಗೇಟ್ಸ್ ಔಷಧಿ ಕಂಪನಿಗಳಲ್ಲಿ ಕೋಟ್ಯಾಂತರ ಡಾಲರ್ ತೊಡಗಿಸಿದ್ದಾನೆ ಎಂದು ಗೊತ್ತಿಲ್ಲ. ಅವುಗಳಲ್ಲಿ ಏಡ್ಸ್-ನಿರೋಧಕ ಚುಚ್ಚುಮದ್ದು ಮಾಡುವ ಕಂಪನಿಗಳೂ ಇವೆ. ಅವುಗಳಿಗೆ ಈ ಚುಚ್ಚುಮದ್ದುಗಳನ್ನು 'ಪರೀಕ್ಷಣ'ಗೊಳಿಸಲು ಅವಕಾಶ ಬೇಕು. ಏಡ್ಸ್-ದಾನದ ಮೂಲಕ ಈ ಅವಕಾಶ ಸಿಗುತ್ತದೆ. ಯಥಾಪ್ರಕಾರ ಈ ಪ್ರಾಜೆಕ್ಟ್‌ಗಳಲ್ಲೂ ನಿರ್ದಿಷ್ಟ ಕಂಪನಿಗಳಿಂದ (ಇವು ಗೇಟ್ಸ್ ಹಣ ತೊಡಗಿಸಿರುವ ಕಂಪನಿಗಳು ಎಂದು ಬೇರೆ ಹೇಳಬೇಕಾಗಿಲ್ಲವಲ್ಲ) ಔಷಧಿ ಕೊಂಡುಕೊಳ್ಳಬೇಕು ಎಂದು ಶರತ್ತು ಇದೆ. ಈ ಹುನ್ನಾರದಲ್ಲಿ ಬಿಲ್‌ಗೇಟ್ಸ್ ಮಾತ್ರವಲ್ಲ ಅಮೇರಿಕನ್ ಸರ್ಕಾರದ ಎಲ್ಲಾ ವಿಭಾಗಗಳು ಭಾಗಿಯಾಗಿವೆ. 'ಜಾಕ್ ಇಂಡಿಯಾ' ಎಂಬ ಸ್ವಯಂ-ಸೇವಾ ಸಂಸ್ಥೆ ಇದನ್ನು ಬಯಲುಪಡಿಸಿದೆ.

ಈ ಏಡ್ಸ್-ನಿವಾರಕ ಯೋಜನೆಗೆ ರಂಗ ಸಿದ್ಧಪಡಿಸಲು ಸಿಐಎ ಮತ್ತು ಅವರ ಹಲವು ಅಂಗಸಂಸ್ಥೆಗಳು ಭಾರತದಲ್ಲಿ ಏಡ್ಸ್ ಸಮಸ್ಯೆಯನ್ನು ಅತಿರಂಚಿತಗೊಳಿಸಿವೆ ಎಂದು ಈ ಸಂಸ್ಥೆ ಹೇಳಿದೆ. ಸರ್ಕಾರದ ಏಡ್ಸ್ ನಿಯಂತ್ರಣ ಸಂಘಟನೆಯ ಪ್ರಕಾರ 38-6 ಲಕ್ಷ ಏಡ್ಸ್ ಪೀಡಿತರಿದ್ದಾರೆ. ಸಿಐಎ ಸಿದ್ಧಪಡಿಸಿದ ವರದಿ ಪ್ರಕಾರ ಇದರ ಇಮ್ಮಡಿ. ಅಲ್ಲದೆ 2010 ರ ಹೊತ್ತಿಗೆ ಇದು ಎರಡುವರೆ ಕೋಟಿ ದಾಟಲಿದೆ. ಎಲ್ಲಾ ಸ್ವತಂತ್ರ ವೀಕ್ಷಕರು ಇದು 'ಅತಿರಂಜಕ' ಎಂದಿದ್ದಾರೆ. ಇದೇ ರೀತಿ 1999ರಲ್ಲಿ ಸಿಐಎ ವರದಿ ಪ್ರಕಾರ ಮೂರು ಲಕ್ಷ ಜನ ಏಡ್ಸ್‌ನಿಂದ ಸತ್ತಿದ್ದಾರೆ. ಭಾರತ ಸರ್ಕಾರದ ಅಂಕಿಸಂಖ್ಯೆಗಳ ಪ್ರಕಾರ 114. ಭಾರತ ಸರ್ಕಾರದ ಅಂಕೆಸಂಖ್ಯೆಗಳು ತಪ್ಪಬಹುದಾದರೂ, ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಸರ್ಕಾರೇತರ ಸಂಸ್ಥೇಗಳು ಸಿಐಎ ಯದ್ದು 'ಅತಿರಂಜಕ' ವರದಿ ಎಂದಿದ್ದಾರೆ. ಸಿಐಎಯ ಅಂಗಸಂಸ್ಥೆ, ಗೇಟ್ಸ್‌ನ ಕಂಪನಿಗಳು, ಭಾರತದ ಕೆಲವು ಸ್ವಯಂ-ಸೇವಾ ಸಂಸ್ಥೆಗಳು, ಕೇಂದ್ರ ಸರ್ಕಾರದ ಔಷಧಿ ವಿಭಾಗದ ಕೆಲವು ಅಧಿಕಾರಿಗಳು - ಈ ಪಿತೂರಿಯಲ್ಲಿ ಶಾಮೀಲಾಗಿದ್ದಾರೆ ಎಂದು 'ಜಾಕ್-ಇಂಡಿಯಾ' ಆಪಾದಿಸಿದೆ.

ಹೀಗಿದೆ ಜಗತ್ತಿನ ನಂಬರ್ 1 ಶ್ರೀಮಂತನ ದಾನದ ವೈಖರಿ

ಸೂಪರ್ ಲಾಭಕ್ಕೆ 'ಗೇಟ್' ತೆರೆಯುವ ಇಂತಹ ದಾನಗಳಿಂದ ಹುಶಾರ್!

ಬೆಂಗಳೂರಿನಲ್ಲಿ 'ಕೈರಳಿ' ಉತ್ಸವ

ಮಲೆಯಾಳಂನ ಖ್ಯಾತ ಟಿ.ವಿ.ಚಾನಲ್ 'ಕೈರಳಿ' ಬೆಂಗಳೂರಿನ ಟೌನ್ ಹಾಲ್‌ನಲ್ಲಿ ನವೆಂಬರ್ 27 ರಿಂದ ಡಿಸೆಂಬರ್ 1 ರವರೆಗೆ ಉತ್ಸವ ಆಚರಿಸುತ್ತಿದೆ. ಇದಕ್ಕೆ ಮುಕ್ತ ಆಹ್ವಾನವಿದ್ದು ನೀವು ಭಾಗವಹಿಸಬಹುದಾಗಿದೆ.

ವಿಶೇಷವಾಗಿ ಮಹಿಳೆಯರಿಗಾಗಿ 'ಭಾಗ್ಯಲಕ್ಷ್ಮಿ' ಎಂಬ ಕಾರ್ಯಕ್ರಮದ ಜೊತೆಗೆ ಹಲವು ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಹಲವು ರಸಪ್ರಶ್ನೆಗಳ ಕಾರ್ಯಕ್ರಮವಿದ್ದು ವಿಜೇತರಾದವರಿಗೆ ಬಹುಮಾನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ 'ಕೈರಳಿ' ಚಾನಲ್‌ನಲ್ಲಿ ಪ್ರಸಾರವಾಗುವ 'ಭಾಗ್ಯಲಕ್ಷ್ಮಿ' ಕಾರ್ಯಕ್ರಮ ವೀಕ್ಷಿಸಿ.

ಕಾರ್ಯಕ್ರಮಗಳು

ನವೆಂಬರ್ 27 ಮಧ್ಯಾಹ್ನ 2 ಗಂಟೆಗೆ 'ಭಾಗ್ಯಲಕ್ಷ್ಮಿ' ಟೌನ್‌ಹಾಲ್
ನವೆಂಬರ್ 28 ಬೆಳಿಗ್ಗೆ 10 ಕ್ಕೆ 'ಅಶ್ವಮೇದಮ್' ಟೌನ್‌ಹಾಲ್
ನವೆಂಬರ್ 29 ಮಧ್ಯಾಹ್ನ 2 ಕ್ಕೆ 'ಗಂದರ್ವ ಪ್ರಶಸ್ತಿ' ಟೌನ್‌ಹಾಲ್
ನವೆಂಬರ್ 30 ಮಧ್ಯಾಹ್ನ 2 ಸಾಮೂಹ್ಯ ಪದಂ, ಕೈರಳಿ ನಿಲಯ ಶಾಲೆ ವಿಮಾನಪುರ
ಡಿಸೆಂಬರ್ 1 ಸಂಜೆ 6 ಕ್ಕೆ 'ಮೇಘ' ಸೆಂಟ್‌ಜೋಸೆಫ್ ಬಾಲಕರ ಹೈಸ್ಕೂಲ್ ಮೈದಾನ, ಎಂ.ಜಿ.ರಸ್ತೆ.

ಸಾದರ ಸ್ವೀಕಾರ

• ಅಂಧಶ್ರದ್ಧೆಗೆ ಎದುರಾಗಿ ವಿಜ್ಞಾನ	ಎಸ್.ಜಿ.ಸರ್ದೇಸಾಯಿ	ರೂ. 18.00
• ದಾರ್ಶನಿಕ ಸಂಘರ್ಷ ಮತ್ತು ಅದರ ಸಾಮಾಜಿಕ ಮಹತ್ವ	ಎಸ್.ಜಿ.ಸರ್ದೇಸಾಯಿ	ರೂ. 30.00
• ನಮ್ಮ ಶರೀರ 200 ಪ್ರಶ್ನೆಗಳು	ಡಾ. ಸಿ.ಆರ್.ಚಂದ್ರಶೇಖರ್	ರೂ. 45.00
• ಗುರುಗಳಾಗಿ ತಾಯಿ-ತಂದೆ	ಕೆ.ಟಿ.ಗಟ್ಟಿ	ರೂ. 110.00
• ಯಶವಂತನ ಯಶೋಗೀತ	ಡಾ. ಆರ್.ವಿ.ಭಂಡಾರಿ	ರೂ. 50.00
• ಜಾಗತೀಕರಣ	ಎಂ.ಮಹೇಶ್	ರೂ. 95.00
• ನಾಯಿಬಾಲ	ಪ್ರೊ. ವೇಣುಗೋಪಾಲ	ರೂ. 35.00
• ಮಡದಿ ಮತ್ತೊಬ್ಬ ಚಲುವಗೆ	ಡಾ. ಮೀನಗುಂಡಿ ಸುಬ್ರಮಣ್ಯ	ರೂ. 50.00
• ಬಾಳೆಹಣ್ಣು ಮತ್ತು ಬ್ಲಡ್ ಪ್ರಶರ್	ಡಾ. ಸ.ಜ.ನಾಗರೊಟಿಮಠ	ರೂ. 40.00
• ರಸರುಚಿ	ವಿಮಲಾ ಶೇಷಾದ್ರಿ	ರೂ. 25.00
• ನಿತ್ಯ ಜೀವನದಲ್ಲಿ ಕಾನೂನು	ಎಸ್.ಆರ್.ಗೌತಮ್	ರೂ. 60.00
• ವೈಜ್ಞಾನಿಕತೆ	ಪ್ರೊ. ಜೆ.ಆರ್.ಲಕ್ಷ್ಮಣರಾವ್	ರೂ. 28.00

ಪ್ರಕಾಶಕರು:
ನವಕರ್ನಾಟಕ ಪಬ್ಲಿಕೇಷನ್ ಪ್ರೈ. ಲಿ.
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 560 001

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH